

ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

22 ಜುಲೈ 2015 ಪುಟ 20 ರೂ. 15/-

ವಾಲ್ಮೀಕಿ ಪ್ರಕಾರ ರಾಮ ದೇವರಲ್ಲ






ದಾಳಿ ಮಾಡಲಿದ್ದಾನೆ ಬಾಹುಬಲಿ



ಐವರು ಮೇಯರುಗಳು ದೋಚಿದ್ದು 19 ಸಹಸ್ರ ಕೋಟಿ

ಮಂಡ್ಯ

ಕೆಬ್ಬಳ್ಳಿ ಆನಂದನ ಖದರ್ ಶುರು!




ರೈ ದರ್ಬಾರಲ್ಲಿ ವರ್ಗಾವಣೆ ಸುಗ್ಗಿ!!

ಕೊಡಗು

ಚೆಡ್ಡಿಗಳ ತಲೆಕೆಟ್ಟ ಆರ್ಭಟ


ಸಕ್ಕರೆ ಬಿಕ್ಕಟ್ಟು-2 ಅಸಲೀ ಸತ್ಯವನ್ನು ಮುಚ್ಚಿಡುತ್ತಿರುವ ಸರ್ಕಾರಗಳ



ಕಳೆದ ವಾರ ಈ ಅಂಕಣದಲ್ಲಿ ಐದು ಪ್ರಶ್ನೆಗಳನ್ನು ಹಾಕಿಕೊಳ್ಳಲಾಗಿತ್ತು. ರಾಜ್ಯ ಸರ್ಕಾರವು ಕಬ್ಬು ಬೆಳೆಗಾರರ ಹಿತದೃಷ್ಟಿಯಿಂದ ಮಾಡಬೇಕಾದ್ದೆಲ್ಲವನ್ನೂ ಮಾಡುತ್ತಿದೆಯೇ? ಕೇಂದ್ರ ಸರ್ಕಾರವು ಕಬ್ಬು ಬೆಳೆಗಾರರ ಹಿತದೃಷ್ಟಿಯಿಂದ ಮಾಡಬಹುದಾದದ್ದೆಲ್ಲವನ್ನೂ ಮಾಡಿದೆಯೇ? ಕಾರ್ಖಾನೆಗಳು ನಿಜಕ್ಕೂ ನಷ್ಟದಲ್ಲಿವೆಯೇ, ಕಾರ್ಖಾನೆಗಳ ಸಂಘ ಹೇಳುತ್ತಿರುವ ಹಾಗೆ ಸರ್ಕಾರವು 30 ಲಕ್ಷ ಟನ್ ಕೊಂಡುಕೊಂಡರೆ ಸಮಸ್ಯೆ ಸದ್ಯಕ್ಕೆ ಬಗೆಹರಿಯುತ್ತದೆಯೇ? ಅಥವಾ ಕಬ್ಬು ಉತ್ಪಾದನೆ ಹೆಚ್ಚಳ ಮತ್ತು ಸಕ್ಕರೆ ಬೆಲೆ ಕುಸಿತದ ಆವರ್ತ 4-5 ವರ್ಷಗಳಿಗೊಮ್ಮೆ ಬರಲಿದ್ದು ಈ ಬಿಕ್ಕಟ್ಟು ಮುಂದಿನ ವರ್ಷಕ್ಕೆ 'ಸಹಜವಾಗಿ' ಬಗೆಹರಿಯಲಿದೆಯೇ? ಕಾರ್ಖಾನೆಗಳು ಸಿಕ್ಕಾಪಟ್ಟೆ ನಷ್ಟದಲ್ಲಿವೆ ಎಂದು ಹೇಳುತ್ತಿರುವಾಗಲೇ ಕರ್ನಾಟಕವೊಂದರಲ್ಲೇ ಇನ್ನೂ 40 ಹೊಸ ಕಾರ್ಖಾನೆಗಳನ್ನು ಸ್ಥಾಪಿಸಲು ಹೊರಟಿರುವುದರ ಹಿಂದಿನ ಅಸಲೀಯತ್ತೇನು? ಇವು ಆ ಪ್ರಶ್ನೆಗಳು. ಇವುಗಳ ಜೊತೆಗೆ ಸಾರ್ವತ್ರಿಕವಾಗಿ ಹೇಳಲಾಗುತ್ತಿರುವ ಇನ್ನೊಂದು ಅಂಶವನ್ನೂ ಗಣನೆಗೆ ತೆಗೆದುಕೊಳ್ಳಬೇಕು. ಎಲ್ಲಕ್ಕೂ ಮೂಲಕಾರಣ ನಮ್ಮ ರೈತರೇ. ಅವರು ಕಬ್ಬನ್ನು ಇಷ್ಟೊಂದು ಪ್ರಮಾಣದಲ್ಲಿ ಏಕೆ ಬೆಳೆಯಬೇಕು? ಹೆಚ್ಚಿದ ಉತ್ಪಾದನೆಯೇ ಇದಕ್ಕೆ ಕಾರಣವಲ್ಲವೇ?

ಮಿಕ್ಕ ಪ್ರಶ್ನೆಗಳಿಗೆ ಹೋಗುವ ಮುನ್ನ, ಕಾರ್ಖಾನೆಗಳು ಮುಂದಿಟ್ಟಿರುವ ಒಂದು ಬೇಡಿಕೆಯನ್ನು ಗಮನಿಸೋಣ. ಇಸ್ಮಾ (Indian Sugar Mills Association) ಹೇಳುತ್ತಿದೆ, 'ಸರ್ಕಾರವು ಈಗಾಗಲೇ ಘೋಷಿಸಿರುವ 'ನೆರವಿನ' ಕ್ರಮಗಳಿಂದ ಅಂತಹ ಪ್ರಯೋಜನವಿಲ್ಲ, ಬದಲಿಗೆ ಸರ್ಕಾರವು ಕಳೆದ ವರ್ಷ ಮತ್ತು ಈ ವರ್ಷದ ಹೆಚ್ಚುವರಿ ಉತ್ಪಾದನೆಯಲ್ಲಿ 30 ಲಕ್ಷ ಟನ್‌ಗಳನ್ನು ಕೊಂಡುಕೊಳ್ಳಬೇಕು ಮತ್ತು ಅದನ್ನು ಮಾರುಕಟ್ಟೆಗೆ ಬಿಡಬಾರದು. ಬದಲಿಗೆ 'ಬಫರ್' ಆಗಿ ಸಂಗ್ರಹಿಸಿಟ್ಟುಕೊಂಡರೆ, ಮಾರುಕಟ್ಟೆಯಲ್ಲಿ ಸಕ್ಕರೆಯ ಬೆಲೆ ಏರುತ್ತದೆ. ಅದರಿಂದ ನಮ್ಮ ಸಕ್ಕರೆ ಮಾರಾಟವಾಗಿ, ಹೆಚ್ಚು ಲಾಭ ಸಿಗುತ್ತದೆ. ರೈತರಿಗೂ ಹಣ ನೀಡುತ್ತೇವೆ' ಎಂದು. ಕಳೆದ ವರ್ಷದಲ್ಲಿ ಭಾರತದ ಸಕ್ಕರೆ ಉತ್ಪಾದನೆ 240 ಲಕ್ಷ ಟನ್‌ಗಳಾಗಿತ್ತು. ಈ ವರ್ಷ 280 ಲಕ್ಷ ಟನ್‌ಗಳಷ್ಟು ಉತ್ಪಾದನೆ ಆಗುತ್ತದೆಂದು ನಿರೀಕ್ಷಿಸಲಾಗಿದೆ. ಇಷ್ಟೊಂದು ಬೃಹತ್ ಪ್ರಮಾಣದಲ್ಲಿ ಕೇವಲ 30 ಲಕ್ಷ ಟನ್‌ಗಳಷ್ಟು 'ಸದ್ಯಕ್ಕೆ ಹೊರಗೆ ತೆಗೆಯದ' ಸರ್ಕಾರೀ ಗೋದಾಮಿಗೆ ಹೋಗಿ ಸೇರಿಕೊಂಡು ಬಿಟ್ಟರೆ ಮಾರುಕಟ್ಟೆಯಲ್ಲಿ ದರ ಅಷ್ಟೊಂದು ಹೆಚ್ಚಾಗಿ ಬಿಡುತ್ತದೆ. ಎಷ್ಟೆಂದರೆ, ಈ ಸಾರಿಯ ಬಿಕ್ಕಟ್ಟನ್ನೇ ನಿವಾರಿಸುವಷ್ಟು! ಇನ್ನೂ ಕೆಲವರು (ಇಸ್ಮಾದ ಇತರ ವಕ್ತಾರರು) 20 ಲಕ್ಷ ಟನ್‌ಗಳನ್ನು ಸರ್ಕಾರ ಕೊಂಡುಕೊಂಡರೂ ಸಾಕು ಎನ್ನುತ್ತಿದ್ದಾರೆ.

ಹಾಗಾದರೆ ವಿದೇಶದಿಂದ ಒಂದು ವೇಳೆ 15.38 ಲಕ್ಷ ಟನ್‌ಗಳಷ್ಟು ಆಮದಾದರೆ ಏನಾಗುತ್ತದೆ? ನಮ್ಮ ಸಕ್ಕರೆಯ ಬೆಲೆ ಸಾಕಷ್ಟು ಇಳಿಯುತ್ತದೆ. ಅಲ್ಲವೇ? ಅದು 2014-15ರಲ್ಲಿ ಭಾರತಕ್ಕೆ ಆಮದಾದ ವಿದೇಶೀ ಸಕ್ಕರೆಯ ಪ್ರಮಾಣ. ನಮ್ಮಿಂದ ಹೊರಗಡೆಗೆ ಸಕ್ಕರೆ ಹೋಗಲಿಲ್ಲವೇ? ಹೋಗಿತ್ತು, ನಮ್ಮ ರಫ್ತಿನ ಪ್ರಮಾಣವು ಅತ್ಯಂತ ಹೆಚ್ಚು ಅಂದರೆ, 2012-13ರಲ್ಲಿ 27.91 ಲಕ್ಷ ಟನ್ ಮುಟ್ಟಿತ್ತು. ಆ ನಂತರ ಅದು ಕಡಿಮೆಯಾಗುತ್ತಲೇ ಬಂದಿದೆ. ಏಕೆಂದರೆ, ನಮ್ಮ ದೇಶದ ಸಕ್ಕರೆ ದುಬಾರಿ. 2013-14ರಲ್ಲಿ ಕೇಂದ್ರ ಸರ್ಕಾರವು ಪ್ರತಿ ಟನ್ ಸಕ್ಕರೆ ರಫ್ತಿಗೆ 2000 ರೂ ಸಹಾಯಧನವನ್ನು ಘೋಷಿಸಿತ್ತು, ಹೀಗಾಗಿ ಆ ಸಾರಿ 24.60 ಲಕ್ಷ ಟನ್ ರಫ್ತು ಆಗಿತ್ತು, 2014ರ ಫೆ. 28ರಂದು ಕೇಂದ್ರ ಸರ್ಕಾರ ಇನ್ನೊಂದು ಸಹಾಯವನ್ನೂ ಘೋಷಿಸಿತ್ತು, ಅದರನ್ವಯ 3,300 ಕೋಟಿ ರೂ.ಗಳ ರಫ್ತು ಸಬ್ಸಿಡಿ ನೀಡಬೇಕಿತ್ತು, ಇದು ಸರಿಯಾಗಿ ಜಾರಿಯಾಗಲಿಲ್ಲ, ಏಕೆಂದರೆ ಆಸ್ಟ್ರೇಲಿಯಾ, ಬ್ರೆಜಿಲ್, ಅಮೆರಿಕಾ, ಯೂರೋಪಿಯನ್ ಯೂನಿಯನ್, ಪಾಕಿಸ್ತಾನ, ನ್ಯೂಜಿಲೆಂಡ್, ಕೊಲಂಬಿಯಾ ಇತ್ಯಾದಿ ರಾಷ್ಟ್ರಗಳು ಆಕ್ಷೇಪಣೆ ತೆಗೆದವು. ಅದೇನೆಂದರೆ, ನಡೆದ ಡಬ್ಲ್ಯುಟಿಓ ಒಪ್ಪಂದದ ಪ್ರಕಾರ ರಫ್ತಿಗೆ ಸಬ್ಸಿಡಿ




ನೀಡಬಾರದು. ಇದೇ ವರ್ಷ ವಿದೇಶದಿಂದ ಆಮದಾಗುವ ಸಕ್ಕರೆಗೆ ವಿಧಿಸಲಾಗುವ ತೆರಿಗೆಯನ್ನು ಶೇ.15ರಿಂದ ಶೇ.25ಕ್ಕೂ, ನಂತರ ಶೇ.40ಕ್ಕೂ ಏರಿಸಲಾಗಿತ್ತು, ಹಾಗಿದ್ದೂ ವಿದೇಶದಿಂದ ಬರುವ ಸಕ್ಕರೆಯ ಪ್ರಮಾಣ ಒಂದೂ ಮುಕ್ಕಾಲು ಪಟ್ಟು ಏರಿಕೆಯಾಯಿತು.

ಈ ಅಂಶವು ದೇಶಾದ್ಯಂತ ನಡೆಯುತ್ತಿರುವ ಸಕ್ಕರೆ ಸಿಹಿ-ಕಹಿ ಚರ್ಚೆಯಲ್ಲಿ ಕಾಣೆಯಾಗಿದೆ. ಅಂದರೆ, ನಮ್ಮ ದೇಶದೊಳಗಿನ ರೈತರು, ಮಾರುಕಟ್ಟೆಯ ಅಗತ್ಯಗಳನ್ನು ನೋಡಿಕೊಂಡು ಎಷ್ಟು ಆಮದು ಅಥವಾ ಎಷ್ಟು ರಫ್ತು ಆಗಬೇಕೆಂದು ನಿರ್ಧರಿಸುವ ಅಧಿಕಾರ ಒಂದು ಸರ್ವತಂತ್ರ, ಸ್ವತಂತ್ರ, ಸಾರ್ವಭೌಮೀ ರಾಷ್ಟ್ರಕ್ಕಿಲ್ಲ. ಜಾಗತೀಕರಣದಿಂದ ನಮಗೆ ಅನುಕೂಲವಾಗುತ್ತದೆ ಎಂದು ಹೇಳುವವರು ಇದನ್ನು ಗಮನಿಸಬೇಕು. ಸದ್ಯದಲ್ಲೇ ಆಮದು ತೆರಿಗೆಯ ಹೆಚ್ಚಳಕ್ಕೂ ವಿದೇಶೀ ಕಂಪೆನಿಗಳು ತಕರಾರು ತೆಗೆಯಲಿವೆ. ಏಕೆಂದರೆ, ಡಬ್ಲ್ಯುಟಿಓ ಒಪ್ಪಂದದ ಪ್ರಕಾರ ಯಾವುದೇ ದೇಶದ ಕಂಪೆನಿ ಇಲ್ಲಿ ವ್ಯಾಪಾರ ಮಾಡಬೇಕೆಂದರೂ ಅದಕ್ಕೆ 'ಸಮಾನ ಅವಕಾಶ' ಇರಬೇಕು.

ಹಾಗೆ ನೋಡಿದರೆ, ಕೇವಲ ಈ ಆಮದು ಮತ್ತು ರಫ್ತು ವ್ಯವಹಾರದಿಂದ ಆಗುತ್ತಿರುವ ನೇರ ಪರಿಣಾಮಕ್ಕೆ ಮಾತ್ರ ಡಬ್ಲ್ಯುಟಿಓ ಒಪ್ಪಂದ ಕಾರಣವಲ್ಲ, ಸಕ್ಕರೆ ಉತ್ಪಾದನೆಯ ಹೆಚ್ಚಳಕ್ಕೂ ಡಬ್ಲ್ಯುಟಿಓ ಕಾರಣವಾಗಿದೆ! ರೈತರ ಸಾಲ ಹೆಚ್ಚಳಕ್ಕೂ ಡಬ್ಲ್ಯುಟಿಓ ಕಾರಣವಾಗಿದೆ! ಅದು ಹೇಗೆ? ಅಂದರೆ, ಸಕ್ಕರೆ ಉದ್ದಿಮೆಯ ಇವತ್ತಿನ ಸಮಸ್ಯೆಗೆ ಆಮದು ರಫ್ತಿನ ವ್ಯವಹಾರದಲ್ಲಿ ಆಗಿರುವ ಎಡವಟ್ಟಷ್ಟೇ ಕಾರಣವಾಗಿದೆ ಎಂದು ಹೇಳುವುದು ಸಾಧ್ಯವಾಗದು. ಏಕೆಂದರೆ, ಆಮದು ತಡೆಯಲು ಸಾಧ್ಯವಾಗಿಲ್ಲದಿರುವುದು ದೊಡ್ಡ ಸಮಸ್ಯೆಯೇ ಆದರೂ ನಮ್ಮಿಂದ ಒಂದಷ್ಟು ರಫ್ತೂ ಸಹ ಆಗಿದೆ. (ಬಾಕ್ಸ್ ನೋಡಿ). ಆದರೆ ಸ್ಥಳೀಯವಾಗಿ ಉತ್ಪಾದನೆಯಲ್ಲಿ ಹೆಚ್ಚಳಕ್ಕೂ ಡಬ್ಲ್ಯುಟಿಓ ಮತ್ತು ಮುಕ್ತ ಮಾರುಕಟ್ಟೆಯ ಪಾತ್ರವಿದೆ.

20 ವರ್ಷಗಳಿಗೆ ಹಿಂದೆಯೂ ಈ ದೇಶದಲ್ಲಿ ಕೃಷಿ ಭಾರೀ ಪ್ರಮಾಣದಲ್ಲೇ ನಡೆಯುತ್ತಿತ್ತು, ಆದರೆ ಬೆಳೆದ ಬೆಳೆಯನ್ನು ಬೀದಿಗೆ ತಂದು ಸುರಿಯುತ್ತಿರಲಿಲ್ಲ, ಬೆಳೆದ ಬೆಳೆಯ ಬೆಲೆಯಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸಗಳಿರುತ್ತಿದ್ದವು, ಅವು ರೈತರಲ್ಲಿ ತೀವ್ರ ಆತಂಕವನ್ನೇನೂ ಸೃಷ್ಟಿ ಮಾಡುತ್ತಿರಲಿಲ್ಲ, ಮೊದಲನೆಯದಾಗಿ, ಉತ್ಪಾದನೆಯ ಪ್ರಮಾಣದಲ್ಲಿ ಭಾರೀ ಏರುಪೇರುಗಳೂ ತುಂಬಾ ಇರುತ್ತಿರಲಿಲ್ಲ, ಆದರೆ, ಈಗ ಉತ್ಪಾದನೆಯಲ್ಲಿ ಗಣನೀಯ ಏರುಪೇರುಗಳು ಕಾಣಲು ಕೇವಲ ರೈತರಲ್ಲಿ ಹೆಚ್ಚಾದ ಲಾಲಸೆ ಕಾರಣವಲ್ಲ (ಒಂದು ವೇಳೆ ರೈತರಲ್ಲೂ ಉಪಭೋಗಿ ಸಂಸ್ಕೃತಿ ಹೆಚ್ಚಿದ್ದರೆ ಅದಕ್ಕೂ ಮಾರುಕಟ್ಟೆ ಪ್ರೇರಿತ ಉಪಭೋಗಿತನದ್ದೂ ಪಾಲಿದೆ). ಏಕೆಂದರೆ, ಈ ಅವಧಿಯಲ್ಲಿ ರೈತರಿಗಿಂತ ಮೇಲ್ಮಧ್ಯಮ ವರ್ಗದಲ್ಲಿ ಹತ್ತಾರು ಪಟ್ಟು ಲಾಲಸೆ ಹೆಚ್ಚಾಗಿದೆ. ಆ ಲಾಲಸೆಯನ್ನು ಈಡೇರಿಸಿಕೊಳ್ಳಲು ಬೇಕಾದಷ್ಟು ಸಂಪಾದನೆಯೂ ಆ ವರ್ಗಕ್ಕಿದೆ. ಆದರೆ, ರೈತರಿಗೆ ತಮ್ಮ ಕನಿಷ್ಠ ಅವಶ್ಯಕತೆಗಳಿಗೆ ಬೇಕಾದ ಹಣವನ್ನು ಹೊಂದಿಸಿಕೊಳ್ಳುವುದು ಸುಲಭವೇನಲ್ಲ.

ಜನರಲ್ಲಿ ಕೆಲವು ಮೂಲ ಅಗತ್ಯಗಳಿಗೆ ಸಂಬಂಧಿಸಿದಂತೆ ಪ್ರಜ್ಞೆ ಹೆಚ್ಚಾಗಿದೆ. ಆಹಾರ, ವಸತಿ, ಆರೋಗ್ಯ ಮತ್ತು ಶಿಕ್ಷಣಗಳಲ್ಲಿ ಕನಿಷ್ಠ ಗುಣಮಟ್ಟ ಬೇಕೆಂಬ ಅರಿವು ಹಾಗೂ ಬಯಕೆ ಹೆಚ್ಚಾಗಿದೆ. ಅವುಗಳು ಸುಲಭವಾಗಿ ಸಿಗದೇ ಇರುವುದಕ್ಕೆ ಖಾಸಗೀಕರಣ ನೀತಿಯೇ ಕಾರಣವಾಗಿದೆ. ಹೇಗೋ ಒಂದಷ್ಟು ಅಕ್ಕಿಯನ್ನಾದರೂ ನೀಡುವ ಯೋಜನೆಯನ್ನು ನಮ್ಮ ಸರ್ಕಾರಗಳು ಉಳಿಸಿಕೊಂಡಿವೆ.



ಉಳಿದದ್ದೆಲ್ಲಕ್ಕೂ ಹಣ ಕೊಟ್ಟೇ ಕೊಳ್ಳಬೇಕಿದೆ. ಹಾಗಾಗಿ ಹಣ ಓಡಾಡುವ ಅಗತ್ಯ ಹೆಚ್ಚಾಗಿದೆ. ಇದರ ಪರಿಣಾಮವೇ ಹಣದ ಓಡಾಟ ಹೆಚ್ಚಿಸುವ ವಾಣಿಜ್ಯ ಬೆಳೆಗಳ ಕಡೆಗೆ ವಲಸೆ. ಅಂತಹ ವಾಣಿಜ್ಯ ಬೆಳೆಗಳಲ್ಲಿ ಕಬ್ಬೂ ಸಹ ಒಂದಾಗಿದೆ. ಟೊಮ್ಯಾಟೋ ಮತ್ತಿತರ ತರಕಾರಿಗಳೂ ಅಂತಹ ವಾಣಿಜ್ಯ ಬೆಳೆಯಾಗಿದೆ. ತೊಗರಿಯನ್ನೂ ಮಾರುಕಟ್ಟೆಗಾಗಿಯೇ ಬೆಳೆಯಲಾಗುತ್ತದೆ. ಹತ್ತಿಯನ್ನೂ ಸಹ. ಇಂತಹ ಬೆಳೆಗಳನ್ನು ಬೆಳೆವ ರೈತರೇ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಎಂಬುದನ್ನು ಗಮನಿಸಬೇಕು. 10 ವರ್ಷಗಳ ಕೆಳಗೆ ಭತ್ತ ಬೆಳೆದ ರೈತರೂ ಸಂಕಷ್ಟಕ್ಕೆ ಈಡಾಗಿದ್ದರು. ಆ ವರ್ಷ ಭತ್ತದ ಉತ್ಪಾದನೆ ಹೆಚ್ಚಳವಾಗಲು ಇದ್ದ ಕಾರಣ ಕಡಲೇಕಾಯಿ ಬೆಳೆಯುತ್ತಿದ್ದ ರೈತರು ಗಣನೀಯ ಸಂಖ್ಯೆಯಲ್ಲಿ ಭತ್ತವನ್ನು ಬೆಳೆದಿದ್ದರು. ಅದಕ್ಕಿಂತ ಹಿಂದಿನ ವರ್ಷಗಳಲ್ಲಿ ಕಡಲೇಕಾಯಿ ಬೆಳೆ ಸಂಕಷ್ಟಕ್ಕೆ ಸಿಲುಕಿತ್ತು. ಶಿರಾದಲ್ಲಿ ಪ್ರತಿಭಟನೆ ನಡೆಸಿದ್ದ ಕಡಲೇಕಾಯಿ ಬೆಳೆಗಾರರು ಪೋಲೀಸರಿಂದ ಗುಂಡೇಟೂ ಸಹ ತಿಂದಿದ್ದರು.

ಅಂದರೆ ಇವೆಲ್ಲ ಒಂದರೊಡನೊಂದು ಸ[…] ಹೊಂದಿರುವ ಸರಣಿ ಪ್ರಕ್ರಿಯೆಯಾಗಿದೆ. ಯಾ[…] ಸ್ವಲ್ಪ ಹಣವಿದೆಯೋ, ಅಂತಹ ಬೆಳೆ ಮೇಲೆ ಮುಗಿ[…] ಮನೋಭಾವ ಸುಮ್ಮನೇ ಸೃಷ್ಟಿಯಾದದ್ದಲ್ಲ, ಮಾರುಕ[…] ರೈತರ ಬೆಳೆಯನ್ನು ನಿರ್ಧರಿಸುತ್ತದೆಯೇ ಹೊರತು, […] ಮಾರುಕಟ್ಟೆಯನ್ನು ನಿಯಂತ್ರಿಸಲು ಸಾಧ್ಯವಾಗುವ[…]

ಕಬ್ಬು ಬೆಳೆಗೇ ಸಂಬಂಧಿಸಿದಂತೆ ಈ ಅಂ[…] ಗಮನಿಸಬಹುದು. ಹೊಸದಾಗಿ ನೀರಾವರಿ[…] ಪ್ರದೇಶದಲ್ಲೆಲ್ಲಾ ಸಕ್ಕರೆ ಕಾರ್ಖಾನೆಗಳು ಬಂದಿದ್ದು[…] ಆ ಕಾರ್ಖಾನೆಗಳೇ ರೈತರಿಗೆ ಮೊದಲ ವರ್ಷಗಳಲ್ಲಿ […] ಉಚಿತ ಕಬ್ಬನ್ನು ನೀಡಿದ್ದನ್ನು ನೆನಪಿಸಿಕೊಳ್ಳಬೇಕ[…] ದೇಶಕ್ಕೆ ಎಷ್ಟು ಸಕ್ಕರೆ ಅಗತ್ಯವಿದೆ? ನಾವು ನಿಜಕ್ಕೂ[…] ಮಾಡುವುದು ಸಾಧ್ಯವಿದೆಯೇ ಎಂಬುದನ್ನು ಗಮ[…] ಈ ರೀತಿ ಕಬ್ಬು ಬೆಳೆ ಪ್ರದೇಶದ ಹೆಚ್ಚಳಕ್ಕೆ ಕಾರಣ[…] ಯಾರು? ಅನುಮತಿ ನೀಡಿದ ಸರ್ಕಾರಗಳು ಮತ್ತು[…] ಕಾರ್ಖಾನೆ ಮಾಲೀಕರು ಇದಕ್ಕೆ ಉತ್ತರ ಕೊಡಬೇಕ[…]

ಇದರಷ್ಟೇ ಅಥವಾ ಇದಕ್ಕಿಂತ ಮುಖ[…] ಅಂಶವೆಂದರೆ, ಉತ್ಪಾದನಾ ವೆಚ್ಚದ ಹೆಚ್ಚಳ. ಇ[…] ನೇರವಾಗಿ ಡಬ್ಲ್ಯುಟಿಓ ಒಪ್ಪಂದದ ಜೊತೆಗೆ ಸ[…] ಹೊಂದಿದೆ. ಕೃಷಿಯೂ ಎಲ್ಲಾ ಉದ್ದಿಮೆಗಳ ರೀತಿ […] ಉದ್ದಿಮೆಯಾದ್ದರಿಂದ, ಯಾರಿಗಾದರೂ ಸಬ್ಸಿಡಿ ನೀಡ[…] ವ್ಯವಹಾರದ 'ಸಮಾನತೆಯ' ದೃಷ್ಟಿಯಿಂದ ತಪ್ಪೆ[…] ಡಬ್ಲ್ಯುಟಿಓ ಒಪ್ಪಂದದ ನಿಯಮ. ಹಾಗಾಗಿ ಬೀಜ, ಗ[…] ಯಂತ್ರೋಪಕರಣಗಳಿಗೆ ಸಬ್ಸಿಡಿ ನೀಡುವುದು […] 100 ರೂ. ಇದ್ದ ಕಾಂಪ್ಲೆಕ್ಸ್ ಗೊಬ್ಬರದ ಬೆಲೆ […] ನೋಡುತ್ತಿದ್ದಂತೆಯೇ 1000 ರೂ.ಗಳನ್ನು ದ[…] ಇದರಿಂದಲೇ. ಈ ಅಂಶವನ್ನು ಸರಿಯಾಗಿ ಲೆಕ್ಕ […] ರೈತರು ಸಾಮಾನ್ಯವಾಗಿ ಕೂಲಿ ಹೆಚ್ಚಳವನ್ನು […] ದೂರುವುದಿದೆ. ಹಳ್ಳಿಗಳಲ್ಲಿದ್ದ ವಿವಿಧ ಬಗೆಯ […] ಬೆಂಬಲದ ಆಯಾಮಗಳು ಇಲ್ಲವಾಗಿವೆ. ಕೃ[…] ವರ್ಷಪೂರ್ತಿ ಕೆಲಸವಿಲ್ಲ, ನಗರಗಳು ಕರೆಯುತ್ತಿವೆ. […] ಹೆಚ್ಚಾದಂತೆ ಕೃಷಿ ಕಾರ್ಮಿಕರಲ್ಲೂ ಮೂಲ ಅ[…] ಕುರಿತಾದ ಪ್ರಜ್ಞೆ ಹೆಚ್ಚಾಗಿದೆ. ಅವರೂ ಎಲ್ಲ[…] ಕೊಳ್ಳಬೇಕು. ಹೀಗಾಗಿ ಕೃಷಿ ಕೂಲಿ[…] ಹೆಚ್ಚಳವಾಗಿರುವುದು ನಿಜ. ಅಷ್ಟು ಮಾತ್ರವಲ್ಲ[…] ಮತ್ತು ಮಧ್ಯಮ ರೈತರ ಕುಟುಂಬ ಇಡಿಯಾಗಿ ಕೃ[…] ಇಂದು ಪಾಲ್ಗೊಳ್ಳುತ್ತಿಲ್ಲ. ಹೀಗಾಗಿ ಕೂಲಿ ಕಾ[…] ಮೇಲಿನ ಅವಲಂಬನೆಯೂ ಹೆಚ್ಚಾಗಿದೆ.

ಅದೇನೇ ಇದ್ದರೂ, ಉತ್ಪಾದನಾ ವೆಚ್ಚ ಅತೀ[…] ಹೆಚ್ಚಳವಾಗುವುದರಲ್ಲೂ ಜಾಗತೀಕರಣ ನೀತಿಗಳು […] ಡಬ್ಲ್ಯುಟಿಓ ಒಪ್ಪಂದದ ನೇರ ಪಾತ್ರವಿದೆ. ಈ […] ಅಂಶಗಳನ್ನು ಸಕ್ಕರೆ ಬಿಕ್ಕಟ್ಟಿನ ಚರ್ಚೆಯ ಕೇಂದ್ರಕ್ಕೆ ತರ[…] ಬಹಳ ಅಗತ್ಯವಿದೆ. ಉದ್ದೇಶಪೂರ್ವಕವಾಗಿ […] ಮರೆಮಾಚಲಾಗುತ್ತಿದೆ. ಕಾಯಿಲೆಯ ಮೂಲವನ[…] ಹಚ್ಚದೇ, ಅದರ ಪರಿಣಾಮಗಳಲ್ಲಿ ಕೆಲವಕ್ಕೆ […] ಪರಿಹಾರವನ್ನು ಮಾತ್ರ ರಾಜ್ಯ ಮತ್ತು ಕೇಂದ್ರ ಸರ್ಕಾ[…] ನೀಡಿವೆ. ಕಳೆದ ವಾರ ಈ ಅಂಕ[…] ಪ್ರಸ್ತಾಪಿಸಲಾಗಿದ್ದ ಕೇಂದ್ರ ಮತ್ತು ರಾಜ್ಯ ಸ[…] ಕ್ರಮಗಳನ್ನು ಗಮನಿಸಿದರೆ ಅದು ಗೊತ್ತಾ[…]

ಆದರೂ ಈ ವರ್ಷ ಅಥವಾ ಮ[…] ವರ್ಷ ಸಮಸ್ಯೆ ಬಗೆಹರಿಯುತ್ತದೆ. ಅ[…] ಅದು ಕೆಲವು ಸಾವಿರ ರೈತರ ಬಲಿ ಕೇ[…] ಉತ್ಪಾದನಾ ವೆಚ್ಚದ ಹೆಚ್ಚಳ ಮತ್ತು ಬೆಲೆ […] ಹಾಗೂ ಕಬ್ಬು ಅರೆಯಲು ಕಾರ್ಖಾ[…] ನಿರಾಕರಣೆ ಈ ತ್ರಿವಳಿಯು ಕಬ್ಬು ಬೆಳೆಗಾ[…] ದಿಕ್ಕೆಡಿಸುತ್ತದೆ. ಮೊದಲಿಗೆ ಕೆಲವು 'ದ[…] ಮನಸ್ಸಿನ' ರೈತರು ಆತ್ಮಹತ್ಯೆಯ […] ತೋರುತ್ತಾರೆ. ಅದು ವ್ಯಾಪಿಸುತ್ತಾ ಹೋ[…] 18 ತಿಂಗಳಾದರೂ ಕಬ್ಬು ಕಟಾವು ಆಗ[…] ತಾವೇ ಬೆಳೆದಿದ್ದ ಬೆಳೆಗೆ ಬೆಂಕಿ ಹಚ್ಚುತ್ತಾರೆ. […] ವರ್ಷ ಬೆಳೆದ ಕೂಳೆಯನ್ನೂ ಕಿತ್ತು ಹಾಕುತ್ತಾರೆ. ಹೊ[…] ನಾಟಿ ಮಾಡುವವರು ಹಿಂಜರಿಯುತ್ತಾರೆ. ಕಬ್ಬು ಉ[…] ಕುಸಿಯುತ್ತದೆ. ಸಕ್ಕರೆ ಬೆಲೆ ಏರುತ್ತದೆ. ಬೆಳೆಗ[…] ಕಾರ್ಖಾನೆಗಳವರು ಸಮಸ್ಯೆಯನ್ನು ಮರೆಯುತ್ತಾರೆ. […] ಕೆಲವು ಹೊಸ ಕಾರ್ಖಾನೆಗಳು ಹುಟ್ಟಿಕೊಳ್ಳುತ್ತವ[…] ಮತ್ತಷ್ಟು ಏರಲಿ ಎಂದು ಬಯಸುತ್ತಾರೆ. ಗ್ರಾ[…] ಸಕ್ಕರೆ ಬೆಲೆ ತುಂಬಾ ತುಟ್ಟಿಯಾಗಿದೆ ಎಂಬ ನೆಪ […] (ಆದರೆ ಡಬ್ಲ್ಯುಟಿಓ ಒಪ್ಪಂದಕ್ಕೆ ಕಟ್ಟು ಬಿದ್ದು) ಸಕ[…] ಆಮದು ಮೇಲಿನ ಸುಂಕವನ್ನು ಕಡಿಮೆ ಮಾ[…] ಆಮದು ಹೆಚ್ಚಾಗುತ್ತದೆ. ಈ ಮಧ್ಯೆ ಇನ್ನಷ್ಟು […] ಕಬ್ಬು ಬೆಳೆ ಕಡೆ ಹೊರಳಿಕೊಳ್ಳುತ್ತಾರೆ. ಕಬ್ಬು ಉ[…] ಹೆಚ್ಚಾಗುತ್ತದೆ, ಸಕ್ಕರೆ ಬೆಲೆ ಕುಸಿಯುತ್ತದೆ. ರೈತರು ಆ[…] ಮಾಡಿಕೊಳ್ಳುತ್ತಾರೆ. ಮತ್ತೆ ಬಿಕ್ಕಟ್ಟು, ಮತ್ತೆ ಪ್ರ[…] ಮತ್ತೆ ಆತ್ಮಹತ್ಯೆ.....

ಸಕ್ಕರೆ ಉದ್ದಿಮೆಯಲ್ಲಿ 2009-10ರಿಂದ 2014-15ರವರೆಗೆ ನಡೆದಿರುವ ಆಮದು-ರಫ್ತು ವ್ಯವಹಾರ (ಲಕ್ಷ ಟನ್‌ಗಳಲ್ಲಿ)

ವರ್ಷ	ರಫ್ತು	ಆಮದು
2009-10	0.42	25.51
2010-11	17.11	11.98
2011-12	27.38	0.99
2012-13	27.91	11.21
2013-14	24.60	8.81
2014-15	19.54	15.38
2015-16	(ಏಪ್ರಿಲ್‌ವರೆಗೆ) 2.63	0.00


ಕಾತ್ಯಾಯಿನಿಯರ ದುರಂತ ಮತ್ತು ಭೈರಪ್ಪನ ಕುತಂತ್ರ

ಸಾಹಿತಿ ಎಸ್.ಎಲ್ ಭೈರಪ್ಪನವರು 'ವಂಶವೃಕ್ಷ' ಕಾದಂಬರಿ ಬರೆದು 50 ವರ್ಷ ಆಗಿರುವ ಈ ಸಂದರ್ಭದಲ್ಲಿ ಅವರ ಅಭಿಮಾನಿಗಳು ಸಾಮಾಜಿಕ ಜಾಲತಾಣಗಳಲ್ಲಿ ಹುಚ್ಚೆದ್ದು ಕುಣಿಯುತ್ತಿದ್ದಾರೆ. ಫೇಸ್‌ಬುಕ್‌ನಲ್ಲಿ ಶುರುವಾಗಿರುವ 'ಭೈರಪ್ಪ ಕಾದಂಬರಿ ಪ್ರಿಯರ ಕೂಟ' ಎಂಬ ಗುಂಪು ಬಹುಪರಾಕಿನಲ್ಲಿ ಮುಳುಗಿದೆ. ಜೊತೆಗೆ ಜುಲೈ 11ರಂದು ಬೆಂಗಳೂರಿನಲ್ಲಿ 'ವಂಶವೃಕ್ಷ' ಕುರಿತಂತೆ ಭೈರಪ್ಪನವರ ಜೊತೆ ಚರ್ಚೆ, ಅಭಿನಂದನೆ ಇತ್ಯಾದಿಗಳು ಜರುಗಲಿದೆ. ಆ ಕಾರ್ಯಕ್ರಮದಲ್ಲಿ ಭೈರಪ್ಪನವರ ಅಭಿಮಾನಿಗಳಿಗೆ ಮಾತ್ರ ಸ್ಥಳ ಮತ್ತು ಅವಕಾಶ ಇರುತ್ತದೆ ಎಂಬುದು ನಿಶ್ಚಿತ. ಯಾಕೆಂದರೆ ಫೇಸ್‌ಬುಕ್ ತರಹದ ಗುಂಪಿನಿಂದಲೇ ಭಿನ್ನಾಭಿಪ್ರಾಯವನ್ನು ಹೊಂದಿರುವವರನ್ನು ಹೊರದೂಡುವ ಅವರ ಅಭಿಮಾನಿಗಳು ಇನ್ನು ನೇರಾನೇರ ಸವಾಲನ್ನು ಸ್ವೀಕರಿಸುವ ವಿಶಾಲ ಮನೋಭಾವವನ್ನಂತೂ ಖಂಡಿತ ಹೊಂದಿಲ್ಲ.

ಈ ಹಿನ್ನೆಲೆಯಲ್ಲಿ ಮತ್ತೊಮ್ಮೆ ಭೈರಪ್ಪನವರ ಸಾಹಿತ್ಯ ಮತ್ತು ಜೀವನ ದರ್ಶನಗಳ ಬಗ್ಗೆ ವಸ್ತುನಿಷ್ಠವಾಗಿ ಚರ್ಚಿಸುವ ಅಗತ್ಯತೆ ಇದ್ದೇ ಇದೆ. ಯಾಕೆಂದರೆ ಒಂದೆಡೆ ಭೈರಪ್ಪನವರ ಸಾಹಿತ್ಯಿಕ ಜನಪ್ರಿಯತೆಯನ್ನೇ ಅವರು ಎತ್ತಿ ಹಿಡಿಯುವ ಬ್ರಾಹ್ಮಣೀಯ ಮೌಲ್ಯಗಳಿಗೆ ಸಿಗುತ್ತಿರುವ ಜನಮನ್ನಣೆ ಎಂದು ಕೆಲವರು ಅರ್ಥೈಸುತ್ತಿದ್ದಾರೆ. ಇನ್ನೊಂದೆಡೆ ಸಾಮಾಜಿಕ ಜಾಲತಾಣಗಳಲ್ಲಿ ಚೆಡ್ಡಿ ಚತುರರು 'ವಂಶವೃಕ್ಷ'ದ ದುರಂತ ನಾಯಕಿ ಕಾತ್ಯಾಯಿನಿಯ ಅಸಹಾಯಕತೆ ಮತ್ತು ದುರಂತ ಅಂತ್ಯದ ಸಂದರ್ಭವನ್ನು ಬಲಪಂಥೀಯ ರಾಜಕಾರಣದ ಪ್ರಚಾರಕ್ಕೆ ಬಳಸಿಕೊಳ್ಳುತ್ತಿದ್ದಾರೆ.

ಇಲ್ಲಿ ಆರಂಭದಲ್ಲೇ ಒಂದೆರಡು ವಿಷಯಗಳನ್ನು ಸ್ಪಷ್ಟಪಡಿಸುವ ಅಗತ್ಯವಿದೆ. ನಾನು ಭೈರಪ್ಪನವರ ಸಾಹಿತ್ಯಿಕ ಪ್ರತಿಭೆಯನ್ನು ನಿರಾಕರಿಸುವುದಿಲ್ಲ. ಅವರು ಬಳಸುವ ಭಾಷೆ ನನಗೆ ವಿಭಿನ್ನವಾಗಿ ಕಂಡರೂ ಅವರು ಪಾತ್ರಗಳನ್ನು, ಸಂದರ್ಭಗಳನ್ನು ಮತ್ತು ಸನ್ನಿವೇಶಗಳನ್ನು ಸಮಗ್ರವಾಗಿ ಚಿತ್ರಿಸುವಲ್ಲಿ ಎಷ್ಟು ಯಶಸ್ವಿಯಾಗುತ್ತಾರೆಂದರೆ ಅವರ ಕೃತಿಗಳು ಸುಲಭವಾಗಿ ಓದಿಸಿಕೊಂಡು ಹೋಗುತ್ತವೆ. ಅಂತಹ ಕೃತಿಗಳಲ್ಲಿ ಅವರ 'ಗೃಹಭಂಗ' ಒಂದು. ಇತ್ತೀಚೆಗೆ ನಾನು ಮತ್ತೊಮ್ಮೆ ಇದನ್ನು ಓದಿದಾಗ ಬೆರಗಾಗಿದ್ದೆ. ಇಂತಹ ಉತ್ತಮ ಕೃತಿ ಬರೆದ ಭೈರಪ್ಪನವರು ಅದು ಹೇಗೆ 'ಕವಲು' ತರಹದ ಕೆಟ್ಟ ಕಾದಂಬರಿ ಬರೆಯಲು ಸಾಧ್ಯ ಎಂದು ನನಗೆ ಅಚ್ಚರಿ ಆಗಿತ್ತು.

ಇರಲಿ, ಭೈರಪ್ಪನವರ ಸಮಗ್ರ ಸಾಹಿತ್ಯಕ್ಕೆ ಬರುವುದಾದರೆ ಅವರ ಕೃತಿಗಳನ್ನು ಓದಿ ಮುಗಿಸಿದನಂತರ ಸಾಮಾನ್ಯ ಓದುಗರಲ್ಲಿ ಒಂದು ಒಳ್ಳೆಯ ಕತೆಯನ್ನು ಓದಿದ ಅನುಭವವಾಗುತ್ತದೆಯೇ ಹೊರತು ಆ ಕತೆಯ ಆಳದಲ್ಲಿ ಅಡಗಿರುವ ಅವರ ಜನವಿರೋಧಿ ಮತ್ತು ಮಹಿಳಾ ವಿರೋಧಿ ನಿಲುವುಗಳಾಗಲಿ ಅಥವಾ ಪುರೋಹಿತಶಾಹಿಯನ್ನು ಎತ್ತಿಹಿಡಿಯುವ ಅವರ ಸಿದ್ಧಾಂತವಾಗಲಿ ಓದುಗರ ಗ್ರಹಿಕೆಗೆ ಸಿಗುವುದಿಲ್ಲ. ಅದಕ್ಕೆ



ಉತ್ತಮ ಉದಾಹರಣೆ 'ವಂಶವೃಕ್ಷ.'

'ವಂಶವೃಕ್ಷ' ಕಾದಂಬರಿಯಲ್ಲಿ 'ಕವಲು' ಕಾದಂಬರಿಯಲ್ಲಿರುವಂತಹ ಪೇಲವ ಪಾತ್ರಗಳಾಗಲಿ, ಅಸೂಕ್ಷ್ಮ ಭಾವಸಂಬಂಧಗಳಾಗಲಿ, ಸರಳ ರೇಖೆಯಂಥ ಕಾರ್ಡ್‌ಬೋರ್ಡ್ ವ್ಯಕ್ತಿತ್ವಗಳಾಗಲೀ ಇಲ್ಲ. ಆದ್ದರಿಂದ ಮೇಲುನೋಟಕ್ಕೆ ಇದೊಂದು ಒಳ್ಳೆಯ ಕೃತಿಯಂತೆ ಸಾಮಾನ್ಯ ಓದುಗರಿಗೆ ಭಾಸವಾಗುತ್ತದೆ.

ಅದರಲ್ಲೂ ಕಾತ್ಯಾಯಿನಿ ಎಂಬ ಯುವ ವಿಧವೆ ಬ್ರಾಹ್ಮಣೀಯ ಕಟ್ಟುಪಾಡುಗಳನ್ನು ವಿರೋಧಿಸಿ ಹೊಸ ಬದುಕು ಕಂಡುಕೊಳ್ಳುವ ಪ್ರಯತ್ನವೂ ಕ್ರಾಂತಿಕಾರಿಯಾಗಿಯೇ ಕಾಣಿಸುತ್ತದೆ. ಅಷ್ಟೇ ಮುಖ್ಯವಾಗಿ ಕಾದಂಬರಿಯ ಅಂತ್ಯದಲ್ಲಿ ಆಕೆಯ ಸಂಪ್ರದಾಯಸ್ಥ ಮಾವ ಶ್ರೋತ್ರಿಗೇ ತನ್ನ ಹುಟ್ಟು ಪರಿಶುದ್ಧವಾಗಿರಲಿಲ್ಲವಾದ್ದರಿಂದ ವಂಶ ಎಂಬ ವೃಕ್ಷದ ಪವಿತ್ರತೆಯು ಅರ್ಥಹೀನವಾಗಿ ಕಾಣಿಸುವುದೂ ಚಾರಿತ್ರಿಕವಾಗಿ ಭಾಸವಾಗುತ್ತದೆ.

ಆದರೆ ಆಳದಲ್ಲಿ 'ವಂಶವೃಕ್ಷ' ಕಾದಂಬರಿ ಏನನ್ನು ಹೇಳುತ್ತಿದೆ ಎಂದು ನೋಡುವುದು ಮುಖ್ಯವಾಗುತ್ತದೆ, ಯಾಕೆಂದರೆ ಬ್ರಾಹ್ಮಣಿಕೆಯ ಕಟ್ಟುಪಾಡುಗಳನ್ನು ವಿರೋಧಿಸುವ ಕಾತ್ಯಾಯಿನಿ 'ಸತತ ಗರ್ಭಪಾತಕ್ಕೆ' ತುತ್ತಾಗುತ್ತಾಳೆ; ತಾನು ತಪ್ಪು ಮಾಡಿದೆ, ಪಾಪ ಮಾಡಿದೆ ಎಂಬ ಕೊರಗಿನಲ್ಲೇ ಸಾಯುತ್ತಾಳೆ. ಅದರರ್ಥ, ಮಹಿಳೆಯರು ಸಂಪ್ರದಾಯವನ್ನು ಮುರಿದರೆ, ಕಟ್ಟುಪಾಡುಗಳನ್ನು ವಿರೋಧಿಸಿದರೆ ಅವರು ಎಂದೂ ಸಂತೋಷದಿಂದಿರಲು ಸಾಧ್ಯವಿಲ್ಲ ಎಂಬ ನಿಲುವನ್ನು ಭೈರಪ್ಪ ಚೆಂದವಾಗಿ ರೂಪಿಸಿದ್ದಾರೆ ಎಂದಲ್ಲವೆ?

ಹಾಗೆಯೇ ಆಕೆಯ ಮಾವ ಶ್ರೋತ್ರಿಗೆ ತಾನು ಕಾತ್ಯಾಯಿನಿಗೆ ಅನ್ಯಾಯ ಮಾಡಿದೆ ಎಂಬ ಭಾವನೆ ಕಾಡುತ್ತದೆಯೇ ಹೊರತು ಸಂಪ್ರದಾಯ, ವಂಶದ ಪವಿತ್ರತೆ, ಕಟ್ಟುಪಾಡುಗಳೆಲ್ಲ ನಿರುಪಯುಕ್ತ ಎಂದೆನಿಸುವುದೇ ಇಲ್ಲ. ಯಾಕೆಂದರೆ ಅವನು ಅದ್ಯಾವುಗಳನ್ನು ವಿರೋಧಿಸುವ ಗೋಜಿಗೇ ಹೋಗುವುದಿಲ್ಲ. ಬದಲಾಗಿ ಅದೇ ಸಂಪ್ರದಾಯಕ್ಕೆ ಕಟ್ಟುಬಿದ್ದು ಸಾಯುವ ಹೊಸ್ತಿಲಲ್ಲಿರುವ ಕಾತ್ಯಾಯಿನಿಯ ಬಾಯಿಗೆ ಗಂಗಾಜಲವನ್ನು ಹಾಕಿಸುತ್ತಾನೆ ಮತ್ತು ಸನ್ಯಾಸವನ್ನು ಅರಸುತ್ತಾ ಅದ್ಯಾವುದೋ 'ಪುಣ್ಯ' ಕ್ಷೇತ್ರಕ್ಕೆ ಹೊರಡುತ್ತಾನೆ.

ಅಂದರೆ ಕಾತ್ಯಾಯಿನಿ ಮತ್ತು ಶ್ರೋತ್ರಿ- ಇಬ್ಬರಲ್ಲೂ ಬ್ರಾಹ್ಮಣಿಕೆ ಕಟ್ಟುಪಾಡುಗಳನ್ನು ಮೀರಿದ್ದಕ್ಕೆ ಪಾಪಪ್ರಜ್ಞೆ ಹುಟ್ಟುತ್ತದೆಯೇ ವಿನಃ ವಿಮೋಚನಾ ಭಾವವಲ್ಲ. ಆದ್ದರಿಂದ ಸಾಹಿತ್ಯಿಕವಾಗಿ 'ವಂಶವೃಕ್ಷ' ಕುರಿತ ವಿಮರ್ಶೆ ಏನೇ ಇದ್ದರೂ ಅದರ ತಾತ್ವಿಕ ದರ್ಶನ ಈ ಬ್ರಾಹ್ಮಣೀಯ ಕಟ್ಟುಪಾಡನ್ನು ಮೀರುವುದರಿಂದ ಉಂಟಾಗುವ 'ಪಾಪಪ್ರಜ್ಞೆ'ಯೇ ಎಂಬುದನ್ನು ಅರ್ಥಮಾಡಿಕೊಳ್ಳಬೇಕಿದೆ.

ಈ ಬ್ರಾಹ್ಮಣಿಕೆಯ ಎತ್ತಿಹಿಡಿಯುವಿಕೆ ಕೇವಲ 'ವಂಶವೃಕ್ಷ'ದಲ್ಲಿ ಮಾತ್ರ ಸಂಭವಿಸುವುದಿಲ್ಲ. ಭೈರಪ್ಪನವರ 'ದಾಟು' ಕಾದಂಬರಿಯಲ್ಲೂ ಅಬ್ರಾಹ್ಮಣನನ್ನು ಸತ್ಯಭಾಮೆ ಪ್ರೀತಿಸಿದ್ದಕ್ಕೆ ಇಡೀ ಹಳ್ಳಿಯೇ ಸರ್ವನಾಶವಾಗುತ್ತದೆ. 'ತಬ್ಬಲಿಯು ನೀನಾದೆ ಮಗನೆ'ಯಲ್ಲೂ ನಾಯಕ ತಬ್ಬಲಿಯಾಗುವುದು ಹಿಂದೂ ಧರ್ಮದ ಕಟ್ಟಳೆಯನ್ನು ಮೀರಿದ್ದಕ್ಕೆ. ಹೀಗೆ ಭೈರಪ್ಪನವರು ಕಾತ್ಯಾಯಿನಿಯರ ಮತ್ತು ಸತ್ಯಭಾಮೆಯರ 'ಮಹಿಳಾ ಪ್ರಜ್ಞೆ'ಯನ್ನು ಸೋಲಿಸುತ್ತಾ ಬ್ರಾಹ್ಮಣಿಕೆಯ ವಿಜಯದ ಕಥೆಗಳನ್ನೇ ಹೇಳುತ್ತಾ ಬಂದಿದ್ದಾರೆ.

ಭೈರಪ್ಪನವರು ಹಲವಾರು ಬಾರಿ ಸಾಹಿತ್ಯ ಸೃಷ್ಟಿಯ ಬಗ್ಗೆ ಮಾತನಾಡುವಾಗ ತಾವು ಸಿದ್ಧಾಂತಕ್ಕಿಂತ 'ಸತ್ಯ ಮತ್ತು ಸೌಂದರ್ಯ'ಕ್ಕೆ ಬದ್ಧ ಎಂದು ಹೇಳಿದ್ದಾರೆ. ಮಾತ್ರವಲ್ಲ ಲೇಖಕ ಸಿದ್ಧಾಂತಕ್ಕೆ ಬದ್ಧನಾದಾಗ ಉತ್ತಮ ಸಾಹಿತ್ಯ ಸೃಷ್ಟಿಯಾಗುವುದಿಲ್ಲ ಎಂದೆಲ್ಲ ಪ್ರತಿಪಾದಿಸಿದ್ದಾರೆ.

ಆದರೆ ಭೈರಪ್ಪನವರು 'ಗೃಹಭಂಗ' ಮತ್ತು 'ಪರ್ವ' ಎಂಬ ಎರಡು ಕೃತಿಗಳನ್ನು ಬಿಟ್ಟರೆ ಮಿಕ್ಕಂತೆ ಬರೆದಿರುವುದೆಲ್ಲ ತಾವು ನಂಬಿರುವ ಸಿದ್ಧಾಂತದ ಪ್ರಚಾರಕ್ಕಾಗಿಯೇ. ಆದ್ದರಿಂದಲೇ ಅವೆಲ್ಲ ಕೆಟ್ಟ ಕೃತಿಗಳಾಗಿವೆ. ಆರೆಸ್ಸೆಸ್ ಸಿದ್ಧಾಂತ ಮಾತ್ರವಲ್ಲದೆ ಆ ಸಂಘಟನೆಯ ವೈಭವೀಕರಣವನ್ನೇ ವಸ್ತುವಾಗಿಟ್ಟುಕೊಂಡ ಅವರ ಮೊದಲ ಕಾದಂಬರಿಯಾದ 'ಗೃಹಶ್ರೀ'ಯಿಂದ ಹಿಡಿದು ಇತ್ತೀಚೆಗೆ ಮುಸ್ಲಿಮರನ್ನು ತುಚ್ಛವಾಗಿ ಚಿತ್ರಿಸಲೆಂದೇ ಬರೆದ 'ಆವರಣ' ಮತ್ತು ಸ್ವಾಭಿಮಾನಿ ಮಹಿಳೆಯರ ಬಗ್ಗೆ ಬ್ರಾಹ್ಮಣೀಯ ಪುರುಷಾಧಿಪತ್ಯದ ತಿರಸ್ಕಾರದಿಂದ ಹುಟ್ಟಿಕೊಂಡ 'ಕವಲು' ಎಲ್ಲವೂ, ಅವರು ನಂಬಿರುವ ಹಿಂದೂತ್ವ ಸಿದ್ಧಾಂತಹ ಕರಪತ್ರಗಳಷ್ಟೇ ಎಂದರೆ ತಪ್ಪಾಗಲಾರದು.

ಭೈರಪ್ಪನವರ ಈ ಮತಾಂಧಕ್ಕೆ ಕಾರಣ ಇಲ್ಲದಿಲ್ಲ. ಅವರು ತಮ್ಮ ಬದುಕು ಮತ್ತು ಅನುಭವಕ್ಕೆ ನಿಷ್ಠರಾಗಿ ಬರೆದಾಗ 'ಗೃಹಭಂಗ' ಸೃಷ್ಟಿಯಾಗುತ್ತದೆ. ಯಾವಾಗ ಅವರು ಬದುಕು ಮತ್ತು ಅನುಭವಕ್ಕೆ ನಿಷ್ಠರಾಗದೆ ತಮ್ಮ ಮೆದುಳು ಮತ್ತು ಹೃದಯದಲ್ಲಿ ಇರುವ ಮನು ಮಹರ್ಷಿಯನ್ನು ಆವಾಹಿಸಿಕೊಳ್ಳುತ್ತಾರೋ (ಅನಂತಮೂರ್ತಿಯವರು ಹೇಳಿದ್ದಂತೆ) ಹೈಸ್ಕೂಲ್ ಮಟ್ಟದ ಡಿಬೆಟ್ ತರಹ ಬಾಲಿಶ ಸ್ವರೂಪದ, ಯಾವುದೇ ಸಾಹಿತ್ಯಿಕ ಮೌಲ್ಯವನ್ನು ಹೊಂದಿರದ ಕೃತಿಗಳನ್ನು ಸೃಷ್ಟಿಸುತ್ತಾರೆ. 'ವಂಶವೃಕ್ಷ'ಕ್ಕೆ ಐವತ್ತು 'ತುಂಬಿರುವ' ಈ ಹೊತ್ತಿನಲ್ಲಿ ಇದನ್ನೆಲ್ಲ ಗಮನದಲ್ಲಿಟ್ಟುಕೊಂಡರೆ ಎಲ್ಲರಿಗೂ ಒಳಿತು.

* * * *

ಇತ್ತೀಚಿನ ಸೆಮಿನಾರ್ ಒಂದರಲ್ಲಿ ನಿವೃತ್ತ ಹಿರಿಯ ನ್ಯಾಯಮೂರ್ತಿಯೊಬ್ಬರು ಈ ದೇಶದ ಪ್ರಜಾತಂತ್ರವನ್ನು ಉಳಿಸುತ್ತಿರುವ ಮೂವರು ಮಹಿಳೆಯರು ಎಂದು ಅರುಂಧತಿ ರಾಯ್, ಮೇಧಾ ಪಾಟ್ಕರ್ ಮತ್ತು ತೀಸ್ತಾ ಸೆಟಲ್‌ವಾಡ್ ಅವರ ಹೆಸರುಗಳನ್ನು ಹೇಳಿದ್ದರು.

ತೀಸ್ತಾ ಸೆಟಲ್ವಾಡ್ ಈ ದೇಶದ ಪ್ರಪ್ರಥಮ ಸಾಲಿಸ್ಟರ್ ಜನರಲ್ ಅವರ ಮಗಳು. ಈ ದೇಶದ ಸ್ವಾತಂತ್ರ್ಯ ಹೋರಾಟದ ಆಶಯವಾದ ಪ್ರಜಾತಂತ್ರ ಮತ್ತು ಜಾತ್ಯತೀತತೆಯನ್ನು ಉಳಿಸಲು ತಮ್ಮ ಜೀವ, ಜೀವನ ಮತ್ತು ಭವಿಷ್ಯದ ಹಂಗು ತೊರೆದು ಹೋರಾಡುತ್ತಿರುವವರು.



• ಗೌರಿ ಲಂಕೇಶ್
editorlankesh@gmail.com

ಗುಜರಾತ್‌ನಲ್ಲಿ 2002ರ ಮೋದಿ ನೇತೃತ್ವದ ಪ್ರಭುತ್ವ ಮತ್ತು ಕೇಸರಿ ಪಡೆ ನಡೆಸಿದ ಭೀಭತ್ಸಗಳನ್ನು ಅವಿಶ್ರಾಂತವಾಗಿ ಬಯಲಿಗೆಳೆದು ಕೊಲೆಗಡುಕರಲ್ಲಿ ಸ್ವಲ್ಪ ಜನರಿಗಾದರೂ ಶಿಕ್ಷೆ ಕೊಡಿಸಿದ್ದರಲ್ಲಿ ತೀಸ್ತಾರ ಪಾತ್ರ ಅತ್ಯಂತ ದೊಡ್ಡದು.

ಮಾಯಾ ಕೋದ್ನಾನಿ ಮತ್ತು ಬಾಬುಭಜರಂಗಿ ತರಹದ ರಾಕ್ಷಸರಿಗೆ ಗುಜರಾತಿನ ಕೋರ್ಟ್ ಸಹ ಶಿಕ್ಷೆ ಕೊಡುವಂತೆ ಮಾಡಿದ್ದು ತೀಸ್ತಾ ಅವರ ಕೀರ್ತಿ. ನರಹಂತಹ ನರೇಂದ್ರ ಮೋದಿ ಈ ದೇಶದ ಪ್ರಧಾನಿ ಆದರೂ ಆತನ ನಿದ್ದೆಗೆಡಿಸಿರುವುದು ತೀಸ್ತಾರ ಈ ನಿರಂತರ ಸಂಗ್ರಾಮವೇ.

ಈ ಕಾರಣಕ್ಕೇ ಬಿಜೆಪಿ ನೇತೃತ್ವದ ಸರ್ಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಮರುದಿನದಿಂದಲೇ ತೀಸ್ತಾಗೆ ಮೋದಿ ನಿರಂತರ ಕಿರುಕುಳ ಕೊಡುತ್ತಿದ್ದಾನೆ. ಒಂದೆಡೆ ತೀಸ್ತಾ ಅವರ ಸಬ್‌ರಂಗ್ ಸಂಸ್ಥೆಯಲ್ಲಿ





ಹಣಕಾಸು ಅವ್ಯವಹಾರ ನಡೆದಿದೆ ಎಂದು ಆರೋಪಿಸಿ ಅವರನ್ನು ಬಂಧಿಸಲು ಹರಸಾಹಸ ಮಾಡುತ್ತಿದ್ದಾನೆ (ಆದರೆ ದೇಶಾದ್ಯಂತ ತೀಸ್ತಾ ಅವರ ಹೋರಾಟವನ್ನು ಬೆಂಬಲಿಸುತ್ತಿರುವ ಹೋರಾಟಗಾರರು ತೋರಿದ ಕಾಳಜಿ ಮತ್ತು ಸುಪ್ರೀಂಕೋರ್ಟ್ ಮಧ್ಯಪ್ರವೇಶದಿಂದ ತಾತ್ಕಾಲಿಕವಾಗಿ ಅದಕ್ಕೆ ಯಶಸ್ಸು ಸಿಕ್ಕಿಲ್ಲ). ಇನ್ನೊಂದೆಡೆ ತೀಸ್ತಾ ವಿರುದ್ಧ ಇಲ್ಲದ ನೆಪವೊಡ್ಡಿ ಈಗ ಸಿಬಿಐ ತನಿಖೆಗೂ ಮೋದಿ ಸರ್ಕಾರ ಪ್ರಯತ್ನಿಸುತ್ತಿದೆ.


ತೀಸ್ತಾ ಈಗಾಗಲೇ ಕಳೆದ ಹತ್ತು ವರ್ಷಗಳ ಅವಧಿಯಲ್ಲಿನ ತಮ್ಮ ಸಂಸ್ಥೆಯ ಎಲ್ಲಾ ಲೆಕ್ಕಗಳುಳ್ಳ 10,000 ಪುಟಗಳ ಖಾತೆ ಖಿರ್ದಿಗಳನ್ನು ಒದಗಿಸಿದ್ದರೂ ಅವರ ಮೇಲೆ ಇಲ್ಲದ ಗೂಬೆ ಕೂರಿಸಲಾಗುತ್ತಿದೆ.


ಇವಕ್ಕೆಲ್ಲ ಕಾರಣ ಇಷ್ಟೆ. ತೀಸ್ತಾ ಅವರ ಬಾಯಿ ಬಂದ್ ಮಾಡುವುದು ಮೋದಿ ಸರ್ಕಾರಕ್ಕೆ ಅತ್ಯಂತ ಜರೂರಾಗಿದೆ. ಆದರೆ ತೀಸ್ತಾ ಅವರಿಗೆ ಬಂದೆರಗಿರುವ ಆತಂಕ ಈ ದೇಶದ ಪ್ರಜಾತಂತ್ರಕ್ಕೇ ಬಂದೆರಗಿರುವ ಆತಂಕವಾಗಿದೆ. ಕರ್ನಾಟಕದ ಎಲ್ಲಾ ಪ್ರಜಾತಂತ್ರವಾದಿಗಳು ಇಂದು ತೀಸ್ತಾ ಅವರ ಜೊತೆಗಿರುವುದು ಅತ್ಯಗತ್ಯವಾಗಿದೆ. ಬೀದಿಗಿಳಿದು ಮೋದಿ ಸರ್ಕಾರದ ವಿರುದ್ಧ ಹೋರಾಡಬೇಕಿದೆ.

ಯಾಕೆಂದರೆ ತೀಸ್ತಾ ಸೋಲಬೇಕು ಅದು ಕೇವಲ ಅವರ ವೈಯಕ್ತಿಕ ಸೋಲಾಗುವುದಿಲ್ಲ, ಹೋರಾಟಗಾರರ ಸಾಮೂಹಿಕ ಸೋಲೂ ಆಗುವುದಿಲ್ಲ, ಬದಲಾಗಿ ಈ ದೇಶದಲ್ಲಿ ಪ್ರಜಾತಂತ್ರವೇ ಸೋಲುತ್ತದೆ. ಆ ಕಾರಣಕ್ಕೆ ನಾವೆಲ್ಲರೂ ಈಗ ತೀಸ್ತಾ ಬೆನ್ನಿಗೆ ನಿಲ್ಲಬೇಕಿದೆ. ■


ಎಸ್.ಕೆ.ನಟರಾಜ್


ಶಾರದಮ್ಮ


ವೆಂಕಟೇಶ್‌ಮೂರ್ತಿ


ಕಟ್ಟೆ ಸತ್ಯ


ಶಾಂತಕುಮಾರಿ

ಬಿಬಿಎಂಪಿ ಐವರು ಮೇಯರ್‌ಗಳು ದೋಚಿದ್ದು 19 ಸಹಸ್ರ ಕೋಟಿ!

ಹಿಂದಿದ್ದ ಬೆಂಗಳೂರು ಮಹಾನಗರ ಪಾಲಿಕೆ ರದ್ದಾಗಿ ಅದು ಬಿಬಿಎಂಪಿ ಅಂದರೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿ ಅಸ್ತಿತ್ವಕ್ಕೆ ಬಂದಿದ್ದು 2007ರ ಜನವರಿ 17ರಂದು. ಇವತ್ತು ಅದಕ್ಕೆ ಹೆಚ್ಚೂಕಮ್ಮಿ ಎಂಟೂವರೆ ವರ್ಷದ ಆಯಸ್ಸು. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ಕಾಲಕ್ಕೆ ರೂಪುಗೊಂಡ ಬಿಬಿಎಂಪಿಗೆ ಮೊದಲ ಬಾರಿ ಚುನಾವಣೆ ನಡೆದದ್ದು 2010ರಲ್ಲಿ, ಬಹುಶಃ ಅದೇ ಕೊನೆಯ ಚುನಾವಣೆಯಾದರೂ ಅಚ್ಚರಿಯಿಲ್ಲ. ಮೊದಲ ಮೂರು ವರ್ಷಗಳ ಕಾಲ ಚುನಾವಣೆಯಿಲ್ಲದೆ ಬಿಜೆಪಿ ಸರ್ಕಾರದ ಸುಪರ್ದಿಯಲ್ಲಿ ತದನಂತರ ಬಿಜೆಪಿಯೇ ಪಾಲಿಕೆಯನ್ನು ಆಕ್ರಮಿಸಿ ಅದರ ಐವರು ಮೇಯರ್‌ಗಳ ಕಪಿಮುಷ್ಠಿಯಲ್ಲಿ ಬಿಬಿಎಂಪಿ ಕಂಡ ಐಸಿರಿಯನ್ನು ಬಹುಶಃ ಬೆಂಗಳೂರಿನ ದುರ್ಗತಿ ಮತ್ತು ಈ ಬಗ್ಗೆ ತರಹೇವಾರಿ ಪತ್ರಿಕೆಗಳಲ್ಲಿ ವರದಿಯಾದ ರಾಶಿರಾಶಿ ಕರ್ಮಕಾಂಡಗಳ ಪೇಪರ್ ಕಟಿಂಗುಗಳ ತೂಕದ ಮೇಲೆಯೇ ಲೆಕ್ಕ ಹಾಕಬೇಕು.


ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದು 2008ರಲ್ಲಿ, ಬೆಂಗಳೂರಿನ ಒಟ್ಟು 25 ಮಂದಿ ಶಾಸಕರ ಪೈಕಿ ಬಿಜೆಪಿಯಿಂದಲೇ 18 ಮಂದಿ ಗೆದ್ದು ಬಂದರು. ಇದರರ್ಥ ಬೆಂಗಳೂರಿನ ಜನ ಬಿಜೆಪಿಯನ್ನು ನಂಬಿ ಗೆಲ್ಲಿಸಿದ್ದರು. ಮುಖ್ಯಮಂತ್ರಿ ಯಡ್ಡಿ ಬೆಂಗಳೂರನ್ನು ವಿಶ್ವದ ಸುಸಜ್ಜಿತ ನಗರಗಳ ಯಾದಿಯಲ್ಲಿ ಮೇಲ್ದರ್ಜೆಗೇರಿಸುತ್ತೇನೆಂದು ಭಾಷಣ ಬಿಗಿದದ್ದೇ ಬಿಗಿದದ್ದು. ಈ ಹಿಂದೆ ಕೇವಲ ನೂರು ವಾರ್ಡ್‌ಗಳು ಸೇರಿದಂತೆ 226 ಚದುರ ಕಿ.ಮೀ. ವ್ಯಾಪ್ತಿಗೊಳಪಟ್ಟಿದ್ದ ಬೆಂಗಳೂರಿನ ವಿಸ್ತಾರ ಸುತ್ತಮುತ್ತಲ ನೂರು ಹಳ್ಳಿಗಳನ್ನು ವ್ಯಾಪಿಸಿ 800 ಚ.ಕಿ.ಮೀಗೆ ವಿಸ್ತರಿಸಿ ದೈತ್ಯಾಕಾರ ತಾಳಿತಲ್ಲ-

ಅದಕ್ಕೆ ಸಿಎಂ ಯಡ್ಡಿ 10 ಮಂದಿ ಬಿಜೆಪಿ ಶಾಸಕರು ಮತ್ತು ಓರ್ವ ಕಾಂಗ್ರೆಸ್ ಶಾಸಕರನ್ನು ಸೇರಿಸಿ ಅಭಿವೃದ್ಧಿ ಸಮಿತಿಯೊಂದಕ್ಕೆ ಚಾಲನೆ ಕೊಟ್ಟರು. ಬ್ಯಾಟರಾಯನಪುರದ ಕೃಷ್ಣ ಭೈರೇಗೌಡರನ್ನು ಬಿಟ್ಟರೆ ಮಿಕ್ಕೆಲ್ಲರೂ ಸತೀಶ್ ರೆಡ್ಡಿ, ವಿಶ್ವನಾಥ್ ರೆಡ್ಡಿ, ಕಟ್ಟಾ, ಬೆಂಗಳೂರು ದಕ್ಷಿಣದ ಕೃಷ್ಣಪ್ಪ, ದಾಸರಹಳ್ಳಿ ಮುನಿರಾಜು, ಲಿಂಬಾವಳಿ, ಅಶೋಕ್, ರಾಜರಾಜೇಶ್ವರಿನಗರದ ಶ್ರೀನಿವಾಸ್, ಇತ್ಯಾದಿಗಳೆ. ಆ ಹೊತ್ತಿಗೆ ಬಿಡಿಎ ಬೊಕ್ಕಸದಲ್ಲಿ ಸಾವಿರ ಕೋಟಿಗೂ ಅಧಿಕ ಮೊತ್ತದ ಮೂಲ ಸೌಕರ್ಯ ನಿಧಿಯಿತ್ತು, ಹೊಸದಾಗಿ ಬಿಬಿಎಂಪಿ ವ್ಯಾಪ್ತಿಗೆ ಸೇರ್ಪಡೆಗೊಂಡ ನೂರು ಹಳ್ಳಿಗಳು ಮತ್ತದರ ಸುತ್ತಮುತ್ತಲ ಪ್ರದೇಶಗಳಲ್ಲಿ ರಿಂಗ್‌ರಸ್ತೆ, ವಿಶಾಲ ಪಾರ್ಕ್‌ಗಳು, ಕುಡಿಯುವ ನೀರು, ಸ್ಮಶಾನ, ಕಸದ ಗೋದಾಮು, ಆಟದ ಮೈದಾನ ಎಲ್ಲವನ್ನೂ ನಿರ್ಮಿಸಬೇಕಿತ್ತಲ್ಲವೆ? ಏಕೆಂದರೆ ಈ ಭಾಗದಲ್ಲಿ ಬೇಕಾಬಿಟ್ಟಿ ಕೆರೆಗಳು, ಗೋಮಾಳ, ಸರ್ಕಾರಿ ಭೂಮಿಗಳ ನಿಧಿಯೇ ಇತ್ತು,


625 ಕೋಟಿ ಬೋಗಸ್ ಬಿಲ್ಲು!

ಜನಜಂಗುಳಿ, ವಾಹನ ದಟ್ಟಣೆ, ಮೂತ್ರ ವಿಸರ್ಜನೆಗೂ ತುಂಡು ಭೂಮಿ ಗತಿಯಿಲ್ಲದ ಹಳೇ ಬೆಂಗಳೂರಿಗೆ ಹೋಲಿಸಿದರೆ ಈಗ ವ್ಯಾಪಿಸಿದ ಬೆಂಗಳೂರಿನಲ್ಲಿ ಕಲಿತ ಪಾಠದ ಪುರಾವೆ ಸಿಗಬೇಕಿತ್ತು, ಕನಸಿನ ಬೆಂಗಳೂರಿನ ಯಾವ ಲಕ್ಷಣವಾದರೂ ಕಾಣಬೇಕಿತ್ತು, ಇವತ್ತು ಬ್ರಿಟಿಷ್ ಕಾಲದ ವಿಕ್ಟೋರಿಯಾ, ಬೋರಿಂಗ್ ಆಸ್ಪತ್ರೆಗಳನ್ನು ಬಿಟ್ಟರೆ ಅಂಥ ಒಂದೇ ಒಂದು ಹೊಸ ಆಸ್ಪತ್ರೆಯನ್ನು ನಮ್ಮ ನಗರ ಪಿತೃಗಳಿಂದ ನಿರ್ಮಿಸಲಾಗಲಿಲ್ಲ, ಕಬ್ಬನ್ ಪಾರ್ಕ್, ಲಾಲ್‌ಬಾಗ್ ಥರದ ಬ್ರಿಟಿಷ್ ಕಾಲದ ಪಾರ್ಕ್‌ಗಳು ಕೂಡ ಕನಸಾಗಿಯೇ ಉಳಿದವು. ಒಂದೇ ಒಂದು ಹೊಸ ಸ್ಮಶಾನ, ಹೊಸ ಆಟದ ಮೈದಾನ ಬರಲಿಲ್ಲ, ಇನ್ನು ಕಸದ ಗುಂಡಿಗಳಿಗೆ ಜಾಗ ತಾನೇ ಎಲ್ಲುಳಿಯಲು ಸಾಧ್ಯ?

ಹೊಸ ಬಿಬಿಎಂಪಿಯ ಉದ್ಧಾರಕ್ಕೆಂದು ಮುಖ್ಯಮಂತ್ರಿ ಯಡ್ಡಿ ಹನ್ನೊಂದು ಮಂದಿ ಶಾಸಕರ


ಪಾಲಿಕೆ ಕಚೇರಿ

ಕಮಿಟಿ ರಚಿಸಿದ್ದರಲ್ಲ, ಅದಕ್ಕೆಂದು ಬಿಡಿಎ ಬೊಕ್ಕಸದಲ್ಲಿದ್ದ ಸಾವಿರ ಕೋಟಿಯ ಪೈಕಿ 624 ಕೋಟಿಗಳನ್ನು ಹೊಸದಾಗಿ ಸೇರ್ಪಡೆಗೊಂಡ ಪ್ರದೇಶಗಳ ಅಭಿವೃದ್ಧಿಗೆಂದೇ ಯಡ್ಡಿ ಮಂಜೂರು ಮಾಡಿದರು. ಪ್ರತಿಯೊಬ್ಬ ಶಾಸಕನಿಗೂ ತಲಾ 60 ಕೋಟಿಯಂತೆ ಕೊಟ್ಟು ಅವರು ಏನೇನು


ಯಡ್ಡಿ

ಮಾಡಬೇಕೆಂದು ಹೇಳುತ್ತಾರೋ ಅದಕ್ಕಾಗೇ ಈ ದುಡ್ಡನ್ನು ಬಳಸಬೇಕೆಂದು ಅಧಿಕಾರಿಗಳಿಗೆ ಸೂಚನೆಯಿತ್ತರು.

ಮುಖ್ಯಮಂತ್ರಿಯೇ ಹೇಳಿದ ಮೇಲೆ ಎಮ್ಮೆಲ್ಲೆಗಳು ಹೇಳಿದಷ್ಟನ್ನು ತಾನೇ ಬಿಡಿಎ ಮತ್ತು ಪಾಲಿಕೆ ಇಂಜಿನಿಯರ್‌ಗಳು ಕೇಳಬೇಕು. ಯಾವುದೋ ರಸ್ತೆಗೆ ಜೆಲ್ಲಿ, ಫುಟ್‌ಪಾತ್ ಹಳೇ ಕಲ್ಲಿಗೇ ಬಿಲ್ಲು, ಕಟ್ಟಿದ್ದ ಮೋರಿಗೇ ಮತ್ತೆ ಬಿಲ್ಲು, ಹಾಕಿದ ಟಾರಿಗೇ ಡಾಂಬರು ಬಳಿದಂತೆ ಆರೇ ತಿಂಗಳಲ್ಲಿ 624 ಕೋಟಿ ಮುಗಿದು ಹೋಯಿತು. ಇದು ಬಿಡಿಎ ಲೆಕ್ಕಕ್ಕೆ ಬಂದಿತ್ತಲ್ಲ; ಬಿಡಿಎ ಮೂಲಕವೇ ಕಾಮಗಾರಿಗಳ ಬಿಲ್ಲಿನ ದುಡ್ಡೂ ಕಂಟ್ರಾಕ್ಟರುಗಳ ಜೇಬು ಸೇರಿತು. ಕಂಟ್ರಾಕ್ಟರುಗಳೆಲ್ಲ ಶಾಸಕರ ಸಂಬಂಧಿಗಳೇ, ಇದಾಗಿ ವರ್ಷಕ್ಕೇ ಮುಖ್ಯಮಂತ್ರಿಗಳು ಯಲಹಂಕ, ರಾಜರಾಜೇಶ್ವರಿನಗರ, ದಾಸರಹಳ್ಳಿ, ಯಶವಂತಪುರ, ಬೊಮ್ಮನಹಳ್ಳಿ, ಹೆಬ್ಬಾಳ, ಬೆಂಗಳೂರು ದಕ್ಷಿಣ, ಕೆ.ಆರ್. ಪುರ, ಪದ್ಮನಾಭ ನಗರ ಇತ್ಯಾದಿ ಕ್ಷೇತ್ರಗಳಿಗೆಂದು ತಲಾ ಐನೂರರಿಂದ 700 ಕೋಟಿ ರೂಪಾಯಿಗಳ ವಿಶೇಷ ಪ್ಯಾಕೇಜು ಕೊಟ್ಟರು.

ಮತ್ತೆ 4 ಸಾವಿರ ಕೋಟಿ

ಹೆಚ್ಚೂ ಕಮ್ಮಿ ನಾಲ್ಕು ಸಾವಿರ ಕೋಟಿಯಷ್ಟು ದುಡ್ಡು ಪಾಲಿಕೆ ಬೊಕ್ಕಸದಿಂದ ಬಿಡುಗಡೆಯಾಗಿತ್ತು, ಈ ಪಾಟಿ ದುಡ್ಡಿನಿಂದ ಬೆಂಗಳೂರು ಸಿಂಗಪೂರ್ ಮೀರಿಸಬೇಕಿತ್ತಲ್ಲವೇ?

ಮಂಜೂರಾದ ನಾಲ್ಕು ಸಾವಿರ ಕೋಟಿ ಪೂರ್ತಿ ಒಂದೇ ವರ್ಷಕ್ಕೆ ಖಾಲಿಯಾಗಿ ಅದರ ಬಿಲ್ಲು ಕಂಟ್ರಾಕ್ಟರುಗಳ ಜೇಬು ಸೇರಿತ್ತು. ಆದರೆ ಎಮ್ಮೆಲ್ಲೆಗ ಕ್ಷೇತ್ರಗಳ ಪರಿಸ್ಥಿತಿ ಮಾತ್ರ ಹಿಂದಿನಂತೆಯೇ ಇತ್ತು. ಹಿಂದೆ ಬಿಡಿಎ ಮೂಲಕ ಮಂಜೂರಾದ 624 ಕೋಟಿ ಮತ್ತು ನಂತರ ಮಂಜೂರಾದ ನಾಲ್ಕು ಸಾ ಚಿಲ್ಲರೆ ಕೋಟಿ ದುಡ್ಡು ಏನಾಯಿತೆಂದು ಕೆದಕಹೊರ ಪತ್ರಕರ್ತರಿಗೆ ಬೆಚ್ಚಿ ಬೀಳಿಸುವಂಥ ದಾಖಲೆಗಳು ಸಿಕ್ಕವು. 624 ಕೋಟಿ ಪೂರ್ತಿ ಬೋಗಸ್ ಬಿಲ್ ಮೂಲಕ ದೋಚಲಾಗಿತ್ತು, ಹಾಗೇ ಬಿಡಿಎ ಮೂಲ ನಡೆದಿದೆಯೆಂದು ಸೃಷ್ಟಿಸಿದ ದಾಖಲೆಗಳನ್ನೇ ಬಳಸಿ ಅದೇ ಕೆಲಸಗಳನ್ನು ಪಾಲಿಕೆ ವತಿಯಿಂದಲೂ ಮಾಡಿದಂತೆ ಮತ್ತೊಂದು ಸುತ್ತಿನ ಬಿಲ್ಲು ಹಾಕಲಾಗಿತ್ತು. ಅಂದರೆ ಮಾಡದೇ ಇದ್ದ ಕೆಲಸಕ್ಕೆ ಎರಡೆರಡು ಬಿಲ್ಲು!

ಈ ಬಗ್ಗೆ ಲೋಕಾಯುಕ್ತಕ್ಕೆ ದೂರುಗಳು ಬಂದ ಟಿವಿಸಿಸಿ ಕಮಿಟಿ ರಚಿಸಲಾಯಿತು. ಏನೇನೋ ತನಿಖೆಗಳಾದವು. ಬಿಎಂಟಿಎಫ್ ರಚಿಸಲಾಯಿತು. ಆದರೆ ತನಿಖೆ ಶುರುವಾಗುವ ಮೊದಲೇ ಹೊಸ ಫಂಡು ಬಿಡುಗಡೆಗೊಳಿಸಲಾಯಿತು.

ಆಗ ಪಾಲಿಕೆ ಆಡಳಿತಾಧಿಕಾರಿಯಾಗಿದ್ದದ್ದು ಬಾಲಸುಬ್ರಹ್ಮಣ್ಯಂ. ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ರಸ್ತೆಯ ಮಹತ್ವ ಮತ್ತು ಪರಿಕಲ್ಪನೆಯೇ ಇಲ್ಲದೆ ಬೇಕಾಬಿಟ್ಟಿ ರಸ್ತೆ ಕಾಮಗಾರಿಗೆ ಚಾಲ್ತಿ ಕೊಟ್ಟರು. ನಿರ್ದಿಷ್ಟ ಯೋಜನೆ, ದೂರದೃಷ್ಟಿ ಯಾವುದೂ ಇಲ್ಲದೇ ಬೇಕಾಬಿಟ್ಟಿ ಅಂಡರ್‌ಪಾಸ್, ಓವರ್‌ಗಳನ್ನು ನಿರ್ಮಿಸಿ ಅಧ್ವಾನಕ್ಕೆ ಕಾರಣರಾದರು. ಇದಕ್ಕೆಂದು 3800 ಕೋಟಿ ರೂಪಾಯಿಗಳ ಆತುರಾತುರದ ಯೋಜನೆ ರೂಪಿಸಿ ವರ್ಕ್‌ಕೋಡ್ ನೀಡಲಾಯ್ತು, ಇದೆಲ್ಲವೂ ಬೋಗಸ್ ವರ್ಕ್‌ಕೋಡುಗಳೆ. ಇದರ ವಿರುದ್ಧ ನಾಲ್ವರು


ಬೆಂಗಳೂರಿನ ಉದ್ಧಾರಕ್ಕೆ 20 ಸಾವಿರ ಕೋಟಿ ಯಾರ ದುಡ್ಡು


ಅಂಡರ್‌ಪಾಸ್ ಕಾಮಗಾರಿ

ಬೆಂಗಳೂರಿನ ಉದ್ಧಾರಕ್ಕಾಗಿ ತಾವು 20 ಸಾವಿರ ಕೋಟಿಯಷ್ಟು ದುಡ್ಡು ಸುರಿದಿದ್ದೇವೆಂದು ಬಿಜೆಪಿ ಹೇಳಿಕೊಳ್ಳುತ್ತಿದೆ. ಈ ಪೈಕಿ ನರ್ಮ್ ಯೋಜನೆಯ ಬಾಬತ್ತೆಂದು ಕೇಂದ್ರದ ಕಾಂಗ್ರೆಸ್ ಸರ್ಕಾರ ನೀಡಿದ 24 ಸಾವಿರ ಕೋಟಿಯ ಪಾಲೆಷ್ಟೆಂದು ಯಾವ ಬಿಜೆಪಿ ನಾಯಕರೂ ಬಾಯಿ ಬಿಡುತ್ತಿಲ್ಲ. ಗುತ್ತಿಗೆದಾರರಿಗೆ ನೀಡಬೇಕಾದ ಬಾಕಿ ಮತ್ತು ಹಾಲಿ ಚಾಲ್ತಿಯಲ್ಲಿರುವ ಟೆಂಡರ್‌ಗಳ ಮೊತ್ತವೇ ಒಂಬತ್ತೂವರೆ ಸಾವಿರ ಕೋಟಿಯಾಗುತ್ತದೆ.

ಬಿಜೆಪಿಯ 20 ಸಾವಿರ ಕೋಟಿಯಲ್ಲಿ ಒಂಬತ್ತೂವರೆ ಸಾವಿರ ಕೋಟಿ ಕಳೆದರೆ ಉಳಿಯುವು ಹತ್ತೂವರೆ ಸಾವಿರ ಕೋಟಿ ಮಾತ್ರ. ಆ ಹತ್ತೂ ಸಾವಿರ ಕೋಟಿಯಲ್ಲಿ ಪಾಲಿಕೆ ನೌಕರರ ಸಂಬ ಕೌನ್ಸಿಲರ್‌ಗಳ ಖರ್ಚುವೆಚ್ಚ ಅಧಿಕಾರಿಗಳ ಕಾರು ವಾಹನ ಬಾಡಿಗೆ, ಸ್ಥಾಯಿ ಸಮಿತಿಗಳ ಮೋಜು ಮಸ್ತಿ ಎ ಕಳೆದರೆ ಉಳಿಯುವುದು ದೊಡ್ಡ ಸೊನ್ನೆಯೆ.

ತಮಾಷೆಯೆಂದರೆ ಇದ್ಯಾವುದನ್ನೂ ಬಿಜೆಪಿ ಬೊಕ್ಕಸದಿಂದಾಗಲಿ ಸರ್ಕಾರದ ತಿಜೋರಿಯಿಂದಾ ನೀಡಿಲ್ಲ. ಬೆಂಗಳೂರಿನ ಜನ ಕಟ್ಟಿದ ತೆರಿಗೆ ಶು ಮಾತ್ರದಿಂದಲೇ ಕೊಟ್ಟಿದ್ದು ಬಿಟ್ಟರೆ ಯಾವ ಬಿ ನಾಯಕರೂ ತಮ್ಮ ಮನೆಯಿಂದ ತಂದು ಕೊಟ್ಟಿಲ್ಲ. ಎಂ ವರ್ಷಗಳ ಅವಧಿಯ ಎಲ್ಲಾ ಹಗರಣಗಳು ಲೂಟಿ, ಬ ಬಿಲ್ಲು, ಸಾಲ, ಕಟ್ಟಿದ ಬಡ್ಡಿಗೆ ಹೋಲಿಸಿದರೆ 20 ಸಾ ಕೋಟಿಯಲ್ಲಿ ನಯಾಪೈಸೆಯ ಉದ್ಧಾರ ಬೆಂಗಳೂರಿಗಾಗಿಲ್ಲ.


ಕೆಂಪೇಗೌಡ ಪ್ರತಿಮೆ

ಣಕಾಸು ನಿಯಂತ್ರಕರ ವಿರುದ್ಧ ಕ್ರಿಮಿನಲ್ ೊಕದ್ದಮೆ ದಾಖಲಿಸಲಾಯಿತು. ಇನ್ನೇನು ಡಳಿತಾಧಿಕಾರಿ ಸುಬ್ರಹ್ಮಣ್ಯಂ ಕೈಗೇ ಕೋಳ ೊಡಿಸಲಾಗುತ್ತದೆ ಎನ್ನುವ ಹೊತ್ತಿಗೆ ಅವರೇ ಜಿನಾಮೆ ಕೊಟ್ಟು ನಾಪತ್ತೆಯಾಗಿದ್ದರು.

ಮೇಯರ್ ಫಂಡ್ ದೋಖಾ!

ಬಿಜೆಪಿ ಸರ್ಕಾರದ ಪ್ರಾರಂಭದ ಮೂರು ರ್ಷಗಳ ಕಾಲ ಅಕ್ಷರಶಃ ಪಾಲಿಕೆಯನ್ನಾಳಿದ್ದು ಆರ್. ಅಶೋಕ್ ಮತ್ತವರ ಎಮ್ಮೆಲ್ಲೇ ಸಹಚರರ ಕೂಟ. 010ರಲ್ಲಿ ಬಿಬಿಎಂಪಿಗೆ ಚುನಾವಣೆಯಾಗುವ ೊತ್ತಿಗೆ ಸಾಲ, ಬಾಕಿ ಬಿಲ್ಲು, ಚಾಲ್ತಿಯಲ್ಲಿದ್ದ ಮಗಾರಿಗಳ ಮೊತ್ತವೂ ಸೇರಿದಂತೆ ಪಾಲಿಕೆಯ ೇಲಿದ್ದ ಹೊರೆಯೇ ಎಂಟು ಸಾವಿರ ೋಟಿಯಾಗಿತ್ತು.

ಬಿಜೆಪಿಯೇ ಆಳ್ವಿಕೆಯಲ್ಲಿತ್ತಾದ್ದರಿಂದ ಅಧಿಕಾರದ ಭಾವದಿಂದಾಗಿ ಕಾಂಗ್ರೆಸ್ ನೆಲ ಕಚ್ಚಿತು. ಪಾಲಿಕೆ ಜೆಪಿ ವಶವಾಯಿತು. ಬಿಜೆಪಿಯ ಮೊದಲ ೇಯರ್ ಎಸ್.ಕೆ. ನಟರಾಜ್ ಹೇಳಿಕೇಳಿ ಆರ್. ಶೋಕ್ ಬಲಗೈ ಬಂಟ. ಉಪ ಮೇಯರ್ ದಿಯೇರಿದ್ದು ಸಿ.ವಿ. ರಾಮನ್‌ನಗರದ ಬಿಜೆಪಿ ಶಾಸಕ ಘು ಪತ್ನಿಯ ತಮ್ಮ ದಯಾನಂದ್. ಪರ್ಯಾಸವೆಂಬಂತೆ ಈ ಹಿಂದೆ ಮೇಯರ್ ಫಂಡ್ ೊತ್ತ ಕೇವಲ ಒಂದು ಕೋಟಿಯಷ್ಟಿದ್ದದ್ದು ಈಗ ನೂರು ಕೋಟಿಗೇರಿತ್ತು, ಅಂದರೆ ಶೇ. 100ರಷ್ಟು ಚ್ಚು. ಉಪಮೇಯರ್ ನಿಧಿಯೆಂದು ಇದ್ದ 25 ಲಕ್ಷ 0 ಕೋಟಿಗೇರಿತ್ತು.

ಹಿಂದಾದರೆ ಜನಪರ ಸಂಘಟನೆಗಳು, ನಿರ್ಗತಿಕರು, ೋಗಿಗಳು, ಸಮಾಜ ಸೇವೆಗೆಂದು ಡುಗಡೆಯಾಗುತ್ತಿದ್ದ ಮೇಯರ್ ಫಂಡು ನೂರು ೋಟಿಗೇರಿದ್ದೇ ಅದರ ಗುಣವೇ ಬದಲಾಗಿಹೋಗಿತ್ತು. ಮೇಯರ್ ಫಂಡಿನ ನೂರು ಕೋಟಿ ಮತ್ತು ಉಪಮೇಯರ್ ಸುಪರ್ದಿಯ 50 ಕೋಟಿಯನ್ನು ್ಯವಸ್ಥಿತವಾಗಿ ದೋಚಲೆಂದೇ ಭೂಸೇನಾ ನಿಗಮ ಂಬ ದಗಲುಬಾಜಿ ವ್ಯವಸ್ಥೆಯೊಂದನ್ನು ೂಪಿಸಲಾಯ್ತು. ಅಂದರೆ ಪಾರದರ್ಶಕ ಯಮಾವಳಿಗಳನ್ನೆಲ್ಲ ವಂಚಿಸಿ ಕಾಮಗಾರಿಯನ್ನೇ ಡೆಸದೆ ಭೂಸೇನೆಯ ಖದೀಮರ ಬಾಯಿಗಿಷ್ಟು ಹಾಕಿ ದೀ ಬಿಲ್ಲಿನ ಮೊತ್ತವನ್ನು ವ್ಯವಸ್ಥಿತವಾಗಿ ೋಚುವುದು!


ಮೇಯರ್ ಎಸ್.ಕೆ. ನಟರಾಜ್ ಪಕ್ಷನಿಷ್ಠೆಯೇ ಾಗಿತ್ತು, ಯಾರು ಮೊದಲೇ 5 ಪರ್ಸೆಂಟ್ ಲಂಚ ೂಡುತ್ತಾರೋ ಅವರು ಯಾವ ಪಕ್ಷಕ್ಕೆ ಸೇರಿದರೂ ೋಟ ಲೆಕ್ಕದಲ್ಲಿ ಮೇಯರ್ ಫಂಡ್ ಮಂಜೂರು ಾಡಿಬಿಡುತ್ತಿದ್ದರು. ನೂರು ಕೋಟಿಯ ಮೇಯರ್ ಂಡ್‌ಗೆ ನಿಂತ ಜಾಗದಲ್ಲೇ 5 ಕೋಟಿ ಬರುತ್ತಿತ್ತು, ಾಗೇ ಉಪಮೇಯರ್ ಬಾಬತ್ತಿನಿಂದ ಎರಡೂವರೆ ೋಟಿ ಹುಟ್ಟುತ್ತಿತ್ತು, ಹೀಗೆ ಬರಿದ ಮೇಯರ್-ಉಪಮೇಯರ್ ಫಂಡಿನ ಐದು ಪರ್ಸೆಂಟನ್ನು ರೋಬ್ಬರಿ ಹಂಚಿಕೊಂಡಿದ್ದು ಬಿಜೆಪಿಯ ಡಿಸಿಎಂ ಶೋಕ್ ಮತ್ತು ಎಸ್.ಕೆ. ನಟರಾಜ್.

ಹೆಬ್ಬೆಟ್ಟು ಶಾರದಮ್ಮ

ಆ ಹೊತ್ತಿಗೆ ಪಾಲಿಕೆಯ ವಾರ್ಷಿಕ ಾದಾಯವಿದ್ದದ್ದು ಎರಡೂವರೆ ಸಾವಿರ ಕೋಟಿ ಾತ್ರ. ಆದರೆ ನಟರಾಜ್ ಮಂಡಿಸಿದ್ದು 8 ಸಾವಿರದ 0 ಕೋಟಿಯ ಬಜೆಟ್ಟು.

ಇದಕ್ಕೂ ಹಿಂದಿನ ವರ್ಷ ಕೇವಲ 4246

ಕಸಾಗಾರಗಳನ್ನೂ ಬಿಡದೇ ಮಾರಿಕೊಂಡರು


ಎಸ್.ಎಂ. ಕೃಷ್ಣ


ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗ ಪಾಲಿಕೆಯ ವ್ಯಾಪ್ತಿಯಿದ್ದದ್ದು ಕೇವಲ 150 ಚ.ಕಿ.ಮೀ ಮತ್ತು 87 ವಾರ್ಡುಗಳು ಮಾತ್ರ. ಜೊತೆಗೆ ಏಳು ಸಿಎಂಸಿಗಳಿದ್ದವಲ್ಲ, ಇದನ್ನೆಲ್ಲ ಕ್ರೂಢೀಕರಿಸಿ ನೂರು ವಾರ್ಡುಗಳನ್ನಾಗಿ ರೂಪಿಸುವ ಹೊತ್ತಿಗೆ ಕಸದ ಸಮಸ್ಯೆಯನ್ನು ಸೂಕ್ಷ್ಮವಾಗೇ ದೂರಾಲೋಚಿಸಿದ ಕೃಷ್ಣ ಬೆಂಗಳೂರಿನ ನಾಲ್ಕೂ ದಿಕ್ಕುಗಳಲ್ಲಿ ಕಸ ಸಂಗ್ರಹಾಗಾರಗಳಿಗೆಂದು ಭೂಮಿ ಕಾಯ್ದಿರಿಸಿದ್ದರು.

ಮಾವಳ್ಳಿಪುರ, ಬನ್ನೇರಘಟ್ಟ ರಸ್ತೆ, ಮಂಡೂರು ಮತ್ತು ಮಾಗಡಿ ರಸ್ತೆ ಪ್ರದೇಶದಲ್ಲಿ ಗಾರ್ಬೇಜ್ ಯಾರ್ಡ್‌ಗಳನ್ನು ಗುರುತಿಸಲಾಯ್ತು. ಹಾಗೇ ಗುರುತಿಸಿದ ನಿರ್ಜನ ಪ್ರದೇಶಗಳ ಸುತ್ತಣ ಒಂದು ಕಿ.ಮೀ ಪ್ರದೇಶವನ್ನು ಬಫರ್ ಜೋನ್ ಎಂದೂ ಅಂದರೆ ಕಸದ ಸಂಗ್ರಹಾಗಾರಗಳ ಸುತ್ತ 1 ಕಿ.ಮೀ ಪ್ರದೇಶದಲ್ಲಿ ಯಾವುದೇ ಅಭಿವೃದ್ಧಿ ನಡೆಸದೇ ನಿರ್ಜನ ಪ್ರದೇಶವನ್ನಾಗಿಯೇ ಉಳಿಸಬೇಕೆಂಬುದು ಕೃಷ್ಣರ ಮುಂದಾಲೋಚನೆಯಾಗಿತ್ತು, ಹಾಗೆಯೇ ಇದ್ದಿದ್ದರೆ ಬೆಂಗಳೂರಿನ ಕಸದ ಸಮಸ್ಯೆ ಉದ್ಭವಿಸುತ್ತಲೂ ಇರಲಿಲ್ಲ.

ಆದರೆ ಬಿಜೆಪಿ ಅಧಿಕಾರಕ್ಕೆ ಬಂದು ಯಡ್ಡಿ ಮುಖ್ಯಮಂತ್ರಿಯಾಗಿದ್ದೇ ಆರ್. ಅಶೋಕ್ ನೇತೃತ್ವದ ರಿಯಲ್ ಎಸ್ಟೇಟ್ ಲಾಬಿ ಆರ್ಭಟಿಸಿತು. 1 ಕಿ.ಮೀ ವ್ಯಾಪ್ತಿಯಿದ್ದ ಬಫರ ಜೋನ್ ಅನ್ನು 50 ಮೀಟರ್‌ಗಳಿಗೆ ಕುಗ್ಗಿಸಲಾಯ್ತು. ಕಸದ ಬೆಟ್ಟವೊಂದರ ಪಕ್ಕವೇ ಲೇಔಟ್‌ಗಳು ತಲೆ ಎತ್ತಲಾರಂಭಿಸಿದರೆ ಜನಕ್ಕದು ಕಣ್ಣು ಕುಕ್ಕದೇ ಇರುತ್ತಾ? ಜನ ಬೀದಿಗಿಳಿದು ಬೊಬ್ಬೆ ಹಾಕಿದ್ದು ಈ ಕಾರಣಕ್ಕೇ....


ಕಸಾಗಾರ

ಕೃಷ್ಣ ಯೋಜಿಸಿದ್ದ ಕಸ ಸಂಗ್ರಹಾರಗಳ ಭೂಮಿಯನ್ನೂ ಬಿಡದೇ ಬಿಲ್ಡರ್‌ಗಳ ಬಾಯಿಗೆ ಹಾಕಿದ್ದೊಂದೇ ಬಿಜೆಪಿಯ ಸಾಧನೆ!


ಆರ್. ಅಶೋಕ್

ಕೋಟಿ ರೂಪಾಯಿಗಳ ಮೊತ್ತದ ಬಜೆಟ್ ಮಂಡಿಸಲಾಗಿತ್ತು, ಅದೂ ಆಡಳಿತಾಧಿಕಾರಿಯಿದ್ದಾಗ. ಆಗಲೂ ಬಿಬಿಎಂಪಿಯ ವಾರ್ಷಿಕ ಆದಾಯ ಇಷ್ಟೇ ಇತ್ತು, ಹೆಚ್ಚೂಕಮ್ಮಿ 5 ಸಾವಿರ ಕೋಟಿಯಷ್ಟು ಸಾಲಾಧಾರಿತ ಬಜೆಟ್ ಮಂಡಿಸಿದ ಎಸ್.ಕೆ. ನಟರಾಜ್ ಬೆಂಗಳೂರಿಗೆ ಮಾಡಿದ ಏಕಮೇವಾದ್ವಿತೀಯ ಉಪಕಾರವೆಂದರೆ ಬರೋಬ್ಬರಿ ನಾಲ್ಕು ಸಾವಿರ ಕೋಟಿ ಮೊತ್ತದ ಬಿಲ್ಲುಗಳನ್ನು ಬಾಕಿಯಿರಿಸಿಯೇ ಪೀಠದಿಂದಿಳಿದಿದ್ದು!

ನಂತರ ಮೇಯರ್ ಸ್ಥಾನವನ್ನಲಂಕರಿಸಿದ್ದು ಶೆಟ್ಟಳ್ಳಿ ವಾರ್ಡಿನ ಕೌನ್ಸಿಲರ್ ಶಾರದಮ್ಮ. ಪರಿಶಿಷ್ಟ ಮಹಿಳೆಗೆ ಮೀಸಲಾಗಿದ್ದರಿಂದ ಬಾಯಿಲ್ಲದ, ಮುಖವಿಲ್ಲದ ಓದುಬರಹವೇ ಗೊತ್ತಿಲ್ಲದ ಶಾರದಮ್ಮನನ್ನು ಹಿಡಿದು ತಂದು ಮೇಯರ್ ಗಾದಿಗೆ ಕಟ್ಟಲಾಯ್ತು. ಶಾರದಮ್ಮನ ಗಾಡ್‌ಫಾದರ್ ದಾಸರಹಳ್ಳಿ ಶಾಸಕ ಮುನಿರಾಜು ಕೂಡ ಅಶೋಕ್ ಬಂಟನೆ. ಹೆಬ್ಬೆಟ್ಟು ಶಾರದಮ್ಮ ಹೆಚ್ಚೂಕಮ್ಮಿ ರಬ್ಬರ್‌ಸ್ಟಾಂಪ್ ಮಟ್ಟಿಗಷ್ಟೇ ಸೀಮಿತಳಾದಳು. ಈಕೆಯ ಗಂಡ ರಾಮಾಂಜಿನಪ್ಪ ಬೆಳ್ಳಂಬೆಳಗ್ಗೆಯೇ ಕುಡಿದು ಚಿತ್ತಾಗಿ ಮೇಯರ್ ಛೇಂಬರಿನಲ್ಲಿ ತಟ್ಟಾಡುತ್ತಿದ್ದ.

ಅದೇನು ಸೌಭಾಗ್ಯವೋ ಶಾರದಮ್ಮ 2011-12ನೇ ಸಾಲಿಗೆ 9 ಸಾವಿರದ 197 ಕೋಟಿ ರೂಪಾಯಿಗಳ ಬೃಹತ್ ಮೊತ್ತದ ಬಜೆಟ್ ಮಂಡಿಸಿಬಿಟ್ಟಳು. ಆಗಲೂ ಬಿಬಿಎಂಪಿಯ ವಾರ್ಷಿಕ ಆದಾಯವಿದ್ದದ್ದು ಕೇವಲ ಎರಡೂವರೆ ಸಾವಿರ ಕೋಟಿ ಮಾತ್ರ. ತಾನು ಆಸ್ತಿ ತೆರಿಗೆಯಿಂದ 1600 ಕೋಟಿ ಸಂಗ್ರಹಿಸಬಲ್ಲೆ, ಜಾಹಿರಾತಿನಿಂದ ನೂರು ಕೋಟಿ, ಅಕ್ರಮ ಸಕ್ರಮದಿಂದ 750 ಕೋಟಿ, ಟ್ರೇಡ್ ಲೈಸೆನ್ಸ್‌ನಿಂದ 107 ಕೋಟಿ, ಅಭಿವೃದ್ಧಿ ಶುಲ್ಕದಿಂದ 120 ಕೋಟಿ, ಬಿಲ್ಡಿಂಗ್ ಪ್ಲಾನ್ ಮಂಜೂರಾತಿಯಿಂದ 701 ಕೋಟಿ ಸಂಗ್ರಹಿಸುತ್ತೇನಾದ್ದರಿಂದ ಈ ಪಾಟಿ ಮೊತ್ತದ ಬಜೆಟ್ ಖಂಡಿತಾ ಸಾಧ್ಯವೆಂದು ದೌಲು ಮೆರೆದಿದ್ದಳು.

ಸಾಲದ ಭಾರ

ಆದರೆ ವಾಸ್ತವವೇ ಬೇರೆಯಿತ್ತು, ಆಸ್ತಿ


ಕಸದ ರಾಶಿ

ತೆರಿಗೆಯಿಂದ 1600 ಕೋಟಿಗೆ ಬದಲಾಗಿ ಕೇವಲ 894 ಕೋಟಿ ಮಾತ್ರವೇ ಸಂಗ್ರಹಗೊಂಡಿತ್ತು, ಜಾಹಿರಾತಿನಿಂದ ಕೇವಲ 10 ಕೋಟಿ ಬಂದಿತ್ತು, ಟ್ರೇಡ್ ಲೈಸೆನ್ಸ್‌ನಿಂದ ಬಂದದ್ದು ಕೇವಲ 16 ಕೋಟಿ 20 ಲಕ್ಷ ಮಾತ್ರ. ಬಿಲ್ಡಿಂಗ್ ಪ್ಲಾನ್ ಮಂಜೂರಾತಿಯಿಂದ 701 ಕೋಟಿಗೆ ಬದಲಾಗಿ 460 ಕೋಟಿಯಷ್ಟೇ ಬಂತು. ಅಕ್ರಮ ಸಕ್ರಮ ನಡೆಯಲೇ ಇಲ್ಲವಾದ್ದರಿಂದ ಬರಬೇಕಿದ್ದ 750 ಕೋಟಿಯ ಪ್ರಶ್ನೆಯೇ ಇಲ್ಲವಲ್ಲ. ಹೀಗಾಗಿ ಈ ಹಿಂದೆ ಪಾಲಿಕೆಗಿದ್ದ ಒಟ್ಟು ಸಾಲ ಎರಡೂವರೆ ಕೋಟಿಯಿಂದ ಮೂರೂವರೆ ಸಾವಿರ ಕೋಟಿಗೇರಿತು. ಇದಲ್ಲದೇ ಗುತ್ತಿಗೆದಾರರಿಗೆ ಎರಡು ಸಾವಿರ ಕೋಟಿ ಮೊತ್ತದ ಬಿಲ್ಲು ಬಾಕಿಯಿತ್ತು.

ಭಯಾನಕ ವಾಸ್ತವವೆಂದರೆ ಈ ಹೊತ್ತಿಗೆ ಪಾಲಿಕೆ ವಿವಿಧ ಬ್ಯಾಂಕುಗಳಿಂದ ಪಡೆದಿದ್ದ ಒಟ್ಟು ಸಾಲ 65 ಸಾವಿರದ 161.25 ಕೋಟಿಗೇರಿತ್ತು, ಇದಕ್ಕೆಂದು ವರ್ಷವೊಂದಕ್ಕೆ ಕಟ್ಟಬೇಕಿದ್ದ ಬಡ್ಡಿಯೇ 400 ಕೋಟಿಗೂ ಮೀರಿತು. ಯಡ್ಡಿ ಸರ್ಕಾರದಿಂದ 1300 ಕೋಟಿ ರೂಪಾಯಿಗಳ ಅನುದಾನವನ್ನು ನಿರೀಕ್ಷಿಸಿದ್ದ ಶಾರದಮ್ಮನಿಗೆ ಅವರದ್ದೇ ಸರ್ಕಾರ ನೀಡಿದ್ದು ಕೇವಲ ಮುನ್ನೂರು ಕೋಟಿ. ಅದೂ ಅಲ್ಪಸ್ವಲ್ಪದ ರೂಪದಲ್ಲಿ!

ಬಿಬಿಎಂಪಿಯೇನೋ ಎಕ್ಕುಟ್ಟಿತ್ತಾದರೂ ಹೆಬ್ಬೆಟ್ಟು ಶಾರದಮ್ಮನ ಗಂಡ ರಾಮಾಂಜಿನಪ್ಪನ ಸ್ಥಿತಿ ಸಾಕಷ್ಟು ಸುಧಾರಿಸಿತ್ತು. ಕಳಪೆ ರಾಜಾವಿಸ್ಕಿ ಕುಡಿಯುತ್ತಿದ್ದವನು ಈಗ ಸಿಗ್ನೇಚರ್ ವಿಸ್ಕಿಗೆ ಬಡ್ತಿ ಪಡೆದಿದ್ದ. ಅಬ್ಬಿಗೆರೆಯಲ್ಲಿ ಭರ್ಜರಿ ಎರಡು ಸೈಟು ಖರೀದಿಸಿದ. ಹೆಸರಘಟ್ಟ ರಸ್ತೆಯಲ್ಲೊಂದು ಬಂಗಲೆಯೆಬ್ಬಿಸಿದ. ಇನ್ನು ಗಾಡ್‌ಫಾದರ್‌ಗಳಾದ ಅಶೋಕ್ ಮತ್ತು ಮುನಿರಾಜು ಖಮಾಯಿಸಿದ್ದು.....?

ನಂತರ ಮೇಯರ್ ಸರದಿ ಕತ್ರಿಗುಪ್ಪೆಯ ಕೌನ್ಸಿಲರ್ ವೆಂಕಟೇಶ್ ಮೂರ್ತಿಯದ್ದು. ಹೇಳಿಕೇಳಿ ಡಿಸಿಎಂ ಈಶ್ವರಪ್ಪನ ಬಂಟ. ಶಾರದಮ್ಮನಷ್ಟಲ್ಲದೇ ಹೋದರೂ ಎಂಟೂವರೆ ಸಾವಿರ ಕೋಟಿಯ ಬಜೆಟ್ ಮಂಡಿಸಿದರು. ಮೇಯರ್ ಫಂಡಿನ ಕಮೀಷನ್ ಬಾಬತ್ತು, ತಮ್ಮನ ಹೆಸರಲ್ಲಿ ಮಾಡಿದ ಕಾಂಟ್ರಾಕ್ಟು, ಅಳಿದುಳಿದ ಪಾಲಿಕೆ ಸೊತ್ತನ್ನೂ ಬಿಡದೇ ಬೇಲಿ ಸುತ್ತಿದ್ದು ಬಿಟ್ಟರೆ ವೆಂಕಟೇಶ್ ಮೂರ್ತಿ ಮೇಯರ್‌ಗಿರಿಯಿಂದ ಬಿಬಿಎಂಪಿಗೆ ಬಂದದ್ದು ಸಾಲದ ಹೊರೆಯೊಂದೇ. ಮೂರೂವರೆ ಸಾವಿರ ಕೋಟಿಯಷ್ಟಿದ್ದ ಪಾಲಿಕೆ ಸಾಲ ನಾಲ್ಕು ಸಾವಿರ ಕೋಟಿಗೇರಿತ್ತು, ಗುತ್ತಿಗೆದಾರರ ಬಾಕಿ ಬಿಲ್ಲಿನ ಬಾಬತ್ತೇ ಮೂರು ಸಾವಿರ ಕೋಟಿಗೇರಿತು.

ವೆಂಕಟೇಶ್ ಮೂರ್ತಿಯ ಹಾದಿಯನ್ನೇ ತುಳಿದದ್ದು ಕಟ್ಟೆ ಸತ್ಯ. ಯಾರ ದುರಾದೃಷ್ಟವೋ ಸತ್ಯ ಮೇಯರಾಗುವ ಹೊತ್ತಿಗೆ ಪಾಲಿಕೆ ಪೂರ್ತಿ ದಿವಾಳಿಯಾಗಿ ಹೋಗಿತ್ತು. ಪಾಲಿಕೆ ಆದಾಯ ಮೂರು ಸಾವಿರ ಕೋಟಿಯಷ್ಟಿತ್ತಾದರೂ ಸತ್ಯ ಮಂಡಿಸಿದ್ದು 8 ಸಾವಿರ ಕೋಟಿ ಮೊತ್ತದ ಬಜೆಟ್ಟನ್ನು. ಪಾಪ ಸತ್ಯ ತಾನೇ ಏನು ಮಾಡಲು ಸಾಧ್ಯ, ಗುತ್ತಿಗೆದಾರರ ಬಾಕಿ ಮೊತ್ತ ನಾಲ್ಕು ಸಾವಿರ ಕೋಟಿಗೇರಿತ್ತು, ರಸೆಲ್ ಮಾರ್ಕೆಟ್, ಜಯನಗರ ಶಾಪಿಂಗ್ ಕಾಂಪ್ಲೆಕ್ಸ್, ಪಾಲಿಕೆ ಆಸ್ಪತ್ರೆಗಳು, ಕೆ.ಆರ್. ಮಾರುಕಟ್ಟೆಯನ್ನೂ ಬಿಡದೆ ಬ್ಯಾಂಕ್ ಸಾಲಕ್ಕೆ ಅಡವಿಡಲಾಯ್ತು, ಇನ್ನೇನು ಐತಿಹಾಸಿಕ ಪುರಭವನವನ್ನು ಬಿಡದೆ ಬ್ಯಾಂಕಿಗೆ ಅಡವಿಡುವ ಯೋಚನೆಯನ್ನು ಸತ್ಯ ತಯಾರಿ ನಡೆಸಿದ್ದರು: ಇದು ಗೊತ್ತಾಗಿದ್ದೇ ಮುಖ್ಯಮಂತ್ರಿಗಳು ಸತ್ಯನನ್ನು ಕರೆದು ಛೀಮಾರಿಯಿಟ್ಟರು.


ಸತ್ಯ ಬೆಂಗಳೂರಿಗೆ ಮಾಡಿದ ಮಹದುಪಕಾರವೆಂದರೆ ಬಿಬಿಎಂಪಿಯನ್ನು ಬರಖಾಸ್ತುಗೊಳಿಸುವ ಸಿದ್ದು ಸರ್ಕಾರದ ಉದ್ದೇಶಕ್ಕೆ ಅಡ್ಡಗಾಲಿಟ್ಟದ್ದು ಮತ್ತು ಬಾಕಿ ಬಿಲ್ ಬಾರದೇ ಗುತ್ತಿಗೆದಾರರು ಆತ್ಮಹತ್ಯೆಗಿಳಿಯುವಂತೆ ಮಾಡಿದ್ದು!

ಇದರ ಹೊರತಾಗಿಯೂ ಅಂತಾರಾಷ್ಟ್ರೀಯವಾಗಿ ಕಸದ ತಿಪ್ಪೆಗುಂಡಿಯೆಂಬ ಹಣೆಪಟ್ಟಿಗೆ ಬೆಂಗಳೂರನ್ನು ತಂದು ನಿಲ್ಲಿಸಿದ್ದೂ ಬಿಜೆಪಿಯ ಮಹತ್ಸಾಧನೆಯೆ. ಕೊನೆಯ ಮೇಯರ್ ಶಾಂತಕುಮಾರಿಯದ್ದು ಕೇವಲ 6 ತಿಂಗಳ ಮೇಯರ್‌ಗಿರಿ ಮಾತ್ರ. ದೌರ್ಭಾಗ್ಯವೋ ದುರ್ಗತಿಯೋ ಮುಕ್ಕಲು ಶಾಂತಕುಮಾರಿಗೆ ಮೂಳೆ ಚಕ್ಕಳವೂ ಉಳಿದಿರಲಿಲ್ಲ, ಆಡಳಿತಾಧಿಕಾರಿಯ ಮೂರು ವರ್ಷದ ಅವಧಿಯ 8 ಸಾವಿರ ಕೋಟಿ ಮತ್ತು ಐವರು ಮೇಯರ್‌ಗಳ ಪಾಪದ ಫಲವಾದ 9 ಸಾವಿರ ಕೋಟಿ ಸೇರಿದಂತೆ ಸದ್ಯ ಬಿಬಿಎಂಪಿಯ ಒಟ್ಟು ಹೊರೆಯೇ 19 ಸಾವಿರ ಕೋಟಿ!

ಬೆಂಗಳೂರಿಗೆ ಬಿಜೆಪಿ ಮಾಡಿದ ಉಪಕಾರ ಇದು ಬಿಟ್ಟರೆ ಬೇರೇನಾದರೂ ಉಂಟೆ?

■ ರಾ. ಸೋಮನಾಥ್

ಮಂಡ್ಯ: ಕೆಬ್ಬಳ್ಳಿ ಆನಂದನ ಖದರ್ ಮತ್ತೆ ಶುರು



ಕೆಬ್ಬಳ್ಳಿ ಆನಂದ

ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ರಾಮನಗರ-ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರದ 15 ಕೋಟಿಗೂ ಹೆಚ್ಚು ಠೇವಣಿ ಹಣವನ್ನೇ ಲಪಟಾಯಿಸಿ ಬರೋಬ್ಬರಿ 2 ವರ್ಷ ಜೈಲು ಮುದ್ದೆ ಮುರಿದು ಇದೀಗ ಜಾಮೀನಿನ ಮೇಲೆ ಹೊರಬಂದಿರುವ ಕೆಬ್ಬಳ್ಳಿ ಆನಂದ ಮತ್ತೆ ತನ್ನ ಖದರ್ ಶುರು ಮಾಡಿದ್ದಾನೆ. ಇದರ ಮೊದಲ ಕಂತಾಗಿ ತನ್ನ ಇಮೇಜಿಗಾಗಿರುವ ಡ್ಯಾಮೇಜನ್ನು ಸರಿ ಮಾಡಿಕೊಳ್ಳಲು ವಾರದ ಹಿಂದಷ್ಟೆ ಕೆಲವು ಪತ್ರಕರ್ತರಿಗೆ ಗುರುರಾಜ ಕಾಂಟಿನೆಂಟಲ್ ಹೋಟೇಲ್‌ನಲ್ಲಿ ಭರ್ಜರಿ ಗುಂಡಿನ ಪಾರ್ಟಿ ಮಡಗಿಕೊಂಡಿದ್ದ.

ಹೆಚ್ಚೇನು ಅಲ್ಲ, ಈಗ್ಗೆ ಐದು ವರ್ಷಗಳ ಹಿಂದಷ್ಟೆ ಕೆಬ್ಬಳ್ಳಿ ಆನಂದ್ ಯಾರೆಂಬುದು ಮಂಡ್ಯ ಜನಕ್ಕೆ ಗೊತ್ತೇ ಇರಲಿಲ್ಲ. ಮೊದಮೊದಲು ತಾನು ಕಾಂಗ್ರೆಸ್ ಮುಖಂಡನೆಂದು ಹೇಳಿಕೊಳ್ಳುತ್ತ ಸಂಘ-ಸಂಸ್ಥೆಗಳಿಗೆ, ದೇವಾಲಯ, ಕ್ರೀಡೆ ಮೊದಲಾದ ಚಟುವಟಿಕೆಗಳಿಗೆ ಲಕ್ಷಲಕ್ಷ ಹಣ ಸುರಿದು ಒಂದಿಷ್ಟು ಪಬ್ಲಿಸಿಟಿ ಪಡೆದುಕೊಂಡಿದ್ದ. ಆದರೆ ಕೆಬ್ಬಳ್ಳಿ ಆನಂದನಿಗೆ ಆ ಪರಿ ದಾನ ದತ್ತಿ ನೀಡಲು ಹಣವಾದರೂ ಎಲ್ಲಿಂದ ಬರುತ್ತಿತ್ತೆಂಬುದೇ ಆರಂಭದಲ್ಲಿ ನಿಗೂಢವಾಗಿತ್ತು, ಆತನೇ ಹೇಳಿಕೊಳ್ಳುತ್ತಿದ್ದಂತೆ ಅಕ್ರಮ ಗಣಿಗಾರಿಕೆಯ ಸ್ವರ್ಗ ಬಳ್ಳಾರಿಗೆ ಹೋಗಿ, ರೊಕ್ಕ ಮಾಡಿಕೊಂಡು 'ಸಮಾಜಸೇವೆ' (?) ಮಾಡಲು ವಾಪಾಸ್ಸು ಬಂದಿದ್ದನಂತೆ. ಕಳೆದ ವಿಧಾನಸಭೆ ಚುನಾವಣೆಯಲ್ಲಿ ಮಂಡ್ಯದಿಂದ ಅಂಬರೀಷ್ ಸ್ಪರ್ಧಿಸಿದ್ದಾಗ ಪ್ರಚಾರದಲ್ಲಿ ಭಾಗಿಯಾಗಿದ್ದ ಕೆಬ್ಬಳ್ಳಿ ಆನಂದ್ ಕೋಟ್ಯಾಂತರ ರೂ. ಚೆಲ್ಲಿದ್ದ. ಆದರೆ ಚುನಾವಣೆ ಮುಗಿದು ಸ್ವಲ್ಪ ದಿನದಲ್ಲೇ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ಡಾ.ಎಚ್.ಎಸ್.ಶಿವಕುಮಾರ್‌ಗೆ 10 ಲಕ್ಷ ಹಣದ ಆಮಿಷ ತೋರಿಸಿ ಪ್ರಾಧಿಕಾರಕ್ಕೆ ಸೇರಿದ 5 ಕೋಟಿ ರೂ ಠೇವಣಿ ಹಣವನ್ನು ಕೆಬ್ಬಳ್ಳಿ ಆನಂದ ಮುಂಡಾಯಿಸಿದ್ದ ಪ್ರಕರಣ ಹೊರಬಂದಿತ್ತು. ಆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಂಡ್ಯ ಎಸ್ಪಿ ಭೂಷಣ್ ಜಿ. ಬೊರಸೆ ಕೆಬ್ಬಳ್ಳಿ ಆನಂದನನ್ನು ಅರೆಸ್ಟ್ ಮಾಡುತ್ತಿದ್ದಂತೆ ಅತ್ತ ರಾಮನಗರ- ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರದಲ್ಲೂ 10 ಕೋಟಿ ಠೇವಣಿ ಹಣವನ್ನು ಇದೇ ರೀತಿ ಮುಂಡಾಯಿಸಿದ್ದಾನೆಂಬುದು ಬಯಲಿಗೆ ಬಂದಿತ್ತು. ಕೊಡಗೈ ದಾನಿಯಂತೆ ಸಂಘಸಂಸ್ಥೆಗಳಿಗೆ ಲಕ್ಷಲಕ್ಷ ಎತ್ತಿಕೊಡುತ್ತಿದ್ದ ಅವನ ದುಡ್ಡು ಎಲ್ಲಿಂದ ಬಂದದ್ದು ಎಂಬುದು ಆಗಲೇ ಜನಕ್ಕೆ ಗೊತ್ತಾದದ್ದು. ಅಂಬಿ ಗೆಲ್ಲಿಸಲು ಚುನಾವಣೆಗೆ ಆನಂದ ಖರ್ಚು ಮಾಡಿದ್ದ ಕಾಸು ಕೂಡಾ ಅದೇ ಪಾಪದ ಕೂಸದ್ದು ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ.

ಮಂಡ್ಯ ತಾಲ್ಲೂಕಿನ ಕೆರಗೋಡು ಹೋಬಳಿಗೆ ಸೇರಿದ ಕೆಬ್ಬಳ್ಳಿ ಇವನ ಹುಟ್ಟೂರು. ಅದೊಮ್ಮೆ ತನ್ನೂರಿನಿಂದ ಅಚಾನಕ್ಕಾಗಿ ಬರಿಗೈಯಲ್ಲಿ ನಾಪತ್ತೆಯಾಗಿದ್ದ ಆನಂದ ಅದೆಲ್ಲಿ, ಅದ್ಯಾವ ಬಿಸಿನೆಸ್ ಮಾಡಿದನೋ ಗೊತ್ತಿಲ್ಲ. ಮುಂದೊಮ್ಮೆ ಅಷ್ಟೇ ಅಚಾನಕ್ಕಾಗಿ ಪ್ರತ್ಯಕ್ಷನಾಗಿದ್ದ. ಆದರೆ ಈ ಬಾರಿ ಐಷಾರಾಮಿ ಕಾರು, ಬಂಗಲೆ, ಕೋಟಿಗಟ್ಟಲೆ ಕ್ಯಾಷ್ ಅವನ ಜೊತೆಗೂಡಿ ಬಂದಿದ್ದವು. ಇದೆಲ್ಲಾ ಹೇಗಯ್ಯ ಅಂತ ಕೇಳಿದರೆ ಬಳ್ಳಾರಿಯ ಗಣಿಗಾರಿಕೆ ಕಡೆ ಕೈತೋರಿಸಿ ಸುಮ್ಮನಾಗಿಬಿಡುತ್ತಿದ್ದ. ಮಂಡ್ಯದಲ್ಲೂ ಒಂದೆರಡು ಬಂಗಲೆಗಳನ್ನು ಕೊಂಡುಕೊಂಡಿದ್ದ ಕೆಬ್ಬಳ್ಳಿ ಆನಂದ ಪಡಬಿಟ್ಟ ಕಾಸನ್ನು ದಾನ-ಧರ್ಮ ಅಂತ ಬೇಕಾಬಿಟ್ಟಿಯಾಗಿ ಖರ್ಚು ಮಾಡುತ್ತಾ ಖ್ಯಾತಿಗೆ ಬಂದ. ಸಂಘಟನೆಗಳಿಗಿರಲಿ, ಪಡ್ಡೆ ಹುಡುಗರು ಕ್ರಿಕೆಟ್ ಆಡಿಸ್ತೀವಿ ಕಣಣ್ಣ ಅಂತ ಅಂಗಲಾಚಿದರೂ ಲಕ್ಷಲಕ್ಷ ಎತ್ತಿ ಕೊಡುತ್ತಿದ್ದ. ಆದರೆ ಅವನದು ಒಂದೇ ಷರತ್ತು ಏನೆಂದರೆ, ಆ ಸಭೆ, ಕಾರ್ಯಕ್ರಮಗಳಿಗೆ ಅವನನ್ನೇ ಮುಖ್ಯ ಅತಿಥಿಯನ್ನಾಗಿಸಬೇಕಿತ್ತು ಮತ್ತು ದಾನಿಗಳು ಅಂತ ಅವನ ಮುಸುಡಿಯನ್ನು ದೊಡ್ಡದಾಗಿ ಹೋಸ್ಟರ್‌ನಲ್ಲಿ ಅಚ್ಚಾಕಿಸಬೇಕಿತ್ತು.

ಇಷ್ಟೆಲ್ಲಾ ತಯಾರಿ ಮಾಡಿಕೊಳ್ಳುತ್ತಲೇ ಆತ ಕಾಂಗ್ರೆಸ್‌ನಲ್ಲಿ ಗುರುತಿಸಿಕೊಳ್ಳಲು ಶುರು ಮಾಡಿದ. ಅಂಬರೀಶ್ ಶಿಷ್ಯ ಅಮರಾವತಿ ಚಂದ್ರನಿಗೆ ಹತ್ತಿರವಾಗುತ್ತಾ ಬಂದ. ಕೆಬ್ಬಳ್ಳಿ ಆನಂದನ ನಿಷ್ಠೆ ಕಂಡ ಅಂಬರೀಶ್, ಕಳೆದ ಜಿಲ್ಲಾ ಪಂಚಾಯತ್ ಚುನಾವಣೆಯಲ್ಲಿ ಕೆರಗೋಡು ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ನಿಲ್ಲುವಂತೆ ಪ್ರೋತ್ಸಾಹಿಸಿ ಟಿಕೆಟನ್ನೂ ಕೊಡಿಸಿದ್ದರು. ಆದರೆ ಆತನಿಗೆ ಎದುರಾಗಿ ಜೆಡಿಎಸ್‌ನಿಂದ ಸ್ಪರ್ಧಿಸಿದ್ದ ಮಾಜಿ ಸಚಿವ ಕೆ.ವಿ.ಶಂಕರಗೌಡರ ಮೊಮ್ಮಗ ಕೆ.ಎಸ್.ವಿಜಯಾನಂದನ ಎದುರು ಮಕಾಡೆ ಮಲಗಿದ್ದ ತನ್ನಲ್ಲಿದ್ದ ಕಾಸು ಚೆಲ್ಲಾಡಿದರೂ, ಅಂಬಿಯ ಅಭಯಹಸ್ತ ಬೆನ್ನಿಗಿದ್ದರೂ ಕೆಬ್ಬಳ್ಳಿ ಆನಂದನನ್ನು ಸೋಲಿನಿಂದ ಬಚಾವು ಮಾಡಲಾಗಿರಲಿಲ್ಲ.

ಹೀನಾಯವಾಗಿ ಸೋತರೂ ಪಕ್ಷದ ಸಭೆ ಸಮಾರಂಭಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡ ಕೆಬ್ಬಳ್ಳಿ ಆನಂದ್ ನಿಧಾನಕ್ಕೆ ಅಂಬಿಯ ಆಪ್ತ ಬಳಗಕ್ಕೂ ಎಂಟ್ರಿ ಪಡೆದುಕೊಂಡಿದ್ದ. ಕೆಬ್ಬಳ್ಳಿ ಆನಂದನ ಆದರಾತಿಥ್ಯಕ್ಕೆ ಪುಢಾರಿಗಳೆಲ್ಲ ಮಾರು ಹೋಗಿದ್ದರು. ರಾಜಕೀಯವಾಗಿ ಬಹಳ ಎತ್ತರಕ್ಕೆ ಬೆಳೆಯಬೇಕೆಂದು ಸ್ಕೆಚ್ ಹಾಕಿದ್ದ ಕೆಬ್ಬಳ್ಳಿ ಆನಂದ ಅದಕ್ಕೆಲ್ಲಾ ಭರ್ಜರಿ ತಯಾರಿಯನ್ನೇ ನಡೆಸಿದ್ದ. ಅದಕ್ಕೆಂದೇ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಅಂಬರೀಶ್ ಪರ ಹಗಲಿರುಳೆನ್ನದೆ ಓಡಾಡಿದ ಕೆಬ್ಬಳ್ಳಿ ಆನಂದ ಚುನಾವಣೆಗೆಂದು ಲಕ್ಷಾಂತರ ಹಣ ಖರ್ಚು ಮಾಡಿದ್ದ.

ಆತ ವಂಚಿಸಿದ್ದು 15 ಕೋಟಿ!

ಇಷ್ಟೆಲ್ಲಾ ಆದರೂ ಆತನ ಆದಾಯದ ಮೂಲವೇ ಯಾರೊಬ್ಬರಿಗೂ ಅರ್ಥವಾಗಿರಲಿಲ್ಲ, ಅವನೇ ಹೇಳಿದಂತೆ ಗಣಿ ದುಡ್ಡೇ ಇರಬೇಕೆಂದು ಬಲ್ಲರೂ ಅಂದುಕೊಂಡಿದ್ದರು. ಆದರೆ ಆನಂದನ ಅಸಲೀ ದಂಧೆಯೇ ಬೇರೆಯದಿತ್ತು, ಆತ ಒಳಗಿಂದೊಳಗೇ ನಗರಾಭಿವೃದ್ಧಿ ಪ್ರಾಧಿಕಾರಗಳನ್ನೇ ತನ್ನ ಪಾಲಿನ ಅಕ್ಷಯ ಪಾತ್ರೆಗಳನ್ನಾಗಿಸಿಕೊಂಡಿದ್ದ. ಅದಕ್ಕೋಸ್ಕರ ಅವನಿಗೆ ಸಾಥ್ ನೀಡಿದ್ದು ನಾಗಲಿಂಗಸ್ವಾಮಿ ಎಂಬ ರಿಯಲ್ ಎಸ್ಟೇಟ್ ಗೆಳೆಯ. ಇಬ್ಬರೂ ಜೊತೆಗೂಡಿ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ಡಾ.ಎಚ್.ಎಸ್.ಶಿವರಾಮ್‌ನನ್ನು ಬಲೆಗೆ ಕೆಡವಿಕೊಂಡಿದ್ದರು. ಅವರ ಆ ತಂತ್ರದ ಹಿಂದೆ ಇದ್ದದ್ದು ಸಾರ್ವಜನಿಕರು ನಿವೇಶನಗಳಿಗೆಂದು ಠೇವಣಿ ಇಟ್ಟಿದ್ದ ಬರೋಬ್ಬರಿ ಐದು ಕೋಟಿ ಹಣವನ್ನು ಲಪಟಾಯಿಸಬೇಕೆಂಬ ಉದ್ದೇಶ.

ಈ ಇಬ್ಬರೂ ಸೇರಿ ಆಯುಕ್ತ ಶಿವರಾಮ್‌ನನ್ನು ಮೆತ್ತಗೆ ಪುಸಲಾಯಿಸಿ '5 ಕೋಟಿ ಠೇವಣಿ ಹಣವನ್ನು 3-4 ತಿಂಗಳ ಮಟ್ಟಿಗೆ ನಮಗೆ ಕೊಟ್ಟರೆ ಅದನ್ನು ರಿಯಲ್ ಎಸ್ಟೇಟ್, ಷೇರು ಮಾರುಕಟ್ಟೆಯಲ್ಲಿ ತೊಡಗಿಸಿ ಹೆಚ್ಚು ಹಣ ಸಂಪಾದಿಸುತ್ತೇವೆ, ನಿನಗೂ 10 ಲಕ್ಷ ರೂ. ಕಮಿಷನ್ ಕೊಡುತ್ತೇವೆ. ಮೂರ್‍ನಾಲ್ಕು ತಿಂಗಳ ನಂತರ ಆ ಹಣವನ್ನು ವಾಪಾಸ್ ಅದೇ ಅಕೌಂಟಿನಲ್ಲಿ ಇಟ್ಟುಬಿಡೋಣ. ಯಾರಿಗೂ ಗೊತ್ತಾಗಲ್ಲ, ಬ್ಯಾಂಕ್‌ನಲ್ಲಿ ಖಾಲಿ ಬಿದ್ದಿರುವ ಬದಲು ಅದರಿಂದ ಲಾಭ ಮಾಡಿಕೊಂಡು ವಾಪಾಸ್ ಸೇರಿಸೋದ್ರಲ್ಲಿ ಏನೂ ತಪ್ಪಿಲ್ಲ' ಅಂತ ತಲೆ ಸವರಿದ್ದರು.

ಇದನ್ನೆಲ್ಲಾ ಆನಂದನ ಪಟಾಲಂ ಎಷ್ಟು ವ್ಯವಸ್ಥಿತವಾಗಿ ಮಾಡಿತ್ತೆಂದರೆ 2013ರ ಫೆಬ್ರವರಿ ತಿಂಗಳಲ್ಲಿ ಮದ್ದೂರು ತಾಲ್ಲೂಕಿನ ಹೆಮ್ಮನಹಳ್ಳಿ ಚಂದ್ರಶೇಖರ್ ಎಂಬಾತನಿಂದ ಮಂಡ್ಯದ ಇಂಡಿಯನ್ ಬ್ಯಾಂಕ್‌ನಲ್ಲಿ ಹೊಸ ಖಾತೆ ತೆರೆಸಿ ಮುಡಾದ 5 ಕೋಟಿ ಹಣವನ್ನು ಚಂದ್ರಶೇಖರ್ ಅಕೌಂಟ್‌ಗೆ ಜಮಾ ಮಾಡಿಸಿದ್ದರು. ಅಲ್ಲಿಂದ ಪುನಃ ಕೆಬ್ಬಳ್ಳಿ ಆನಂದ್ ಖಾತೆಗೆ 2.80 ಕೋಟಿ, ನಾಗಲಿಂಗಸ್ವಾಮಿ ಖಾತೆಗೆ 1.65 ಕೋಟಿ, ಚಂದ್ರಶೇಖರ್ ಖಾತೆಗೆ 17.25 ಲಕ್ಷ ಹಣ, ಮುಡಾ ಆಯುಕ್ತ ಶಿವರಾಮ್ ಖಾತೆಗೆ 10 ಲಕ್ಷ ರೂ. ವರ್ಗಾವಣೆಯಾಗಿತ್ತು, ಇದೇ ರೀತಿ ರಾಮನಗರ-ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತನನ್ನೂ ನಂಬಿಸಿ ಅಲ್ಲಿದ್ದ ಹತ್ತು ಕೋಟಿ ಹಣವನ್ನು ತಮ್ಮ ಅಕೌಂಟುಗಳಿಗೆ ತುಂಬಿಸಿಕೊಂಡಿದ್ದರು.


ಮೂರ್‍ನಾಲ್ಕು ತಿಂಗಳ ನಂತರ ಹಣವನ್ನು ವಾಪಾಸ್ ಇಟ್ಟುಬಿಡೋಣ ಅಂತ ಆಯುಕ್ತರಗಳನ್ನೇನೊ ನಂಬಿಸಿದ್ದರು. ಆದರೆ ಮೂರಲ್ಲ, ಐದಾರು ತಿಂಗಳಾದರು ಹಣ ವಾಪಾಸ್ ಮಾಡುವ ಸೂಚನೆಯೇ ಕಂಡುಬರಲಿಲ್ಲ, ಅದೇ ಸಮಯಕ್ಕೆ ಸರಿಯಾಗಿ ಮುಡಾ ಅಕೌಂಟಿನಲ್ಲಿರುವ 5 ಕೋಟಿ ಠೇವಣಿ ಹಣವನ್ನು ಡ್ರಾ ಮಾಡಿ ಅಭಿವೃದ್ಧಿ ಕಾರ್ಯಗಳಿಗೆ ಬಳಸಿಕೊಳ್ಳಿ ಎಂದು ಆಯುಕ್ತ ಶಿವರಾಮ್‌ಗೆ ಜಿಲ್ಲಾಧಿಕಾರಿ ಆದೇಶ ನೀಡಿದ್ದರು. ಶಿವರಾಮ್ ಸಾಕಷ್ಟು ಬಾರಿ ಕೆಬ್ಬಳ್ಳಿ ಆನಂದನಿಗೆ ಗಂಟುಬಿದ್ದರೂ ಅವನು ವಾಪಾಸ್ ಕೊಡಲೇ ಇಲ್ಲ, ಏಕೆಂದರೆ ಅಷ್ಟರಲ್ಲಾಗಲೆ ಆನಂದ್ ಎಲ್ಲವನ್ನೂ ದಾನಧರ್ಮ, ಅಂಬಿ ಚುನಾವಣೆಗೆ ಅಂತ ಖರ್ಚು ಮಾಡಿ ಬರಿಗೈ ದಾಸನಾಗಿದ್ದ.

ಯಾವಾಗ ಇದು ತನ್ನ ಬುಡಕ್ಕೇ ಸುತ್ತಿಕೊಳ್ಳುತ್ತೆ ಎಂಬುದು ಆಯುಕ್ತ ಶಿವರಾಮ್‌ಗೆ ಖಾತರಿಯಾಯಿತೋ, ಕೂಡಲೇ ಆತ ಇಂಡಿಯನ್ ಬ್ಯಾಂಕ್ ಮ್ಯಾನೇಜರ್‌ಗೆ ಯಾರೊ ನಕಲಿಬಾಂಡ್ ನೀಡಿ ಹಣವನ್ನು ಕಳ್ಳತನ ಮಾಡಿದ್ದಾರೆ, ಇದರಲ್ಲಿ ಬ್ಯಾಂಕ್‌ನವರ ಕೈವಾಡ ಇದೆ ಅಂತ ಪೊಲೀಸರಿಗೆ ದೂರು ನೀಡಿದ್ದ. ತನಿಖೆಗಿಳಿದ ಪೊಲೀಸರಿಗೆ ಆ ನಕಲಿ ಬಾಂಡ್ ಸೃಷ್ಟಿಸಿದ್ದು ಕೆಬ್ಬಳ್ಳಿ ಆನಂದ್ ಮತ್ತು ನಾಗಲಿಂಗಸ್ವಾಮಿ ಹಾಗೂ ಅದಕ್ಕೆ ಸಾಥ್ ನೀಡಿದ್ದು ದೂರುದಾರ ಆಯುಕ್ತ ಶಿವರಾಮನೇ ಎಂಬ ಸತ್ಯ ಗೊತ್ತಾಗಿತ್ತು, ಅದರಂತೆ ಈ ಪ್ರಕರಣದಲ್ಲಿ ಕೆಬ್ಬಳ್ಳಿ ಆನಂದ, ನಾಗಲಿಂಗಸ್ವಾಮಿ, ಹೆಮ್ಮನಹಳ್ಳಿ ಚಂದ್ರಶೇಖರ್, ಮುಡಾ ಆಯುಕ್ತ ಡಾ.ಎಚ್.ಎಸ್.ಶಿವರಾಮ್ ಸೇರಿ ನಾಲ್ಕು ಮಂದಿಯ ಮೇಲೆ 409, 420, 468, 47, 120 ಮತ್ತು ಬಿ ಸೆಕ್ಷನ್ ಅಡಿ ಪ್ರಕರಣ ದಾಖಲಿಸಲಾಗಿತ್ತು.

ತನಿಖೆ ಗತಿ ಮುಟ್ಟಲೇ ಇಲ್ಲ

ಎರಡೂ ಪ್ರಕರಣಗಳ ತನಿಖೆಯನ್ನು ಕೈಗೆತ್ತಿಕೊಂಡ ಡಿವೈಎಸ್ಪಿ ಶೋಭಾರಾಣಿ ಅದ್ಯಾಕೊ ತಮ್ಮ ಖದರ್ರನ್ನು ತೋರಿಸಲೇ ಇಲ್ಲ, ಇಡೀ ಕೇಸನ್ನು ಶೋಭಾರಾಣಿ ಹಳ್ಳ ಹಿಡಿಸಿದರು. ಈ ಘನಕಾರ್ಯಕ್ಕಾಗಿ ಕೆಬ್ಬಳ್ಳಿ ಆನಂದನ ಕಡೆಯಿಂದ ಸಾಕಷ್ಟು ಹಣ ಶೋಭಾ ಮೇಡಂಗೆ ಸಂದಾಯವಾಯ್ತು ಅಂತ ಪೊಲೀಸ್ ಸಿಬ್ಬಂದಿಗಳೇ ಮಾತನಾಡಿಕೊಂಡಿದ್ದರು. ಪ್ರಕರಣ ಹಳತಾದಂತೆ ಜನರೂ ಮರೆತುಬಿಟ್ಟರು. ತನಿಖೆ ಪ್ರಾಮಾಣಿಕವಾಗಿ ನಡೆದಿದ್ದರೆ, ಆನಂದನ ಹಿಂದೆ ಯಾರೆಲ್ಲ ನಿಂತಿದ್ದರು ಮತ್ತು ಆ ಹಣವನ್ನು ಯಾರೆಲ್ಲ ಹಂಚಿ ತಿಂದರು ಎಂಬುದು ಬಯಲಿಗೆ ಬರುತ್ತಿತ್ತು, ಹೇಳಿಕೇಳಿ ಕೆಬ್ಬಳ್ಳಿ ಆನಂದ ಅಂಬಿ ಮತ್ತು ಅಮರಾವತಿ ಚಂದ್ರನ ಎಡಬಲದಲ್ಲೇ ಸುಳಿದಾಡುತ್ತಿದ್ದರಿಂದ ಜನರಲ್ಲಿ ಕುತೂಹಲವೂ ದಟ್ಟವಾಗಿತ್ತು, ಆದರೆ ಆ ಕುತೂಹಲಗಳನ್ನು ತಣಿಸುವಂತ ತನಿಖೆ ಶೋಭಾರಾಣಿ ಕಡೆಯಿಂದ ನಡೆಯಲೇ ಇಲ್ಲ, ತನಿಖೆಯ ಹಾದಿ ತಪ್ಪಿಸಿದ ಶೋಭಾರಾಣಿ ಬೆಂಗಳೂರಿಗೆ ವರ್ಗವಾಗಿ ಹೋದ ಮೇಲಂತು ಇಡೀ ಘಟನೆಯೇ ನಡೆದಿಲ್ಲವೇನೊ ಎಂಬಷ್ಟು ಸಹಜತೆಗೆ ಬರಲಾರಂಭಿಸಿತು. ಜೈಲಿನಲ್ಲಿದ್ದ ಕೆಬ್ಬಳ್ಳಿ ಆನಂದನಿಗೆ ಈಗ ಜಾಮೀನೂ ಸಿಕ್ಕಿದೆ.

ಕೆಬ್ಬಳ್ಳಿ ಆನಂದನ ರೀ ಎಂಟ್ರಿ ಸಾಮಾನ್ಯವಾಗೇನೂ ಇರಲಿಲ್ಲ, ಆತನ ಶಿಷ್ಯ ಜೈಕುಮಾರ್ ತನ್ನ ಸ್ನೇಹಿತರ ಜೊತೆಗೂಡಿ ಕಲಾಮಂದಿರದ ಹಿಂಭಾಗವಿರುವ ಒಳಾಂಗಣ ಕ್ರೀಡಾಂಗಣದಲ್ಲಿ ಒಂದು ಕಾರ್ಯಕ್ರಮ ಆಯೋಜಿಸಿ, ಅ[...] ಕಾರ್ಯಕ್ರಮಕ್ಕೆ 'ಜಸ್ಟ್ ಜೈಲ್ ರಿಟರ್ನ್' ಕೆಬ್ಬಳ್ಳಿ ಆನಂದನನ್ನು [...] ಅತಿಥಿಯನ್ನಾಗಿಸಿ ಭರ್ಜರಿ ಸ್ವಾಗತವನ್ನೇ ನೀಡಿದ್ದರು. ಅವ[...] ಆ ರಸ್ತೆಯುದ್ದಕ್ಕೂ 'ಕೆಬ್ಬಳ್ಳಿ ಆನಂದ್ ಸಮಾಜ ಸೇವಕರು[...]' ಎಂಬ ಫ್ಲೆಕ್ಸ್‌ಗಳು ರಾರಾಜಿಸಿದ್ದವು. ಆನಂದನ ಆಳೆತ್ತರದ[...] ಕಟೌಟ್‌ಗಳನ್ನೂ ಹಾಕಲಾಗಿತ್ತು, ಹೀಗೆ ತನ್ನ ಶಿಷ್ಯರ ಮೂಲಕ[...] ಕಾರ್ಯಕ್ರಮಗಳನ್ನು ಆಯೋಜಿಸಿ, ಅದರಲ್ಲಿ ಭಾಗವಹಿಸುತ್ತ[...] ಮತ್ತೆ ಸಮಾಜ ಸೇವಕನ ಗೆಟಪ್ಪಿನಲ್ಲಿ ಕಂಗೊಳಿಸುತ್ತಿದ್ದಾನೆ[...] ಪತ್ರಕರ್ತರನ್ನು ಕೂಡಾ ಸರಿಮಾಡಿಕೊಳ್ಳುವ ಭಾಗವಾಗೆ[...] ತನ್ನ ಹುಟ್ಟುಹಬ್ಬದ ನೆಪವಿಟ್ಟುಕೊಂಡು . ಗುರುರಾಜ[...] ಕಾಂಟಿನೆಂಟಲ್ ಹೋಟೇಲ್‌ನಲ್ಲಿ ಭರ್ಜರಿ ಬಾಡೂಟ[...]




ಶಿವರಾಮ್

ಕಮ್ ಗುಂಡಿನ ಪಾರ್ಟಿ ಆಯೋಜಿಸಿದ್ದು.

ವಂಚಿಸಿ ಹಣ ಮಾಡಿದ್ದಲ್ಲದೆ ಅದನ್ನು ದಾನ-ಧರ್ಮದ[...] ಹೆಸರಿನಲ್ಲಿ ಕೊಡುವ ಕೆಬ್ಬಳ್ಳಿ ಆನಂದ ಇನ್ನಾದರೂ ಸರಿಯಾದ[...] ಮಾರ್ಗದಲ್ಲಿ ನಡೆದುಕೊಳ್ಳುತ್ತಾನೆ ಎಂದು ಭಾವಿಸಿದ್ದವರೆಲ್ಲ[...] ಅವನ ಈ ನಾಚಿಕೆಬಿಟ್ಟ ವಾಮಮಾರ್ಗಗಳನ್ನು ಕಂಡು[...] 'ನಾಯಿ ಬಾಲ ಯಾವತ್ತಿದ್ದರೂ ಡೊಂಕೇ' ಅಂತ[...] ಮಾತಾಡಿಕೊಳ್ಳುತ್ತಿದ್ದಾರೆ. ಅದೇನೊ ಅಂತಾರಲ್ಲ[...] ಸಹವಾಸದಿಂದ ಸನ್ಯಾಸಿ ಕೆಟ್ಟ ಅನ್ನೋ ಹಾಗೆ, ಬಡ[...] ಕುಟುಂಬದಿಂದ ಬಂದು ಕೆಎಎಸ್ ಮಾಡಿ ಮುಡಾ[...] ಆಯುಕ್ತನಾಗಿ ಒಳ್ಳೆಯ ಹೆಸರು ಮಾಡುತ್ತಿದ್ದ[...] ಡಾ.ಎಚ್.ಎಸ್.ಶಿವರಾಮ್ ಇವನಿಂದಾಗಿ ನೌಕರಿಯಿಂದ[...] ಅಮಾನತ್ತಾಗಿ ಮನೆಯಲ್ಲಿ ಮಣ್ಣು ತಿನ್ನುತ್ತಿದ್ದಾನೆ. ಇನ್ನು[...] ಅವನ ಪಾರ್ಟಿಗೆ ಹೋಗಿಬಂದಿರೋ ಪತ್ರಕರ್ತರಿಗೆ ಮುಂದ[...] ಅದಿನ್ನಾವ 'ಸನ್ಮಾನ' ಕಾದಿದೆಯೋ ಗೊತ್ತಿಲ್ಲ, ಯಾವುದಕ್ಕೂ[...] ಮಂಡ್ಯ ಜನ ಹುಷಾರಿದ್ದರೆ ಕ್ಷೇಮ.

■ ವರದಿಗಾರ[...]

ರಾಮ ದೇವರಲ್ಲ! - ವಾಲ್ಮೀಕಿ ಪ್ರಕಾರ



ಮೊದಲಿಗೆ ನಾನು ಸ್ಪಷ್ಟಪಡಿಸಬೇಕಾದ ವಿಷಯ: ...ನು ಎಲ್ಲೂ ರಾಮಾಯಣ ಅಥವಾ ಮಹಾಭಾರತವನ್ನು ...ಡಬೇಕೆಂದು ಹೇಳಿಲ್ಲ. ಇದು ಕಿಡಿಗೇಡಿಗಳ ...ದುರುದ್ದೇಶಪೂರ್ವಕ ಘೋರ ಆರೋಪ. ಅವರು ದಾಖಲೆ ...ಡದಿದ್ದರೆ ಪಾತಕ ಅಪರಾಧಿಗಳಾಗುತ್ತಾರೆ. ಕೆಲವರು ...ಪ್ರಚೋದನೆಯಿಂದ ಕುವೆಂಪು 'ದಲಿತ ವಿರೋಧಿ' ...ಬ ಅಪಕ್ವ ಅಭಿಪ್ರಾಯಗಳನ್ನು ಹರಿಯಬಿಡುತ್ತಿದ್ದರು. ...ವನ್ನು ಸರಿಪಡಿಸುವ ಉದ್ದೇಶದಿಂದ 1982 ರಲ್ಲಿ ...ವೆಂಪು ಕಂಡ ಜೀವನ್' ಎಂಬ ವಿಶ್ಲೇಷಣಾತ್ಮಕ ವಿಮರ್ಶಾ ...ಖನ ಬರೆದೆ. ಅದು ಕುವೆಂಪು ದಲಿತ ವಿರೋಧಿ ...ಬ ಅಭಿಪ್ರಾಯವನ್ನು ತಿದ್ದಿತು. ಅದರಲ್ಲಿ "ರಾಮಾಯಣ ...ತ್ತು ಮಹಾಭಾರತ ವಿಶ್ವ ಸಾಹಿತ್ಯದ ಮೊಟ್ಟಮೊದಲ ...ಲಿತ ಮಹಾಕಾವ್ಯಗಳು" (ಕಣಗಿಲೆ, ಪು. 88; 2011) ...ಬ ಹೊಸ ವಿಚಾರ ಸಾಹಿತ್ಯಜ್ಞರ ಗಮನ ಸೆಳೆಯಿತು.

ವಾಲ್ಮೀಕಿ ರಾಮಾಯಣಕ್ಕೂ ಕುವೆಂಪು ರಾಮಾಯಣ ...ರ್ಶನಕ್ಕೂ ದೃಷ್ಟಿಯಲ್ಲಿ ಪಾತ್ರ ಪರಿಪೋಷಣೆಯಲ್ಲಿ ...ತ್ವಿಕತೆಯಲ್ಲಿ ಸಂಬಂಧವಿಲ್ಲ. ಕತೆಯ ಹಂದರದಲ್ಲಿ ಮಾತ್ರ ...ಮ್ಯ ಉಂಟು.

ಕೆಲವು ಅಂಶಗಳನ್ನು ಇಲ್ಲಿ ಹೇಳಲೇಬೇಕಾಗಿದೆ. 'ಶ್ರೀ ...ಮಾಯಣ ದರ್ಶನಂ' ಮಹಾಕಾವ್ಯ ಆರಂಭವಾಗುವುದೇ ...ಬುಧರೊಲಿದ ಸಮದರ್ಶನವನೊಪ್ಪಿ" (1. 1. 186) ...ಬ ಧ್ಯೇಯದಿಂದ. ಇದಕ್ಕೆ ಇಡೀ ಕಾವ್ಯವೇ ...ತಿಮೆಯಾಗಿದೆ. ಉದಾಹರಣೆಗೆ ವಾಲ್ಮೀಕಿ ...ಮಾಯಣದಲ್ಲಿ ಸೀತೆ ಮಾತ್ರ ಅಗ್ನಿಪ್ರವೇಶ ಮಾಡುತ್ತಾಳೆ, ...ಟ್ಟಿಯಾಗಿ, ಯಾರ ಒತ್ತಾಯವೂ ಇಲ್ಲದೆ. ಆದರೆ ಕುವೆಂಪು ...ರಾಮಾಯಣ ದರ್ಶನಂ'ನಲ್ಲಿ ಸೀತೆಯ ಹಿಂದೆ ರಾಮನೂ ...ಗ್ನಿಪರೀಕ್ಷೆಗೆ ಒಳಗಾಗುತ್ತಾನೆ. ದಾಂಪತ್ಯದಲ್ಲಿ ಪರಸ್ಪರ ನಿಷ್ಠೆ ...ತ್ತು ಪರಿಶುದ್ಧಿಗಳು ಜೀವನ ಸಂತೋಷ ಮತ್ತು ಸೊಗಸಿಗೆ ...ಮೂಲವಾದವು ಎಂಬ ಸಂದೇಶವನ್ನು ಕಾವ್ಯ ಧ್ವನಿಸುತ್ತದೆ. ...ಾಕ್ಷಿಯೊಲ್ ನಿಟ್ಟಿಸುತ್ತಿರ್ದ ರಾಮಾನನಂ ತಾನಾಯ್ತು ...ಪ್ಯಮಾನಂ. ಚಲಿಸಿದನು ಚಿತೆಗೆ." (4. 11. 512-4.) ...ವೆಂಪು ಅವರಲ್ಲಿ ಸ್ತ್ರೀಶೋಷಣೆ ಇಲ್ಲ, ಸಮಾನತೆ ಇದೆ. ...ಣ್ಣಿಗೊಂದು ನೀತಿ, ಗಂಡಿಗೊಂದು ನೀತಿ ಇಲ್ಲ. ಇಂಥ ...ವ್ಯ ಮತ್ತು ದರ್ಶನ ಜಗತ್ತಿನ ಸಾಹಿತ್ಯದಲ್ಲಿ ನನಗೆ ...ದಂತೆ ಕಾಣದು. ತುಂಬು ಗರ್ಭಿಣಿ ಸೀತೆಯನ್ನು ಕಾಡಿಗೆ ...ಟ್ಟದ್ದು ಮಾತ್ರ ಸಮರ್ಥನೀಯವಲ್ಲ, ಅದು ಹಿಂಸೆ, ...ೋಷಣೆ. ಈಗಾಗಲೇ ಅವಳು ಅಗ್ನಿಪರೀಕ್ಷೆಯಿಂದ ಪರಮ ...ರಿಶುದ್ಧೆ ಆಗಿದ್ದಾಳೆ. ಇನ್ನೂ ಪರೀಕ್ಷೆ ಸಹಿಸದ ಅವಳು ...ತಿಭಟನೆಯಾಗಿ ಭೂಮಿಯೊಳಕ್ಕೆ ಹೋಗಿಬಿಟ್ಟಳು ...ಉತ್ತರಕಾಂಡ, ಸರ್ಗ 97, ಶ್ಲೋಕ 16-17.), ರಾಮನ ...ಸಹವಾಸ ಸಾಕು ಎಂಬರ್ಥದಲ್ಲಿ.

ವಾಲ್ಮೀಕಿ ರಾಮಾಯಣದಲ್ಲಿ ರಾಮ ಚಾತುರ್ವರ್ಣ್ಯ ...ಪಾಲಕನಾಗಿ ಬಿಂಬಿತನಾಗಿದ್ದಾನೆ. 'ಚಾತುರ್ವರ್ಣ್ಯಸ್ಯ ರಕ್ಷಿತಾ ... ಚಾತುರ್ವರ್ಣ್ಯವನ್ನು ರಕ್ಷಿಸುತ್ತಾನೆ" (ಸುಂದರಕಾಂಡ, ಸರ್ಗ ...5 ಶ್ಲೋಕ 11). ರಾಮ "ಬ್ರಾಹ್ಮಣಾನಾಂ ಉಪಾಸಿತಾ ... ಬ್ರಾಹ್ಮಣರ ಸೇವೆಯಲ್ಲಿ ನಿರತನು." (5-3, 13.) ...ಮನ ಸೇವೆ ಬ್ರಾಹ್ಮಣರು ಮಾಡುವುದಿಲ್ಲ, ಬ್ರಾಹ್ಮಣರಿಗೆ ...ಲ್ಲಿ ರಾಮನೇ ಸೇವೆ ಮಾಡುತ್ತಾನೆ! "ದದೌ ಶತಂ ...ಹಾಣ್ ಸೂರ್ವಂ ದ್ವಿಜೇಭ್ಯೋ ಮನುಜರ್ಷಭಃ ...ಕೋಟೀಸ್ತತಃ ಹಿರಣ್ಯಸ್ಯ ಬ್ರಾಹ್ಮಣೇಭ್ಯೋ ದದೌ ಪುನಃ ...ಪಟ್ಟಾಭಿಷೇಕ ಸಂದರ್ಭದಲ್ಲಿ ರಾಮನು ...ಬ್ರಾಹ್ಮಣೋತ್ತಮರಿಗೆ ಕುದುರೆಗಳು, ಹಾಲು ಕೊಡುವ ...ಹಸುಗಳು ಮತ್ತು ಎತ್ತುಗಳನ್ನು ಲಕ್ಷಗಟ್ಟಲೆ ದಾನ ಮಾಡಿದನು. ಮೂವತ್ತು ಕೋಟಿ ಚಿನ್ನದ ನಾಣ್ಯಗಳನ್ನು ಬ್ರಾಹ್ಮಣರಿಗೆ ಕೊಟ್ಟನು" (ಯುದ್ಧಕಾಂಡ ಸರ್ಗ 131 ಶ್ಲೋಕ 74) ದುಡಿಯುವ ಬಡವರಿಗೆ ಅವನು ಏನೂ ನೀಡಲಿಲ್ಲ. ಬಡವರು ಬಡವರಾಗಿದ್ರೆ ತಾನೇ ಅವರು ದುಡಿಯಲಿಕ್ಕೆ ಬರುವುದು! ಇದರಿಂದ ರಾಮನದು ಪಕ್ಷಪಾತ ಧೋರಣೆ ಎಂದು ಅರಿವಾಗುತ್ತದೆ! ರಾಮ ಜಾತಿವಾದಿ! ಆದ್ದರಿಂದ ಅವನ ದೇವಸ್ಥಾನ ಕಟ್ಟಬೇಕೆಂದು ಬ್ರಾಹ್ಮಣವಾದದ ಕೂಗು ಇದೆ.

ಬ್ರಾಹ್ಮಣಾಃ ಕ್ಷತ್ರಿಯಾಃ ವೈಶ್ಯಾ ಲೋಭವಿವರ್ಜಿತಾಃ, ಸ್ವಕರ್ಮಸು ಪ್ರವರ್ತಂತೇ ತುಷ್ಟಾಃ ಸ್ವೈರೇವ ಕರ್ಮಭಿಃ - ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರ ಇವರೆಲ್ಲರೂ ತಮ್ಮ ವರ್ಣಕ್ಕೆ ಸಂಬಂಧಿಸಿದ ಕೆಲಸಗಳನ್ನು ಮಾಡುತ್ತಿದ್ದರು; ಸಂತೋಷದಿಂದ ಬದುಕುತ್ತಿದ್ದರು." (ಯುದ್ಧಕಾಂಡ, ಸರ್ಗ 131, ಶ್ಲೋಕ 104.) ತಪಸ್ಸು ಮಾಡುತ್ತಿದ್ದ ಶೂದ್ರ ಶಂಬೂಕನನ್ನು ರಾಮ ಕೊಂದುಹಾಕಿದನು: "ಕಸ್ಯಾಂ ಯೋನ್ಯಾಂ ನೀನು ಯಾವ ಜಾತಿಯಲ್ಲಿ ಹುಟ್ಟಿದ್ದೀಯೆ?" (ಉತ್ತರಕಾಂಡ ಸರ್ಗ 75, ಶ್ಲೋಕ 16.) "ಬ್ರಾಹ್ಮಣೋ ವಾಸಿ ಭದ್ರಂ ತೇ ಕ್ಷತ್ರಿಯೋ ವಾಸಿ ದುರ್ಜಯಃ; ವೈಶ್ಯಃ ತೃತೀಯ ವರ್ಣಃ ವಾ ಶೂದ್ರೋ ವಾ ಸತ್ಯ ವಾಗ್ಭವ - ನೀನು ಬ್ರಾಹ್ಮಣನೋ? ಕ್ಷತ್ರಿಯನೋ? ವೈಶ್ಯನೋ? ಅಥವಾ ಶೂದ್ರನೋ? ನಿಜ ಹೇಳು" ಎಂದು ರಾಮ ಕೇಳಿದನು. (ಉತ್ತರಕಾಂಡ ಸರ್ಗ 75, ಶ್ಲೋಕ 18-19). ಅದಕ್ಕೆ ಶಂಬೂಕ "ಶೂದ್ರ ಯೋನ್ಯಾಂ ಪ್ರಸೂತೋಸ್ಮಿ ಶಂಬೂಕೋ ನಾಮ ನಾಮ ತಃ ... ಶೂದ್ರಂ ಮಾಂ ವಿದ್ಧಿ - ನಾನು ಶೂದ್ರನ ಹೊಟ್ಟೆಯಲ್ಲಿ ಹುಟ್ಟಿದ್ದೇನೆ; ನನ್ನ ಹೆಸರು ಶಂಬೂಕ... ನಾನು ಶೂದ್ರನೆಂದು ತಿಳಿ" (ಉತ್ತರಕಾಂಡ, ಸರ್ಗ 76, ಶ್ಲೋಕ 2-3) ಎಂದನು. "ಭಾಷಃ ಸತ್ಯ ಶೂದ್ರಸ್ಯ ಖಡ್ಗಂ ಸುರುಚಿರಪ್ರಭಂ, ನಿಷಷ್ಯ ಕೋಶಾದ್ವಿಮಲಂ ಶಿರಶ್ಚೇದ ರಾಘವಃ - "ಅವನು ಹಾಗೆ ಹೇಳುತ್ತಿರುವಾಗಲೇ ರಾಮನು ಹೊಳೆಯುವ ಕತ್ತಿಯನ್ನು ಒರೆಯಿಂದ ಎಳೆದು ಅವನ ತಲೆಯನ್ನು ಕತ್ತರಿಸಿಹಾಕಿದನು" (76. 4.). "ತಸ್ಮಿನ್ ಶೂದ್ರೇ ಹತೇ ದೇವಾಃ ಸೇಂದ್ರಾಃ ಸಾಗ್ನಿ ಪುರೋಗಮಾಃ ಸಾಧು ಸಾಧು ಇತಿ ಕಾಕುತ್ಸ್ಥ ಪ್ರಶಂಸುಃ ಮುಹುರ್ಮುಹುಃ - ಆ ಶೂದ್ರನು ಸಾಯಲು ಇಂದ್ರ ಅಗ್ನಿ ಮುಂತಾದ ದೇವತೆಗಳೆಲ್ಲ 'ರಾಮ, ಒಳ್ಳೆಯದು ಮಾಡಿದೆ' ಎಂದು ಮತ್ತೆ ಮತ್ತೆ ಹೊಗಳಿದರು" (76. 5).

ಏನೂ ತಪ್ಪು ಮಾಡದಿದ್ದರೂ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಮಾಡುವ ತಪಸ್ಸನ್ನು ಶಂಬೂಕ ಮಾಡಿದ್ದೇ ತಪ್ಪೆಂದು ರಾಮ ಅವನನ್ನು ಕೊಂದುಹಾಕಿದನು. ಇಂಥ ರಾಮರಾಜ್ಯ ಗೌರವಕ್ಕೆ ಮತ್ತು ಆರಾಧನೆಗೆ ಇರಲಿ, ಮೆಚ್ಚಿಕೆಗೂ ಅರ್ಹವಲ್ಲ. ತಮಗೆ ಅನುಕೂಲವಾಗಿದ್ದಾನೆಂದು ಹಾರುವರು ರಾಮನನ್ನು ದೇವರನ್ನಾಗಿ ಮಾಡಿದ್ದಾರೆ. ರಾಮನೆಂಬ ದೇವರ ಹಿಂದೆ ಇರತಕ್ಕ ತತ್ವ ಎಷ್ಟು ಅಪಾಯಕರ ಮತ್ತು ಕ್ರೂರ ಎಂದು ಜನರು ತಿಳಿಯುವುದು ಅಗತ್ಯ. ಇದನ್ನು ತಿಳಿಸುವ ನನ್ನಂಥವರನ್ನು ದೇವರನ್ನು ಬೈಯುತ್ತಾರೆ, ನಾಸ್ತಿಕರು ಎಂದು ನಿಂದಿಸುತ್ತಾರೆ. ಎಂಥ ವಂಚನೆಯ ಜಾಲ ಇದು!

ಸ್ವತಃ ವಾಲ್ಮೀಕಿಯೇ ರಾಮನನ್ನು ದೇವರೆಂದು ಕರೆದಿಲ್ಲ. ಸುಮಾರು ಹದಿನಾಲ್ಕು ಆದರ್ಶ ಗುಣಗಳನ್ನು ಹೇಳಿ "ಇಂಥ ಮನುಷ್ಯನ ಬಗ್ಗೆ ತಿಳಿಯಲು ನನಗೆ ಆಸೆ - ಜ್ಞಾತುಂ ಏವಂ ವಿಧಂ ನರಂ" (ಬಾಲಕಾಂಡ ಸರ್ಗ 1, ಶ್ಲೋಕ 1 - 5.) ಎಂದು ಕೇಳುತ್ತಾನೆ. ರಾಮ ಸಹ "ನಾನು ದಶರಥನ ಮಗ, ನಾನು ಮನುಷ್ಯ - ಆತ್ಮಾನಂ ಮಾನುಷಂ ಮನ್ಯೇ, ರಾಮಂ ದಶರಥಾತ್ಮಜಂ" (ಯುದ್ಧಕಾಂಡ 120. 11.). "ರಾಮೋ ದಾಶರಥಿಃ ಅಹಂ - ನಾನು ದಶರಥನ ಮಗ ರಾಮ" (ಉತ್ತರಕಾಂಡ 75. 16.) ಎಂದು ಹೇಳುತ್ತಾನೆ.

ಆದರೂ ಲಾಭಕೋರರೂ ಪಟ್ಟಭದ್ರ ಹಿತಾಸಕ್ತಿಗಳೂ ರಾಮನನ್ನು ದೇವರು, ಅವತಾರ ಎಂದೆಲ್ಲಾ ಮಾಡಿಬಿಟ್ಟು ಮುಗ್ಧ ಜನಕೋಟಿಯನ್ನು ತುಳಿದು ಸುಲಿಗೆ ಮಾಡುತ್ತಿದ್ದಾರೆ. ಶೋಷಣೆಯ ಎಲ್ಲಾ ಮೂಲಗಳಿಗಿಂತ ದೈವಭಕ್ತಿ ಮತ್ತು ನಂಬಿಕೆಯೇ ಅತ್ಯಂತ ಭಯಂಕರ ಮತ್ತು ಕ್ರೂರವಾದುದು. ಮಂದಿ ಇದನ್ನು ಅರಿಯದಷ್ಟು ವಶೀಕರಣಗೊಂಡಿದ್ದಾರೆ.

ರಾಮಾಯಣದಲ್ಲಿರುವ ಇಂಥ ಮಾನವ ದ್ವೇಷಿ ಜಾತ್ಯಾಂಧ ಅಂಶಗಳನ್ನೆಲ್ಲ ಕುವೆಂಪು ತಮ್ಮ ಕಾವ್ಯದಲ್ಲಿ ಮತ್ತು ನಾಟಕ 'ಶೂದ್ರತಪಸ್ವಿ'ಯಲ್ಲಿ ತೆಗೆದುಹಾಕಿದ್ದಾರೆ. ಅವುಗಳನ್ನು ಅಪೂರ್ವ ಮಾನವಪ್ರೇಮಿ ಕೃತಿಗಳನ್ನಾಗಿ ಮಾಡಿರುವುದನ್ನು ಮನಗಾಣಬೇಕು. 'ಶೂದ್ರತಪಸ್ವಿ' ನಾಟಕದಲ್ಲಿ ಕುವೆಂಪು ಬ್ರಾಹ್ಮಣ ಬಾಲಕನನ್ನೂ ಶಂಬೂಕನನ್ನೂ ಉಳಿಸುತ್ತಾರೆ. ಕೆಲವು ಮತಿಗೇಡಿಗಳು ತಿಳಿದುಕೊಂಡಿರುವಂತೆ ಕುವೆಂಪುವಿಗೆ ಬ್ರಾಹ್ಮಣ ದ್ವೇಷಿ ಅಲ್ಲ; ಹಾಗೇನಾದರೂ ಇದ್ದಿದ್ದರೆ ಅವರು ಬ್ರಾಹ್ಮಣನನ್ನು ಸಾಯಿಸಬಹುದಿತ್ತು, ಅವರು ಮಾನವ ಪ್ರೇಮವನ್ನು ಪ್ರಕಟಿಸಿ ಸಮಾನತೆ ಮೆರೆದಿದ್ದಾರೆ.

'ರಾಮಾಯಣ ದರ್ಶನಂ' ಸುಡುವರೇ? ಎಂದು ಸ.ರ. ಸುದರ್ಶನ ಕೇಳಿರುವುದು ಕುಚೋದ್ಯದ ಮಾತು. ಇದರಿಂದ ಅವರು ಕುವೆಂಪು ಸಾಹಿತ್ಯ ಓದಿಲ್ಲ, ಸರಿಯಾಗಿ ಅರ್ಥಮಾಡಿಕೊಂಡಿಲ್ಲ ಎಂದು ವಿಷಾದದಿಂದ ಹೇಳಬೇಕಾಗುತ್ತದೆ.

ಶೂದ್ರ ಪ್ರಜ್ಞೆಯನ್ನು ಕುವೆಂಪು ಜಾಗೃತಗೊಳಿಸಿದರು ಎಂಬುದು ಒಂದು ಹಂತದವರೆಗೆ ಸರಿ. ಆದರೆ ಕುವೆಂಪು ಅವರದು ಪ್ರಧಾನವಾಗಿ ಮಾನವಪ್ರಜ್ಞೆ ಹಾಗೂ ವಿಶ್ವಪ್ರಜ್ಞೆ ಎಂದು ತಿಳಿಯದಿದ್ದರೆ ಅಪಚಾರವಾಗುತ್ತದೆ, ಇಬ್ಬರಿಗೂ - ಕವಿಗೆ ಮತ್ತು ವಾಚಕರಿಗೆ.

'ಶೂದ್ರತಪಸ್ವಿ' ನಾಟಕದಲ್ಲಿ ಮೂಲ ರಾಮಾಯಣದ ಪ್ರಸಂಗ ಸಂಪೂರ್ಣವಾಗಿ ಮಾರ್ಪಾಡಾಗಿದೆ.

"ನನ್ನ ಮಗನ ಸಾವಿಗೆ ಶಂಭೂಕನ ತಪಸ್ಸೇ ಕಾರಣ. ಅವನನ್ನು ಕೊಲ್ಲು" ಎಂದು ರಾಮನನ್ನು ವಿಪ್ರ ಆಗ್ರಹಿಸುತ್ತಾನೆ. ವಿಪ್ರನಿಗೆ ರಾಮ ಈ ಮೂರು ಪ್ರಶ್ನೆಗಳನ್ನು ಕೇಳುತ್ತಾನೆ:

ರಾಮ: ತಪಸ್ಸು ಪೂಜ್ಯ ಕ್ರಿಯೆ ಅಲ್ಲವೆ?

ವಿಪ್ರ: ತಪಸ್ಸಿಗೆ ಎಣೆ ಉಂಟೆ?


ರಾಮ: ತಪಸ್ಸು ಮಾಡುವವನು ಪೂಜ್ಯ ಕರ್ಮಿ ಅಲ್ಲವೆ?

ವಿಪ್ರ: ನಿಜ.

ರಾಜ: ಪೂಜ್ಯ ಹತ್ಯೆ ಪಾಪಕರ ಅಲ್ಲವೆ?

ವಿಪ್ರ: ಅನುಮಾನವೇ ಇಲ್ಲ.

ಆಗ ರಾಮ 'ಹಾಗಾದರೆ ಈ ತಪಸ್ವಿಯನ್ನು ಕೊಲ್ಲುವುದು ಪಾಪವಲ್ಲವೆ?' ಎಂದು ಕೇಳಿದರೆ ಇದುವರೆಗೆ ವಿಪ್ರ ತಾನಾಡಿದ್ದ ಮಾತುಗಳನ್ನು ತಾನೇ ವಿರೋಧಿಸುತ್ತಾನೆ; ಶೂದ್ರ ಎಂದು ಹೇಳಿ, ಅವನ ತಪಸ್ಸು ನಾಯಿಯ ಹಾಲಿಗೆ ಸಮಾನ ಎಂದು ಧಿಕ್ಕರಿಸುತ್ತಾನೆ; ತಾನು ನಂಬಿದ ಕೊಳಕು ಜಾತಿವ್ಯವಸ್ಥೆಯ ಮಾತನ್ನು ಸಮರ್ಥಿಸುತ್ತಾನೆ. ಈ ಶೂದ್ರ ತಪ್ಪಿತಸ್ಥ ಇವನನ್ನು ಕೊಲ್ಲು ಎಂದು ಮತ್ತೆ ಮತ್ತೆ ರಾಮನನ್ನು ವಿಪ್ರ ಒತ್ತಾಯಿಸುತ್ತಾನೆ. ರಾಮಬಾಣ ಧರ್ಮದ್ರೋಹಿಯನ್ನು ಮಾತ್ರ ಮುಗಿಸುತ್ತದೆ, ಆದ್ದರಿಂದ ಚೆನ್ನಾಗಿ ಯೋಚನೆ ಮಾಡು ಎಂದು ವಿಪ್ರನಿಗೆ ರಾಮ ಹೇಳುತ್ತಾನೆ. "ಧರ್ಮದ್ರೋಹಿಯನ್ನು ಅರಸಿ ಕೊಲ್ಲು" ಎಂದು ರಾಮ ಬಾಣಬಿಡುತ್ತಾನೆ. ಬಾಣ ಹೋಗಿ ಶೂದ್ರತಪಸ್ವಿಗೆ ನಮಸ್ಕಾರ ಮಾಡಿ, ವಿಪ್ರನನ್ನು ತಿವಿಯಲು ಬರುತ್ತದೆ. ಆಗ ವಿಪ್ರ 'ಕಾಪಾಡು' ಎಂದು ರಾಮನ ಮೊರೆ ಹೋಗುತ್ತಾನೆ. ರಾಮ ಅವನಿಗೆ ಶೂದ್ರ ತಪಸ್ವಿಯನ್ನು ಆಶ್ರಯಿಸಲು ಹೇಳುತ್ತಾನೆ. ಮೃತ್ಯು ಎದುರಾದದ್ದರಿಂದ ವಿಪ್ರ ತನ್ನ ಅವಿವೇಕವನ್ನು ಅರಿತುಕೊಂಡು ಶೂದ್ರತಪಸ್ವಿಗೆ ಪ್ರಣಾಮ ಮಾಡುತ್ತಾನೆ. "ಬುದ್ಧಿಗಲಿಸಿದಯ್ ಜಾತಿ ಗರ್ವಾಂಧಂಗೆ" ಎಂದು ತನ್ನನ್ನು ತಿದ್ದಿಕೊಳ್ಳುವನು. "ಆರಾದರೇನ್? ಆರಾಧ್ಯರ್ ತಪೋಧನರ್! ನಮಸ್ಕಾರಮೆ ಪುಣ್ಯಂ, ತಿರಸ್ಕಾರಮೆ ಪಾಪಂ!" ಎಂಬ ವಿಶ್ವವ್ಯಾಪಕ ಸಂದೇಶದಿಂದ ನಾಟಕ ಮುಕ್ತಾಯವಾಗುತ್ತದೆ. ಮಾನವ ಪ್ರಜ್ಞೆ ಬೆಳೆಸುವುದು ಈ ನಾಟಕದ ಮುಖ್ಯ ಗುರಿಯಾಗಿದೆ.



ಕೊನೆಯದಾಗಿ, "ರಾಮ ಏಕಪತ್ನಿವ್ರತಸ್ಥ" ಎಂಬ ಬಗ್ಗೆ ವಾಲ್ಮೀಕಿ ಹೇಳುವುದನ್ನು ನೋಡೋಣ: "ರಾಮ ಪೂರ್ವಾಹ್ನೇ ಧರ್ಮಕಾರ್ಯಾಣಿ ಕೃತ್ವಾ ಧರ್ಮೇಣ ಧರ್ಮವಿತ್ ಶೇಷಂ ದಿವಸ ಭಾಗಾರ್ಧಂ ಅಂತಃಪುರತೋಽಭವತ್ - ಬೆಳಗಿನಿಂದ ಮಧ್ಯಾಹ್ನದವರೆಗೆ ಧರ್ಮಕಾರ್ಯದಲ್ಲಿ ತೊಡಗಿರುತ್ತಿದ್ದ; ಮಧ್ಯಾಹ್ನದ ಮೇಲಿನ ಕಾಲವನ್ನು ಅಂತಃಪುರದಲ್ಲಿ ಕಳೆಯುತ್ತಿದ್ದ". (ಉತ್ತರಕಾಂಡ ಸರ್ಗ 42; ಶ್ಲೋಕ 26-29). "ಸೀತಾಮಾದಾಯ ಹಸ್ತೇನ ಮಧು ಮೈರೇಯಕಂ" ಸೀತೆಯ ಜೊತೆ ಮಧು ಮೈರೇಯಕಂ ಎಂಬ ಮದ್ಯಪಾನ ಮಾಡುತ್ತಿದ್ದನು, ಮಾಂಸ ತಿನ್ನುತ್ತಿದ್ದನು. ನೃತ್ಯ ಗೀತೆಗಳಲ್ಲಿ ಪರಿಣತರಾದ ಹುಡುಗಿಯರೂ, ವನಿತೆಯರೂ ಪಾನಮತ್ತರಾಗಿ ರಾಮನ ಎದುರಿಗೆ ನರ್ತಿಸಿದರು. ಧರ್ಮವಂತ ವಿನೋದಪ್ರಿಯ ಪರಮಭೂಷಿತನಾದ ರಾಮ ಆ ಸ್ತ್ರೀಯರನ್ನು ಸಂತೋಷಪಡಿಸಿದನು. - ರಾಮೋ ರಮಯತಾಂ ವರಃ (42, 18-22). ಇದನ್ನು ಗಮನಿಸಿದರೆ ರಾಮ ಏಕ ಪತ್ನಿವ್ರತಸ್ಥ ಎನ್ನುವುದು ಕೇವಲ ಕಟ್ಟುಕಥೆ ಎನ್ನಿಸುತ್ತದೆ.

ವಾಲ್ಮೀಕಿ ಕೊಡುವ ವಿವರಗಳನ್ನು ಪರಿಶೀಲಿಸಿದರೆ ರಾಮ ಸಾಮಾನ್ಯ ವ್ಯಕ್ತಿಯಂತೆ ಮದಿರೆ ಮತ್ತು ಮಾನಿನಿಯರಲ್ಲಿ ಮೈಮರೆಯುತ್ತಿದ್ದನು. ಅವನು ರಾಜ್ಯಭಾರ ಮಾಡುತ್ತಿರಲಿಲ್ಲ, ಅವನ ತಮ್ಮ ಯುವರಾಜ ಭರತ ಆಳ್ವಿಕೆ ನಡೆಸುತ್ತಿದ್ದನು. ಭರತನಿಗೆ ಹದಿನಾಲ್ಕು ವರ್ಷ ರಾಜ್ಯಭಾರ ಮಾಡಿ ಆಡಳಿತದ ಅನುಭವವಿತ್ತು.

"ನಿಯುಜ್ಯಮಾನೋಪಿ ಚ ಯೌವರಾಜ್ಯೇ ತತೋಭ್ಯಷಿಂಚತ್ ಭರತಂ ಮಹಾತ್ಮ- ಮಹಾತ್ಮನಾದ ಭರತನಿಗೆ ರಾಮನು ಯುವರಾಜಪದವಿಯನ್ನು ಕೊಟ್ಟನು" (ಯುದ್ಧಕಾಂಡ, ಸರ್ಗ 131 ಶ್ಲೋಕ 93.)

ರಾಮರಾಜ್ಯ ಎನ್ನುವುದು ಬರಿ ಬೊಗಳೆ. ರಾಮರಾಜ್ಯದಲ್ಲಿ ಶೂದ್ರರಿಗೆ ಮತ್ತು ಮಹಿಳೆಯರಿಗೆ ರಕ್ಷಣೆ ಇರಲಿಲ್ಲ, ಅದು ಹಾರುವರಿಗೆ ಅನುಕೂಲವಾಗಿದ್ದರಿಂದ ಅವರು ಅದನ್ನು ಸುಮ್ಮನೆ ಹೊಗಳುತ್ತಾರೆ. ರಾಮರಾಜ್ಯ ಸುಳ್ಳು, ಅದು ಸ್ತ್ರೀ ದ್ವೇಷಿ ಮತ್ತು ಶೂದ್ರ ದ್ವೇಷಿ ಆಗಿದೆ.

■ ಪ್ರೊ. ಕೆ. ಎಸ್. ಭಗವಾನ್

ಕೊಡಗಿನಲ್ಲಿ ಚೆಡ್ಡಿಗಳ ತಲೆಕೆಟ್ಟ ಆರ್ಭಟ

ಹಲವಾರು ಸಮಯದಿಂದ ಕೊಡಗು ಜಿಲ್ಲೆಯಲ್ಲಿ ಸಂಘ ಪರಿವಾರದವರಿಗೆ ಯಾವುದೇ ಕೆಲಸಗಳು ಇರಲಿಲ್ಲ. ಬಿಜೆಪಿ ಸರಕಾರವಿದ್ದಾಗ ತಣ್ಣಗಿದ್ದ ಸಂಘ ಪರಿವಾರ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ನಂತರ ಏನಾದರೊಂದು ಗೊಂದಲವನ್ನು ಉಂಟುಮಾಡಲು ಹಾತೊರೆಯುತ್ತಿತ್ತು. ಆದರೆ ಅವಕಾಶವೇ ಸಿಗುತ್ತಿರಲಿಲ್ಲ. ಈಗ ವಿವಾದವಲ್ಲದ್ದನ್ನೇ ವಿವಾದವಾಗಿಸಿ ಜಿಲ್ಲೆಯ ಶಾಂತಿ ಕದಡಲು ಚೆಡ್ಡಿಗಳು ಟೊಂಕಕಟ್ಟಿ ನಿಂತಿದ್ದಾರೆ.


ಮಡಿಕೇರಿ ಸಮೀಪದಲ್ಲಿ ಮಕ್ಕಂದೂರು ಎಂಬ ಗ್ರಾಮವಿದೆ. ಈ ಗ್ರಾಮದಲ್ಲಿ ತೀರಾ ಇತ್ತೀಚೆಗೆ ಅಂದರೆ ಒಂದೂವರೆ ವರ್ಷದ ಹಿಂದೆ ನಿಜಾಮುದ್ದಿನ್ ಎಂಬ ವ್ಯಕ್ತಿ ಸ್ವಲ್ಪ ಭೂಮಿಯನ್ನು ಹಣ ನೀಡಿ ಖರೀದಿಸಿದ್ದರು. ಕೊಡಗು ಜಿಲ್ಲೆಯಲ್ಲಿ ಇತ್ತೀಚೆಗೆ ಪ್ರವಾಸಿಗರ ಸಂಖ್ಯೆ ಹೆಚ್ಚಾಗುತ್ತಿದ್ದು, ಬರುವ ಪ್ರವಾಸಿಗರಿಗೆ ತಾವು ತಂಗುವ ಪ್ರದೇಶದಲ್ಲಿ ಆಟವಾಡಲು ನೀರು ಇದ್ದರೆ ಸ್ವರ್ಗ-ಸುಖ ಸಿಕ್ಕಂತೆ. ಹಾಗಾಗಿ ಜಮೀನಿನ ಸುತ್ತ ಕೆರೆ, ಹೊಳೆ ಇದ್ದರೆ ಅಂತಹ ಜಮೀನಿಗೆ ಉತ್ತಮವಾದ ಬೆಲೆ ಸಿಗುತ್ತದೆ. ನಿಜಾಮುದ್ದಿನ್ ಖರೀದಿಸಿದ್ದ ಜಮೀನಿನ ಸುತ್ತ ಹೊಳೆ ಇದ್ದು ಅದು ಪ್ರವಾಸೋದ್ಯಮ ಕೇಂದ್ರವಾಗಿಸಲು ಸಮೃದ್ಧವಾದ ಜಾಗವಾಗಿದೆ.

ಹಾಗಾಗಿ ನಿಜಾಮುದ್ದಿನ್ ಅಲ್ಲಿ ಹೋಂಸ್ಟೇ ಮಾಡುವ ಉದ್ದೇಶವನ್ನು ಇಟ್ಟುಕೊಂಡಿದ್ದರು. ಅದಕ್ಕೆ ಪೂರ್ವಭಾವಿಯಾಗಿ ಮೇ ತಿಂಗಳಿನಲ್ಲಿ ಇಸ್ಲಾಮಿಕ್ ಸಂಘಟನೆಯ ವತಿಯಿಂದ ಮೂರು ದಿನಗಳ ತರಬೇತಿ ಶಿಬಿರವನ್ನು ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗಾಗಿ ಇಟ್ಟುಕೊಂಡಿದ್ದರು. ಆ ವಿದ್ಯಾರ್ಥಿಗಳು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವುದು ಹೇಗೆ ಎನ್ನುವುದರ ಜೊತೆಯಲ್ಲಿ ವಿವಿಧ ಕೋಮಿನವರ ಜೊತೆಯಲ್ಲಿ ಯುವಕರು ಯಾವ ರೀತಿಯಲ್ಲಿ ಸೌಹಾರ್ದಯುತವಾಗಿ ಇರಬೇಕು ಎನ್ನುವುದು ತಿಳಿಹೇಳುವ ಉದ್ದೇಶ ಈ ಶಿಬಿರಕ್ಕಿತ್ತು.

ಈ ಕಾರ್ಯಕ್ರಮವನ್ನು ನಿಜಾಮುದ್ದಿನ್ ಮತ್ತು ಅವರ ಮಿತ್ರರು ಸೇರಿ ಕಾನೂನುಬದ್ಧವಾಗಿಯೇ ನಡೆಸಿದ್ದರು. ಮೈಕ್ ಬಳಸಲು ಅನುಮತಿಯಿಂದ ಹಿಡಿದು, ಕಾರ್ಯಕ್ರಮಕ್ಕೆ ಪಡೆಯಬೇಕಾಗಿದ್ದ ಅನುಮತಿಯನ್ನು ಕೂಡ ಪಡೆದಿದ್ದರು. ನಿಜಾಮುದ್ದಿನ್ ಸಲಫಿ ಸಂಘಟನೆಯವರಾಗಿದ್ದು, ಈ ಸಂಘಟನೆಯವರು ಒಂದು ರೀತಿಯಲ್ಲಿ ಪ್ರದರ್ಶನ ಪ್ರಿಯರು. ತಾವು ನಡೆಸುವ ಕಾರ್ಯಕ್ರಮ, ತಮ್ಮ ಸ್ಥಿತಿಗತಿಗಳ ಪ್ರದರ್ಶನ ಎಲ್ಲವನ್ನೂ ಮಾಡುತ್ತಾರೆ. ಯಾವುದೇ ದುರುದ್ದೇಶದಿಂದ ಅಲ್ಲ, ತಮ್ಮ ದುಡಿಮೆಯನ್ನು ಸರಿಯಾದ ರೀತಿಯಲ್ಲಿ ಖರ್ಚು ಮಾಡಬೇಕು ಮತ್ತು ಒಂದಷ್ಟು ಆಡಂಬರವನ್ನೂ ಮಾಡಬೇಕು ಎನ್ನುವುದು ಅವರ ಕಲ್ಪನೆ. ಹಾಗಾಗಿ ಉತ್ತಮವಾದ ವಾಹನಗಳಲ್ಲೇ ಓಡಾಡುತ್ತಾರೆ. ಎಲ್ಲಾ ಸೌಕರ್ಯಗಳನ್ನೂ ಮಾಡಿಕೊಳ್ಳುತ್ತಾರೆ.

ನಿಜಾಮುದ್ದಿನ್ ಅವರಿಗೆ ತಾನು ಮುಂದೆ ಆರಂಭಿಸಲು ಉದ್ದೇಶಿಸಿದ್ದ ಹೋಂಸ್ಟೇಯಲ್ಲಿ ಕಾಯಂ ಆಗಿ ನೆಲೆ ನಿಲ್ಲುವ ಕಟ್ಟಡಗಳನ್ನು ಕಟ್ಟುವ ಉದ್ದೇಶ ಇರಲಿಲ್ಲ. ಜನರನ್ನು ಆಕರ್ಷಿಸಲು ಬೇಕಾದಂತಹ ತಾತ್ಕಾಲಿಕ ಟೆಂಟುಗಳನ್ನು ಹಾಕಿಕೊಂಡು, ಅದಕ್ಕೆ ಬೇಕಾದಂತಹ ತಾತ್ಕಾಲಿಕ ಶೌಚಾಲಯವನ್ನೂ ನಿರ್ಮಿಸಿ, ಹೊಸತನವನ್ನು ಪರಿಚಯಿಸುವುದು ಅವರ ಉದ್ದೇಶವಾಗಿತ್ತು. ಅದನ್ನು ಶಿಬಿರದಲ್ಲಿ ಪ್ರಾಯೋಗಿಕವಾಗಿ ಅಳವಡಿಸಿದ್ದರು.

ತಮ್ಮ ಗ್ರಾಮದಲ್ಲಿ ಒಬ್ಬ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ವ್ಯಕ್ತಿ ಒಂದು ಕಾರ್ಯಕ್ರಮ ನಡೆಸಿದ್ದು, ಅಲ್ಲಿಗೆ ಸಾಕಷ್ಟು ಜನರು ಆಗಮಿಸಿದ್ದು, ಕಾರ್ಯಕ್ರಮಕ್ಕೆ ಮೈಕ್ ಬಳಸಿದ್ದು ಇವೆಲ್ಲವೂ ಕೆಲವು ವ್ಯಕ್ತಿಗಳ ಕಿಚ್ಚಿಗೆ ಮೆಣಸಿನಕಾಯಿಯನ್ನು ಅರೆದಂತೆ ಆಗಿತ್ತು. ಹಾಗಾಗಿ ಏನಾದರೊಂದು ಸೃಷ್ಟಿಸಿ ಅವರ ವಿರುದ್ಧ ಜನರನ್ನು ಎತ್ತಿಕಟ್ಟಬೇಕು ಎನ್ನುವುದರ ಜೊತೆಯಲ್ಲಿ ಅವರನ್ನು ಆ ಗ್ರಾಮದಿಂದಲೇ ಓಡಿಸಬೇಕು ಎನ್ನುವ ಹುನ್ನಾರವನ್ನು ಕೆಲವು ಚೆಡ್ಡಿಗಳು ಮಾಡಿದರು.


ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ರವಿ ಕುಶಾಲಪ್ಪ ಅವರ ನೇತೃತ್ವದಲ್ಲಿ ಡಿಸಿಗೆ ಮನವಿ ಸಲ್ಲಿಸುತ್ತಿರುವುದು

ದೇವಾಲಯವನ್ನು ಒಡೆದ ಆರೋಪ

ನಿಜಾಮುದ್ದಿನ್ ಮಕ್ಕಂದೂರಿನಲ್ಲಿ ಖರೀದಿಸಿದ ಜಮೀನು ಈ ಹಿಂದೆ ನಾರಾಯಣ ಎಂಬ ವ್ಯಕ್ತಿಗೆ ಸೇರಿತ್ತು. ಅವರು ಕೇರಳದ ಪಾಲೇಕಾಡಿನಿಂದ ಬಂದು ಕೆಲವು ವರ್ಷಗಳ ಹಿಂದೆ ಇಲ್ಲಿ ಪೈಸಾರಿ ಜಾಗವನ್ನು ಬಳಸಿಕೊಂಡು ನೆಲೆ ನಿಂತಿದ್ದರು. ಸುಮಾರು 3.20 ಎಕರೆ ಜಮೀನಿಗೆ ಹಕ್ಕುಪತ್ರ ಅವರಿಗೆ ದೊರಕಿತ್ತು. ಅದು ಖುಷ್ಕಿ ಜಮೀನು. ನಾರಾಯಣ ಅವರಿಗೆ 'ಸುಬ್ರಹ್ಮಣ್ಯ ದೇವರು' ಮೈಮೇಲೆ ಆವಾಹನೆ ಮಾಡಿಕೊಳ್ಳುವ ಕಲೆ ತಿಳಿದಿತ್ತು ಎಂದು ಪ್ರತೀತಿ. ಹಾಗಾಗಿ ಅಲ್ಲಿಗೆ ಕೆಲವರು ಭೇಟಿ ನೀಡುತ್ತಿದ್ದರು. ಇದರ ಫಲವಾಗಿ ಸುಬ್ರಹ್ಮಣ್ಯ ದೇವರ ಒಂದು ಸಣ್ಣ ಗುಡಿಯನ್ನು ನಾರಾಯಣ ನಿರ್ಮಿಸಿಕೊಂಡಿದ್ದರು. ಇದು ನಾರಾಯಣ ಅವರ ಆರ್ಥಿಕಸ್ಥಿತಿಯನ್ನು ಉತ್ತಮಗೊಳಿಸಲು ಸಹಕಾರ ಮಾಡಿತ್ತು. ಅವರಿಗೆ ಭಾಸ್ಕರ, ಅಯ್ಯಪ್ಪ ಮತ್ತು ಶ್ರೀಧರ ಎಂಬ ಮೂವರು ಮಕ್ಕಳು. ಪುಕ್ಕಟೆ ಹಣ ಬರುವುದರಿಂದ ಮಕ್ಕಳು ಮೈಮುರಿದು ದುಡಿಯುವುದನ್ನಾಗಲಿ, ತಂದೆಗೆ ಸುಲಭವಾಗಿ ಕರಗತವಾಗಿದ್ದ ವಿದ್ಯೆಯನ್ನಾಗಲಿ ಕಲಿಯಲು ಪ್ರಯತ್ನಿಸಲಿಲ್ಲ. ಚಟಗಳನ್ನು ಕಲಿತಿದ್ದರು.

ನಾರಾಯಣ ಅವರ ಕಾಲಾನಂತರ ಚಟಗಳ ದಾಸರಿಗೆ ಸಾಲ ಮಾಡುವುದೊಂದೇ ಮಾರ್ಗವಾಗಿತ್ತು. ಈ ಮಧ್ಯೆ ಓರ್ವ ಸಹೋದರನ ಮಗಳಿಗೆ ಮದುವೆಯೂ ಗೊತ್ತಾಗಿತ್ತು. ಹಾಗಾಗಿ ತಂದೆ ಕಷ್ಟಪಟ್ಟು ರೂಢಿಸಿದ್ದ ಜಮೀನನ್ನು ಮಾರಾಟ ಮಾಡಲು ಅವರು ಮುಂದಾದರು. ಸ್ಥಳೀಯರು ಯಾರೂ ಅದಕ್ಕೆ ಉತ್ತಮ ಬೆಲೆಯನ್ನು ನೀಡಲಿಲ್ಲ. ವಾಸ್ತವದಲ್ಲಿ 3.20 ಎಕರೆಯಾದರೂ ಸುಮಾರು 5 ಎಕ್ರೆ ಪ್ರದೇಶ ನಾರಾಯಣ ಅವರ ವಶದಲ್ಲಿ ಇತ್ತು ಎನ್ನಲಾಗಿದೆ. ಹಣದ ಮುಗ್ಗಟ್ಟನ್ನು ತೀರಿಸಿಕೊಳ್ಳಲು ಬ್ರೋಕರ್‌ಗಳನ್ನು ಕೂಡ ಮಾರಾಟಕ್ಕಾಗಿ ಗೊತ್ತು ಮಾಡಿದ್ದರು. ಕೊನೆಗೆ ಬ್ರೋಕರ್ ಒಬ್ಬರ ಮೂಲಕವೇ ಜಮೀನು ಉತ್ತಮ ಬೆಲೆಗೆ ಮಾರಾಟವಾಗಿತ್ತು.

ನಿಜಾಮುದ್ದಿನ್ ಈ ಜಮೀನನ್ನು ಕೊಳ್ಳುವ ಮುನ್ನ ಅಲ್ಲಿ ಒಂದು ಚಿಕ್ಕದಾದ ಗುಡಿ ಇರುವುದನ್ನು ಗಮನಿಸಿ, ತಾನು ಮುಸ್ಲಿಮನಾಗಿರುವ ಕಾರಣ ಹಿಂದೂ ಗುಡಿ ಇರುವ ಪ್ರದೇಶ ತನಗೆ ಬೇಡ ಎಂದು ಹೇಳಿದ್ದರು. ಆಗ ಆ ಗುಡಿಯನ್ನು ಅಲ್ಲಿಂದ ತಾವು ತೆರವುಗೊಳಿಸಿಕೊಡುವುದಾಗಿಯೂ ಅದು ತಮ್ಮ ಖಾಸಗಿ ಗುಡಿಯೆಂದೂ ಭಾಸ್ಕರ ಮತ್ತು ಸಹೋದರರು ನಿಜಾಮುದ್ದಿನ್‌ಗೆ ಹೇಳಿದರು. ಅದರಂತೆ ಅವರು ಪಳನಿಗೆ ತೆರಳಿ ತಾವು ತಮ್ಮ ಸ್ಥಳವನ್ನು ಮಾರಾಟ ಮಾಡಿರುವುದಾಗಿಯೂ, ಅಲ್ಲಿ ತಮ್ಮ ತಂದೆ ನಿರ್ಮಿಸಿದ್ದ ಪುಟ್ಟ ಸುಬ್ರಹ್ಮಣ್ಯ ದೇವರಗುಡಿಯೊಂದನ್ನು ಕೆಡವಬೇಕಾಗಿದೆ ಎಂದೂ. ಇಲ್ಲದಿದ್ದರೆ ಖರೀದಿಸುವವರು ಖರೀದಿಸಲು ಮುಂದಾಗುವುದಿಲ್ಲ ಎಂದು ತಿಳಿಸಿದಾಗ, ಗುಡಿಯಲ್ಲಿ ವಿಗ್ರಹವೇನಾದರೂ ಇದ್ದರೆ ಅಥವ ಪೂಜಿಸುವ ಯಾವುದಾದರೂ ವಸ್ತು ಇದ್ದರೆ ಅದನ್ನು ಪಳನಿಗೆ ತಂದು ಒಪ್ಪಿಸಬೇಕೆಂದು ಮತ್ತು ಇದಕ್ಕೆ ಸಂಬಂಧಪಟ್ಟಂತೆ ಹರಕೆ ಮಾಡಿಕೊಳ್ಳಬೇಕೆಂದು ಅವರಿಗೆ ಪಳನಿಯಲ್ಲಿ ಹೇಳಿದ್ದರು.

ಅದರಂತೆ ಅವರು ಅಲ್ಲಿದ್ದ ಪುಟ್ಟ ವಿಗ್ರಹವನ್ನು ಪಳನಿಗೆ ಅರ್ಪಿಸಿ, ಆ ನಂತರ ಗುಡಿಯನ್ನು ತೆರವುಗೊಳಿಸಿ, ಭೂಮಿಯನ್ನು ನಿಜಾಮುದ್ದಿನ್ ವಶಕ್ಕೆ ನೀಡಿದ್ದರು. ಈ ಪ್ರಕ್ರಿಯೆಗಳೆಲ್ಲವೂ ಮುಗಿದು ಸುಮಾರು ಒಂದು ವರ್ಷಕ್ಕೂ ಹೆಚ್ಚು ಕಾಲ ಕಳೆದಿದೆ. ಭೂಮಿ ಮಾರಾಟ ಮಾಡಿದ ನಂತರವೂ ಮನೆ ಸಿಗದ ಕಾರಣ ಸ್ವಲ್ಪ ಸಮಯ ಭಾಸ್ಕರ ಮತ್ತು ಸಹೋದರರು ಅಲ್ಲಿಯೇ ವಾಸವಿದ್ದರು. ತೀರಾ ಇತ್ತೀಚೆಗೆ ಅದನ್ನು ನಿಜಾಮುದ್ದಿನ್‌ಗೆ ಬಿಟ್ಟುಕೊಟ್ಟಿದ್ದರು.

ಈಗ ಸುಮಾರು ಒಂದೂವರೆ ವರ್ಷ ಕಳೆದ ನಂತರ ಆ ಸ್ಥಳದಲ್ಲಿ ಇದ್ದ ಗುಡಿಯನ್ನು ಹೊಡೆಯಲಾಗಿದೆ ಮತ್ತು ಗುಡಿ ಇದ್ದ ಪ್ರದೇಶದಲ್ಲಿ ಶೌಚಾಲಯವನ್ನು ನಿರ್ಮಿಸಲಾಗಿದೆ ಎಂಬ ಆರೋಪವನ್ನು ನಿಜಾಮುದ್ದಿನ್‌ರವರ ಮೇಲೆ ಚೆಡ್ಡಿಗಳು ಹೊರಿಸಿ, ಪ್ರತಿಭಟನೆಗಳು, ಧರಣಿ, ರಸ್ತಾರೋಖೋ ಮುಂತಾದುವನ್ನು ನಡೆಸಿದ್ದಾರೆ.

ಗುಡಿ ಕೆಡವಿದ್ದು ಪೊಲೀಸರಿಗೂ ತಿಳಿದಿತ್ತು

ತಮ್ಮ ಜಾಗದಲ್ಲಿದ್ದ ಗುಡಿಯನ್ನು ಕೆಡವಿ ಅಲ್ಲಿದ್ದ ಸಾಮಗ್ರಿಗಳನ್ನು ಪಳನಿಗೆ ತೆಗೆದುಕೊಂಡು ಹೋಗುವ ಮುನ್ನ ಭಾಸ್ಕರ ಮತ್ತು ಸಹೋದರರು ಮಡಿಕೇರಿ ಗ್ರಾಮಾಂತರ ಠಾಣೆಗೆ ಲಿಖಿತ ಅರ್ಜಿಯೊಂದನ್ನು ಸಲ್ಲಿಸಿ, ತಾವು ಗುಡಿಯನ್ನು ಕೆಡವುತ್ತಿರುವುದಾಗಿಯೂ, ಅಲ್ಲಿರುವಂತಹ ವಿಗ್ರಹ ಮತ್ತು ಇತರ ವಸ್ತುಗಳನ್ನು ಪಳನಿಗೆ ತೆಗೆದುಕೊಂಡು ಹೋಗುತ್ತಿರುವುದಾಗಿಯೂ ತಿಳಿಸಿದ್ದರು. ಹಾಗೆ ಪಳನಿ ದೇವಾಲಯಕ್ಕೆ ವಿಗ್ರಹ ಮತ್ತು ಇತರ ವಸ್ತುಗಳನ್ನು ಕೊಂಡೊಯ್ಯುವಾಗ ತಮ್ಮ ಮೇಲೆ ಕದ್ದ ಅಥವ ಇನ್ಯಾವುದೇ ಆರೋಪಗಳು ಬರಬಾರದು ಎನ್ನುವ ಕಾರಣಕ್ಕೆ ಈ ಬಗ್ಗೆ ಪೊಲೀಸರು ದೃಢೀಕರಣವನ್ನು ನೀಡಬೇಕೆಂದು ಕೋರಿದ್ದರು. ಆದರ ಆಧಾ[...] ಪೊಲೀಸರು ವಿಗ್ರಹವನ್ನು ಕೊಂಡೊಯ್ಯಲು ಅ[...] ನೀಡಿ ಲಿಖಿತವಾಗಿ ದೃಢೀಕರಣವನ್ನು ನೀಡಿದ್ದರು.

ಹಾಗಾಗಿ ಇಲ್ಲಿ ಯಾವುದೇ ಅಕ್ರಮಗಳು ನ[...] ಆದರೆ ಮುಸ್ಲಿಂ ವ್ಯಕ್ತಿಯೊಬ್ಬ ತಮ್ಮ ಗ್ರಾಮದಲ್ಲಿ ಬ[...] ವಾಗಿ ಕಾರ್ಯಕ್ರಮ ನಡೆಸಿದ್ದು ಸಹಿಸಲು ಸಾಧ್ಯ[...] ಅಲ್ಲಿದ್ದ ಸುಬ್ರಹ್ಮಣ್ಯ ಗುಡಿಯನ್ನು ಕೆಡವಲಾಗಿದೆ [...] ಆರೋಪವನ್ನು ಹೊರಿಸಿ, ನಿಜಾಮುದ್ದಿನ್ ಮತ್ತು ರಿ[...] ಎಂಬವರ ಮೇಲೆ ಪೊಲೀಸ್ ದೂರು ನೀಡಲಾ[...]

ಇದಾದ ನಂತರ ಭಾಸ್ಕರ ಮತ್ತು ಸಹೋ[...] ಪತ್ರಿಕಾಗೋಷ್ಠಿಯನ್ನು ನಡೆಸಿ, ಆ ಜಮೀನು [...] ಜಮೀನು ಎಂದು, ತಮ್ಮ ತಂದೆಯವರು ನಿ[...] ಗುಡಿಯನ್ನು ತಾವೇ ಮಾರಾಟ ಮಾಡುವಾಗ ತೆರವು[...] ರುವುದಾಗಿ ತಿಳಿಸಿದ್ದಾರೆ. ಖರೀದಿದಾರರಿಗೂ, ಗು[...] ಯಾವುದೇ ಸಂಬಂಧ ಇಲ್ಲ ಎಂಬುದನ್ನೂ [...] ಸ್ಪಷ್ಟಪಡಿಸಿದ್ದಾರೆ. ಆದರೆ ಇದ್ಯಾವುದೂ ಪ್ರತಿಭಟಿಸು[...] ಚೆಡ್ಡಿಗಳಿಗೆ ಕೇಳಿಸುತ್ತಿಲ್ಲ. ಅವರು ಬೇಕಂತಲೇ ಶಾಂತ[...] ಜಿಲ್ಲೆಯಲ್ಲಿ ಅಶಾಂತಿ ಮೂಡಿಸಲು ಮುಂದಾಗಿದ್ದಾರೆ. [...] ನೇತೃತ್ವವನ್ನು ಕೊಡಗು ಜಿಲ್ಲಾ ಪಂಚಾಯಿತಿಯ [...] ಅಧ್ಯಕ್ಷ ಶಾಂತೆಯಂಡ ರವಿಕುಶಾಲಪ್ಪ ವಹಿಸಿಕೊಂ[...] ಬೆಂಕಿ ಹಾಕಲು ಚೆಡ್ಡಿ ಚತುರ ಜಗದೀಶ ಕಾರಂತ [...] ಬಂದು ಒಂದು ಪ್ರತಿಭಟನಾ ರ್‍ಯಾಲಿಯನ್ನು ನಡೆಸಿ[...] ದ್ದಾರೆ.

ನಿರ್ಜೀವ ಪೊಲೀಸ್ ಹಾಗೂ ಜಿಲ್ಲಾ[...]

ಖಾಸಗಿ ಜಮೀನಿನಲ್ಲಿ ಇದ್ದಂತಹ ಗುಡಿ [...] ಮಾಡಲಾಗಿದೆ ಎಂದು ಆರೋಪವನ್ನು ಹೊರಿಸಿ, [...] ನೀಡಿದ ಕೂಡಲೇ ಪೊಲೀಸರು ಹೇಳಬೇಕಾಗಿದ್ದು [...] ಖಾಸಗಿ ಜಮೀನು, ಸಾರ್ವಜನಿಕರಿಗೆ ಸಂಬಂಧ[...] ವಿಚಾರವಲ್ಲ' ಎನ್ನುವುದಾಗಿತ್ತು. ಆದರೆ ಪೊಲೀಸರು [...] ಮಾಡದೆ ಮಾರಾಟಗಾರರ ಮತ್ತು ಖರೀದಿದಾರರ [...] ಗುಡಿ ಕೆಡವಿದ ಆರೋಪವನ್ನು ಹೊರಿಸಿ, ಮೊಕದ್ದಮೆ [...] ದಾಖಲಿಸಿದ್ದಾರೆ.

ಈಗ ಮೊಕದ್ದಮೆ ದಾಖಲಿಸಿದ ನಂತ[...] ಆರೋಪಿಗಳನ್ನು ಪೊಲೀಸರು ಬಂಧಿಸುತ್ತಿಲ್ಲ, ಅ[...] ರಕ್ಷಿಸುತ್ತಿದ್ದಾರೆ ಎಂದು ಪೊಲೀಸರ ಮೇಲೆ ಆರೋ[...] ಹೊರಿಸಿ ಪ್ರತಿಭಟನೆಗಳು ನಡೆಯುತ್ತಿವೆ. ಅನವಶ್ಯ[...] ಪೊಲೀಸರು ಮೊಕದ್ದಮೆ ದಾಖಲಿಸುವ ಮೂಲಕ [...] ಅಸ್ತ್ರವನ್ನು ಪ್ರತಿಭಟನಾಕಾರರಿಗೆ ನೀಡಿದ್ದಾರೆ. ಅಸಲಿ[...] ಗುಡಿ ಕೆಡವಿದ್ದರೆ ಆ ಮೊಕದ್ದಮೆ ದಾಖಲಿಸಬೇಕಾ[...] ಜಮೀನನ್ನು ಮಾರಾಟ ಮಾಡಿದ ವ್ಯಕ್ತಿಗಳ [...] ಖರೀದಿದಾರರು ಜಮೀನನ್ನು ಖರೀದಿಸುವಾಗ [...] ಗುಡಿಯೇ ಇರಲಿಲ್ಲ. ಹಾಗಿರುವಾಗ ಖರೀದಿದಾರರ [...] ಪೊಲೀಸರು ಮೊಕದ್ದಮೆಯನ್ನು ದಾಖಲಿಸುವುದ[...] ಹೇಗೆ?

ಒಂದು ಕಡೆ ಪೊಲೀಸರು ಈ ರೀತಿ [...] ತೆಗೆದುಕೊಂಡರೆ, ಮತ್ತೊಂದು ಕಡೆ ಮಡಿಕೇ[...] ತಹಸೀಲ್ದಾರರಾಗಿ ಇರುವಂತಹ ಅತ್ಯಂತ ಭ್ರಷ್ಟ [...] ಕುಂಞಮ್ಮ 'ಈ ಜಮೀನಿನ ಖಾತೆ ಇನ್ನೂ ಖರೀದಿ[...] ಹೆಸರಿಗೆ ವರ್ಗಾವಣೆಯಾಗಿಲ್ಲ. ಏಕೆಂದರೆ ಇದು [...] ಜಮೀನಾಗಿರುವ ಕಾರಣ ಅದನ್ನು ಖರೀದಿಸುವಂತ[...] ಈ ಬಗ್ಗೆ ಉಪವಿಭಾಗಾಧಿಕಾರಿಗಳ ನ್ಯಾಯಾಲ[...] ವಿಚಾರಣೆ ಬಾಕಿ ಉಳಿದಿದೆ. ಆದ್ದರಿಂದ ಖಾತೆ ವರ್ಗಾ[...] ಅಸಾಧ್ಯ. ಸರಕಾರ ಆ ಜಮೀನನ್ನು ಮುಟ್ಟುಗೋ[...] ಹಾಕಿಕೊಳ್ಳುತ್ತದೆ' ಎಂದು ಹೇಳಿದ್ದಾರೆ.

ಮತ್ತೊಂದು ಕಡೆ ಆರಾಧನಾ ಸಮಿತಿಯ ಮ[...] ಈ ಗುಡಿಗೆ 15 ಸಾವಿರ ರೂಪಾಯಿ ಸರಕಾರ[...]


ಮಡಿಕೇರಿ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ನಾಗರಿಕರ ಪ್ರತಿಭಟನೆ


ರವಿ ಕುಶಾಲಪ್ಪ ಮತ್ತು ಜಗದೀಶ್ ಕಾರಂತ್ ಮನವಿ ಸಲ್ಲಿಸುತ್ತಿರುವುದು

ಲಾಗಿದೆ. ಹಾಗಾಗಿ ವಂಚನೆ ಮಾಡಿದ್ದಾರೆ ಎಂಬುದನ್ನು ಅತಿಯಾದ ಚೆಡ್ಡಿ ಪ್ರೇಮವನ್ನು ತೋರುತ್ತಿರುವ ಸಿಲ್ದಾರರು ತೇಲಿಬಿಟ್ಟಿದ್ದಾರೆ.

ದರ ಮೂಲ ಮಾಲಿಕ ನಾರಾಯಣ ಅವರಿಗೆ ರು 30 ವರ್ಷಗಳ ಹಿಂದೆ ಜಿಲ್ಲಾ ಆಡಳಿತ ಈ ನನ್ನು ಮಂಜೂರು ಮಾಡಿತ್ತು. ಮಂಜೂರಾತಿಯ ಮದ ಪ್ರಕಾರ 15 ವರ್ಷಗಳ ಕಾಲ ಮಂಜೂರಾದ ನನ್ನು ಪರಭಾರೆ ಮಾಡುವಂತೆ ಇಲ್ಲ. ಒಂದು ವೇಳೆ ರ್ಯ ಕಾರಣದಿಂದ ಪರಭಾರೆ ಮಾಡಬೇಕಾದರೆ ಯ ಇಲಾಖೆಯಿಂದ ಅನುಮತಿಯನ್ನು ಪಡೆಯಬೇಕು. ಈ ಜಮೀನು ಮಂಜೂರಾಗಿ 30 ವರ್ಷ ದ್ದರಿಂದ ಯಾವುದೇ ಅನುಮತಿ ಬೇಕಾಗಿರಲಿಲ್ಲ. ದ್ದರೂ ಯಾವುದೇ ಸಮಸ್ಯೆ ಕಾಡಬಾರದು ಎಂಬ ಕ್ಕಾಗಿ ನಿಜಾಮುದ್ದಿನ್ ಖರೀದಿಗೆ ಮುನ್ನ ಭಾಗಾಧಿಕಾರಿಗಳಿಂದ ಅನುಮತಿಯನ್ನು ಪಡೆದಿದ್ದರು. ಂತರ ಖರೀದಿ ನೋಂದಾಯಿಸಲ್ಪಟ್ಟಿತ್ತು. ಖಾತೆ ವಣೆಯ ವೇಳೆಯಲ್ಲಿ ತಹಸೀಲ್ದಾರರು ಕ್ಯಾತೆ ತೆಗೆದು ಧಾರಣಾ ಕಾಯ್ದೆಯ ಕಲಂ 79ಎ ಮತ್ತು ಬಿ ರು ಇದನ್ನು ಖರೀದಿಸುವಂತಿಲ್ಲ ಎಂದು ಭಾಗಾಧಿಕಾರಿಗಳಿಗೆ ರವಾನೆ ಮಾಡಿದ್ದರು. ನಿಯಮದ ಖುಷ್ಕಿ ಜಮೀನನ್ನು ಖುಷ್ಕಿ ಜಮೀನು ಉಳ್ಳವರೇ ದಿಸಬೇಕು. ನಿಜಾಮುದ್ದಿನ್ ಅವರಿಗೆ ಾರಂಪರ್ಯವಾಗಿ ಖುಷ್ಕಿ ಜಮೀನು ಇರುವುದರಿಂದ ಆ ದಾಖಲೆಯನ್ನು ಉಪವಿಭಾಗಾಧಿಕಾರಿಗಳಿಗೆ ಖಾತೆ ವರ್ಗಾವಣೆಯನ್ನು ಮಾಡಿಸಿಕೊಂಡಿದ್ದಾರೆ.

ಹೀಗೆ ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಇದ್ದರೂ ಯ ಇಲಾಖೆ ಮತ್ತು ಪೊಲೀಸ್ ಇಲಾಖೆ ರಿಗಳು ಚೆಡ್ಡಿಗಳೊಂದಿಗೆ ಸೇರಿಕೊಂಡು ಅವರ ಕ್ಕೆ ಮಣಿದು ಪ್ರಕರಣ ದಾಖಲಿಸಿ ಅಶಾಂತಿಗೆ ಣಾಗಿದ್ದಾರೆ. ಚೆಡ್ಡಿಗಳ ಒತ್ತಡಕ್ಕೆ ಮಣಿದು ಪೊಲೀಸರು ತಮ್ಮನ್ನು ಬಂಧಿಸಬಹುದೋ ಎಂಬ ಕಾರಣಕ್ಕೆ ದಾರರು ಈಗ ನಾಪತ್ತೆಯಾಗಿದ್ದಾರೆ. ಬಹುಶಃ ಣಾ ಜಾಮೀನಿಗಾಗಿ ತಡಕಾಡುತ್ತಿದ್ದಾರೋ ಏನೋ ದು.

ಭೂಮಾಫಿಯಾದ ತಂತ್ರಗಾರಿಕೆ?


ಎಲ್ಲಾ ಘಟನೆಯ ಹಿಂದೆ ಭೂ ಮಾಫಿಯಾದ ಕವಿದೆ ಎಂಬ ಅಂಶಗಳು ಈಗ ಕೇಳಿಬರುತ್ತಿದೆ. ಮುದ್ದಿನ್ ಜಾಗ ಖರೀದಿಸಿ ಒಂದಷ್ಟು ದ್ಧಿಪಡಿಸಿದ ನಂತರ ಅಲ್ಲಿ ಪ್ರವಾಸಿಕೇಂದ್ರವನ್ನು ಬಹುದು ಎಂಬ ಕಲ್ಪನೆ ಕೆಲವರಿಗೆ ಬಂದಿದೆ. ಈಗ ಟನೆಯ ಮುಂಚೂಣಿಯಲ್ಲಿ ಇರುವಂತಹ ಕೆಲವು ಪರಿವಾರದ ರಿಯಲ್ ಎಸ್ಟೇಟ್ ದಂಧೆಯವರು ನಿಜಾಮುದ್ದಿನ್ ಅವರಿಗೆ ಕಡಿಮೆ ದರಕ್ಕೆ ಕೊಂಡು ನಂತರ ಭಾರೀ ಮೊತ್ತಕ್ಕೆ ಮತ್ತೊಬ್ಬರಿಗೆ ಟ ಮಾಡಿಸುವ ಯತ್ನದಲ್ಲಿ ಇದ್ದಾರೆ: ಈ ಕುತಂತ್ರಕ್ಕೆ ೇರಿಯಲ್ಲಿ ಹಿರಿಯ ಪೊಲೀಸ್ ಅಧಿಕಾರಿಯಾಗಿರುವ ಒತ್ತಾಸೆ ನೀಡುತ್ತಿದ್ದಾರೆ ಎಂದು ಕೇಳಿಬರುತ್ತಿದೆ. ದು ಎಷ್ಟು ಸತ್ಯವೋ ತಿಳಿಯದಿದ್ದರೂ, ಮುಸ್ಲಿಮರು ಜಾಗವನ್ನು ಖರೀದಿಸಿದ್ದಾರೆ ಮತ್ತು ಅಲ್ಲಿ ಕ್ರಮವನ್ನು ನಡೆಸಿದ್ದಾರೆ ಎನ್ನುವ ಏಕೈಕ ಕಾರಣಕ್ಕಾಗಿ ಳು ಅವರ ವಿರುದ್ಧ ತೊಡೆ ತಟ್ಟಿದ್ದಾರೆ. ಈಗ ಇಲ್ಲಿ ಲಯ ಪುನರ್ ನಿರ್ಮಾಣ ಸಮಿತಿ ಸೇರಿದಂತೆ ಸಮಿತಿಗಳು ತಲೆ ಎತ್ತಿದ್ದು, ನಿಜಾಮುದ್ದಿನ್ ತಾವಾಗಿ ಆ ಜಮೀನನ್ನು ಮಾರಾಟ ಮಾಡಬೇಕು ಎನ್ನುವ ಗಳನ್ನು ಮಾಡುತ್ತಿದ್ದಾರೆ. ಈ ಬಗ್ಗೆ ಮಾತನಾಡಬೇಕಾದ ಸ್ ಪಕ್ಷ ಏನನ್ನೂ ಮಾತನಾಡುತ್ತಿಲ್ಲ, ದುರಂತವೆಂದರೆ ಜಿಲ್ಲಾಧಿಕಾರಿಗಳಾಗಿ ಆಗಮಿಸಿರುವ ಮೀರ್ ಅಹ್ಮದ್ ಯಾವ ಕ್ರಮ ತೆಗೆದುಕೊಂಡರೂ ಮೇಲೆ ಆರೋಪಗಳನ್ನು ಹೊರಿಸುವ ಸಾಧ್ಯತೆ ಹಾಗಾಗಿ ಅವರು ತಟಸ್ಥರಾಗಿಯೇ ಉಳಿದಿದ್ದಾರೆ.

ಲ್ಲಾ ಕೊಡಗಿನ ಮಾಯಮುಡಿ ಎಂಬಲ್ಲಿ ನಾರಾಯಣ ವ್ಯಕ್ತಿ ತನ್ನ ಸ್ವಂತ ಜಮೀನಿನಲ್ಲಿ ಮುತ್ತಪ್ಪ ದೇವಾಲಯ ನನ್ನು ಒಂದೆರಡು ವರ್ಷಗಳ ಹಿಂದೆ ನಿರ್ಮಿಸಲು ದಾಗ, ಅಲ್ಲಿಯ ಬಿಜೆಪಿಯವರು ಅದಕ್ಕೆ ವಿರೋಧ ವ್ಯಕ್ತಪಡಿಸಿದ್ದೇ ಅಲ್ಲದೆ, ನಾರಾಯಣರವರು ಲಯ ನಿರ್ಮಾಣಕ್ಕಾಗಿ ಹಾಕಿದ್ದ ಅಡಿಪಾಯವನ್ನು ಹಾಕಿದ್ದರು. ಆನಂತರ ನಾರಾಯಣರವರಿಗೆ ಇಲ್ಲದ ಳನ್ನು ನೀಡಿದ್ದರು. ಈ ಬಗ್ಗೆ ಸಂಘ ಪರಿವಾರದವರ ರಲಿಲ್ಲ, ದೇವಾಲಯ ನಿರ್ಮಿಸಲು ಹೊರಟವರಿಗೆ ಳ ನೀಡಿದಾಗ, ಅದನ್ನು ಪ್ರಶ್ನಿಸದ ಚೆಡ್ಡಿಗಳು ಖಾಸಗಿ ನಲ್ಲಿ ಮಾರಾಟ ಮಾಡುವ ವೇಳೆಯಲ್ಲಿ ಇದ್ದ ವನ್ನು ತೆರವುಗೊಳಿಸಿದಕ್ಕಾಗಿ ಭಾರೀ ಸದ್ದು ಮಾಡು ಖರೀದಿದಾರರು ದೇವಾಲಯ ಇದ್ದ ಜಾಗದಲ್ಲಿ ಲಯ ನಿರ್ಮಿಸಿದ್ದರು ಎಂಬ ಸುಳ್ಳು ಆರೋಪಗಳನ್ನೂ ತಾವೆಷ್ಟು ಭಂಡರು ಎಂಬುದನ್ನು ತೋರಿಸಿ ದ್ದಾರೆ.

■ ಬಿ.ಎನ್. ಮನು ಶೆಣೈ

ಅರಣ್ಯ ಮಂತ್ರಿ ರೈ ದರ್ಬಾರ್‌ರಲ್ಲಿ ವರ್ಗಾವಣೆ ಸುಗ್ಗಿ!!

ನಿದ್ದೆ ಬಡುಕ ಮಂತ್ರಿ ರಮಾನಾಥ ರೈ ಎದ್ದು ಕುಂತಿದ್ದಾರೆ! ಅರಣ್ಯ ಇಲಾಖೆಯಲ್ಲಿ ಬಿರುಸಾಗಿ ನಡೆಯುತ್ತಿರುವ ವರ್ಗಾವರ್ಗಿ ಸುಗ್ಗಿ ಹಬ್ಬದ ಸಂಭ್ರಮ ಜಡಭರತ 'ಖ್ಯಾ'ತಿಯ ಮಂತ್ರಿ ರೈ ಸಾಹೇಬರನ್ನು ಕ್ರಿಯಾಶೀಲರನ್ನಾಗಿಸಿಬಿಟ್ಟಿದೆ. ತಾಲ್ಲೂಕ್ ಮಟ್ಟದ ಮಹತ್ವದ ಹಾಗು ಹೊಣೆಗಾರಿಕೆಯ ಬಿ-ವರ್ಗದ ಹುದ್ದೆಯಾದ ವಲಯ ಅರಣ್ಯ ಅಧಿಕಾರಿ (ಆರ್‌ಎಫ್‌ಓ)ಗಳ ವರ್ಗಾವಣೆ ಪ್ರಕ್ರಿಯೆಯೆಂದರೆ ಸುಮ್ಮನೆ ಮಾತಲ್ಲ. ಅದೊಂದು ಲಕ್ಷ-ಕೋಟಿಗಳ ದೋನಂಬರ್ ದಂಧೆ; ಮಧ್ಯವರ್ತಿಗಳಿಗೆ, ಮಂತ್ರಿಗಳಿಗೆ ಮತ್ತು ಶಾಸಕರಿಗೆಲ್ಲ ಅಪಾರ ಅಕ್ರಮ ಆಮದಾನಿ ತಂದುಕೊಡುವ ಲೇವಾದೇವಿ ವ್ಯವಹಾರ.



ಅರಣ್ಯ ಭವನದಲ್ಲಿ ಮಂತ್ರಿ ರೈ ದರ್ಬಾರ್‌ರಲ್ಲಿ ಆರ್‌ಎಫ್‌ಓಗಳ ವರ್ಗಾವಣೆ ಗುಮ್ಮ ಓಡಾಡಲು ಶುರುವಾಗಿ ತಿಂಗಳೆರಡು ಕಳೆದುಹೋಗಿದೆ. ಅರಣ್ಯ ಇಲಾಖೆಯೇ ಆರ್‌ಎಫ್‌ಓ ವರ್ಗಾವಣೆಗೆ ಜೂನ್ 25 ಕೊನೆಯ ದಿನವೆಂದೇ ಹೇಳಿದರೂ ಚೌಕಾಸಿ ಕಾರ್ಯಾಚರಣೆ ಮಾತ್ರ ಇವತ್ತಿಗೂ ನಿಂತಿಲ್ಲ. ಜನವರಿಯಿಂದಲೇ ಆಯಕಟ್ಟಿನ ಜಾಗ ಹಿಡಿಯಲು ಥೈಲಿ ಹಿಡಿದು ಬೆಂಗಳೂರು-ಬಂಟ್ವಾಳ-ಮಂಗಳೂರಿಗೆ ಎಡತಾಕಿದ ಆರ್‌ಎಫ್‌ಓಗಳ ಆಸೆ ಮಾತ್ರ ಈಡೇರಿಲ್ಲ. ವರ್ಗಾವರ್ಗಿ ಗಡುವು ಮುಂದೆ ಹೋದಂತೆಲ್ಲ ದಲ್ಲಾಳಿಗಳ ಮಸಲತ್ತಿನ ಆಟಕ್ಕೆ ಇನ್ನಷ್ಟು ಅವಕಾಶ ಸಿಗುತ್ತಿದೆ. ವರ್ಗಾವಣೆ ಎಂದೇ ಆಗಲಿ ಹಿಂದಿನ ದಿನಾಂಕ ನಮೂದಿಸಿ ಅಧಿಕಾರಿಗಳ ಬಿಡುಗಡೆ ಮಾಡುವ ಪದ್ಧತಿ ಅರಣ್ಯ ಇಲಾಖೆಯಲ್ಲಿ ಯಾವಾಗಲೂ ಇದೆ, ಬಿಡಿ!

ಯಾಕೆ ಇನ್ನೂ ಆರ್‌ಎಫ್‌ಓ ವರ್ಗಾವಣೆ ಅಂತಿಮಪಟ್ಟಿ ಹೊರಬಿದ್ದಿಲ್ಲ? ಈ ಪ್ರಶ್ನೆಗೆ ಉತ್ತರ ತೀರಾ ಸರಳ. ಅರಣ್ಯ ಮಂತ್ರಿಯಿಂದ ಹಿಡಿದು ಜಿಲ್ಲಾ ಉಸ್ತುವಾರಿ ಮಂತ್ರಿವರೆಗೆ, ಶಾಸಕರಿಂದ ಹಿಡಿದು ಅರಣ್ಯ ಭವನದ ಮಹಾಮಹಾ ಪ್ರಭೃತಿಗಳೆಲ್ಲ ದೊಡ್ಡ ಬಿಡ್ ಕೂಗುವ ಆರ್‌ಎಫ್‌ಓಗಳ ಆಕರ್ಷಿಸಲೆಂದೇ ವರ್ಗಾವಣೆ ಮುಂದೂಡುತ್ತ ಬಂದಿದ್ದಾರೆ. ಮುಖ್ಯಮಂತ್ರಿ-ಮಂತ್ರಿಗಳ ಹೆಸರು ಹೇಳಿಕೊಂಡು ವರ್ಗಾವಣೆ ಮಾಡಿಕೊಡುವ ಆಸೆ ಬಿತ್ತುತ್ತಿರುವ ಏಜೆಂಟರು ಕೋಟಿಗಳ ಲೆಕ್ಕದಲ್ಲಿ ವ್ಯವಹಾರ ಕುದುರಿಸುತ್ತಿದ್ದಾರೆಂಬ ಮಾತು ಅರಣ್ಯ ಭವನದಲ್ಲಿ ಮಾರ್ದನಿಸುತ್ತಿದೆ. ದಲ್ಲಾಳಿಗಳು ಯಾವ್ಯಾವ ವಲಯದ ಆರ್‌ಎಫ್‌ಓಗೆ ಎಷ್ಟೆಷ್ಟು ರೇಟೆಂದು ಬೋರ್ಡು ನೇತ್ಹಾಕಿಕೊಂಡು ಕುಂತಿದ್ದಾರೆ.

ದಟ್ಟ ಅರಣ್ಯದಿಂದ ಕೂಡಿದ ಮಲೆನಾಡು ಮತ್ತು ಕರಾವಳಿಯ ಪ್ರಾದೇಶಿಕ ವಲಯಗಳಿಗೆ ಹತ್ತರಿಂದ ಇಪ್ಪತ್ತು ಲಕ್ಷ ರೂಪಾಯಿಗಳಾದರೆ ಬಯಲುಸೀಮೆಯ 'ಬರಡು' ವಲಯಗಳಿಗೆ ಹಾಗು 'ಒಣ' ವನ್ಯಜೀವಿ ವಲಯಗಳಿಗೆ ಐದರಿಂದ ಹತ್ತು ಲಕ್ಷ ವರ್ಗಾಕಾಂಕ್ಷಿ ಕೊಡಬೇಕು; ಇತರ ಮೇವೇ ಇಲ್ಲದ ಬಿಕಾರಿ ವಲಯಗಳಿಗೆ ಎರಡ್ಮೂರು ಲಕ್ಷ ತೆರಬೇಕು. ಇದು ವರ್ಗಾವರ್ಗಿ ದಂಧೆಯ ಮೊದಲ ಹಂತದಲ್ಲಿ ಸ್ಥಳೀಯ ಶಾಸಕರಿಗೆ ನೇರವಾಗಿ ಅಥವಾ ಅವರ ಏಜೆಂಟರಿಗೆ ಕೊಡಬೇಕಾದ ಮೊತ್ತ ನಂತರ ಅರಣ್ಯ ಭವನದ ಲಿಪಿಕರಿಂದ ಸಾಹೇಬರವರೆಗೆ ಅವರವರ ಸ್ಥಾನ-ಮಾನಕ್ಕೆ ತಕ್ಕಂತೆ ದಕ್ಷಿಣೆ ಇಡಬೇಕು. ಇದಕ್ಕೂ ಮೊದಲು ಅರಣ್ಯ ಮಂತ್ರಿಗಳಿಗೆ ಕಪ್ಪ ಒಪ್ಪಿಸುವುದು ಮರೆಯುವಂತಿಲ್ಲ!



ಇದು ಆಯಕಟ್ಟಿನ ಸ್ಥಳಕ್ಕೆ ಬರಲು ಮಾಡುವ ಕಳ್ಳ ಹಣದ ಅಧಿಕಾರಿಗಳ ಕರಾಮತ್ತಾದರೆ, ಹಣವಿಲ್ಲದ ಬಡಪಾಯಿ ಸುಮ್ಮನಿರುವಂತಿಲ್ಲ. ಆತ ಇದ್ದಲ್ಲೇ ಇರಲು ಅಥವಾ ಆದಾಯ ಬರುವ, ಸಕಲ ಸೌಲಭ್ಯ-ಸವಲತ್ತಿರುವ ವಲಯಕ್ಕೆ ಹೋಗಬೇಕೆಂದರೆ ಪೈಪೋಟಿಗೆ ಇಳಿಯಲೇಬೇಕು. ಇಲ್ಲದಿದ್ದರೆ 'ಕರಿ ನೀರಿನ ಶಿಕ್ಷೆ' ಖಂಡಿತ. ಹಣ ಮಾಡುವ ಸ್ಥಳದಿಂದ ಬೇಡವಾದೆಡೆ ಎತ್ತಂಗಡಿ, ಯೋಗ್ಯತೆಗಿಂತ ಕೆಳಮಟ್ಟದ ಜಾಗದಿಂದ ಬಚಾವಾಗಲು ಲಕ್ಷದ ಲೆಕ್ಕದಲ್ಲಿ ಹಣ ಎಣಿಸಲೇಬೇಕು. ಇದು ಅರಣ್ಯ ಇಲಾಖೆಯ ಸ್ಥಾಪಿತ ಪದ್ಧತಿ! ಇದು ಸರ್ಕಾರದ ಆದೇಶ ಮತ್ತು ಅರಣ್ಯ ಇಲಾಖೆಯ ನಿಯಮಕ್ಕೆ ತದ್ವಿರುದ್ಧ!!

ಯಾವ್ಯಾವ ಅರ್ಹತೆಯ ಆರ್‌ಎಫ್‌ಓ ಎಂತೆಂಥ ವಲಯದಲ್ಲಿ ಕೆಲಸ ಮಾಡಬೇಕೆಂದು ಅರಣ್ಯ ಇಲಾಖೆ ಒಂದು ಮಾರ್ಗದರ್ಶಿ ನೀತಿ ಘೋಷಿಸಿದೆ. ಸರ್ಕಾರದ ಆದೇಶದಂತೆ ನೇರ ನೇಮಕಾತಿಯ ವಲಯ ಅರಣ್ಯ ಅಧಿಕಾರಿಗಳನ್ನು ನೌಕರಿಗೆ ಸೇರಿದ ಐದು ವರ್ಷದ ತನಕ, ಬಡ್ತಿ ಹೊಂದಿದ ಆರ್‌ಎಫ್‌ಓಗಳನ್ನು ಎರಡು ವರ್ಷದ ತನಕ ಮತ್ತು ಕೆಸಿಎಸ್‌ಆರ್ ನಿಯಮ 32ರಡಿಯಲ್ಲಿ ಪ್ರಭಾರಿಯಾಗಿ ಆರ್‌ಎಫ್‌ಓ ಎಂದು ನಿಯೋಜಿಸಲ್ಪಟ್ಟವರನ್ನು ಕಾಯಂ ಬಡ್ತಿ ಪಡೆಯುವವರೆಗೆ ಮಹತ್ವದ ಪ್ರಾದೇಶಿಕ ಮತ್ತು ವನ್ಯಜೀವಿ ವಲಯಗಳಿಗೆ ವರ್ಗಾವಣೆ ಮಾಡುವಂತಿಲ್ಲ. ಇವರನ್ನು ಕಡ್ಡಾಯವಾಗಿ ಟಿಂಬರ್ ಡಿಪ್ಪೋ, ತರಬೇತಿ ಕೇಂದ್ರ, ಸಂಶೋಧನೆ, ಸಾಮಾಜಿಕ ಅರಣ್ಯ, ವರ್ಕಿಂಗ್ ಪ್ಲಾನ್, ಅರಣ್ಯ ನಿಗಮ, ಜಲಾನಯನದಂತಹ 'ಹಗುರ' ಘಟಕಗಳಲ್ಲಿ ಇಡಬೇಕು. ಆದರೆ ಈ ಘಟಕಗಳೆಲ್ಲ ಮೇವಿಲ್ಲದ ಬರಡು ಪ್ರದೇಶಗಳು. ಮೇವಿಲ್ಲದೆಡೆ ಹಪಾಹಪಿ ಜಾಯಮಾನದ ಆರ್‌ಎಫ್‌ಓಗಳು ಹೋಗಲು ಸಿದ್ಧರಿಲ್ಲ. ಇವರ ಕಣ್ಣು ಸದಾ ಪೊಗದಸ್ತಾದ ತಾಲ್ಲೂಕ್ ಮಟ್ಟದ ವಲಯಗಳು ಹಾಗು ಅಪಾರ ಬಜೆಟ್‌ನ ವನ್ಯಜೀವಿ ವಲಯಗಳ ಮೇಲೆ! ಇಂಥ ಅಕ್ರಮ ವರ್ಗಾವಣೆಗೆ ದುಪ್ಪಟ್ಟು ರೇಟು. ಯಾವ ಅಯೋಗ್ಯ ಹೆಚ್ಚು ಬಿಡ್ ಕೂಗುತ್ತಾನೋ ಆತನಿಗೆ ಬರ್ಜರಿ ಬಜೆಟ್‌ನ ವಲಯ ದಕ್ಕುತ್ತದೆ.

ಈ ಹರಾಜು ಪದ್ಧತಿಯ ವರ್ಗಾವಣೆಯಿಂದಾಗಿ ಅರಣ್ಯ ಇಲಾಖೆ ಭ್ರಷ್ಟಾಚಾರದ ಗಂಗೋತ್ರಿಯಂತಾಗಿ ಗಬ್ಬೆದ್ದು ನಾರುತ್ತಿದೆ. ಇಲಾಖೆ ಹಳಿ ತಪ್ಪಿ ಅವಾಂತರ ಆಗುತ್ತಿದೆ. ಕೆಲಸಗಾರ-ಹಿರಿಯ ಅನುಭವಿಗಳು, ಪ್ರತಿಭಾನ್ವಿತರು ಒಂಥರಾ ಕೀಳರಿಮೆಯಿಂದ ಡ್ಯೂಟಿ ಮಾಡುವಂತಾಗಿದೆ. ಸೇವಾಹಿರಿತನದ ಅನುಭವಿಗಳು, ಆಯಕಟ್ಟಿನ ಸ್ಥಾನದಲ್ಲಿ ಅತೀ ಕಡಿಮೆ ಅವಧಿ ಕೆಲಸ ಮಾಡಿದವರು, ಅಲ್ಲಿ ಕಾಲು ಹಾಕುವ ಅವಕಾಶವೇ ಸಿಗದವರು ಅವಮಾನದಿಂದ ಅನಾಮಿಕರಾಗಿ ದಿನದೂಡುತ್ತಿದ್ದಾರೆ. ತಮಗಿಂತ ಕಿರಿಯರೂ, ಪೆದ್ದರೂ, ಮೃಗಳ್ಳರೂ ನಿಯಮಬಾಹಿರವಾಗಿ ತಮ್ಮ ಅಕ್ಕ-ಪಕ್ಕದಲ್ಲೇ ಕೆಲಸ ಮಾಡುವುದು ಕಂಡು ಅರ್ಹರು ಕರ್ತವ್ಯದಲ್ಲಿ ಆಸಕ್ತಿಯೇ ಕಳೆದುಕೊಂಡಿದ್ದಾರೆ. ಇದರಿಂದಾಗಿ ಇಲಾಖೆಯ ಕಾರ್ಯವೈಖರಿಯಲ್ಲಿ ಗುಣಮಟ್ಟದ ಕೊರತೆ ಕಾಣಿಸುತ್ತಿದೆ. ಸಾರ್ವಜನಿಕವಾಗಿ ಅರಣ್ಯ ಇಲಾಖೆ ಅಪಹಾಸ್ಯಕ್ಕೀಡಾಗುತ್ತಿದೆ.

ಇದಕ್ಕೆ ಪ್ರಮುಖ ಹೊಣೆಗಾರರು ಇಲಾಖೆಯ ಮಂತ್ರಿಗಳು, ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು ಹಾಗೂ ಅರಣ್ಯ ಇಲಾಖೆಯ ಪಿಸಿಸಿಎಫ್, ಸಿಎಫ್.... ಮುಂತಾದ ದೊಡ್ಡ-ದೊಡ್ಡ ಬಿರುದು ಬಾವಲಿಯ ಧಣಿಗಳು! ಮಂತ್ರಿ-ಶಾಸಕರು ಲಕ್ಷ-ಲಕ್ಷ ಲಂಚ ಕಿಸೆಗಿಳಿಸಿದರೆ, ಇಲಾಖಾಧಿಕಾರಿಗಳು ತಂತಮ್ಮ ಪರ್ಸೆಂಟೇಜ್‌ಗೆ ಬಾಯ್ಬಾಯಿ ಬಿಡುತ್ತಿದ್ದಾರೆ. ಈ ನಿಯಮಬಾಹಿರ ವರ್ಗಾವಣೆ ಮಾಡಿಸಿಕೊಂಡ ಆರ್‌ಎಫ್‌ಓಗಳು ಮೇಲಧಿಕಾರಿಗಳನ್ನು ಸಂಪ್ರೀತಗೊಳಿಸಲು ಕಾಲಕಾಲಕ್ಕೆ ಅವರವರ ಪಾಲು ನಿಯತ್ತಾಗಿ ಮುಟ್ಟಿಸುತ್ತಾರೆ. ಉಳಿದವರಿಗಿಂತಲೂ ಒಂಚೂರು ಜಾಸ್ತಿಯೇ ಮಾಮೂಲಿ ಬಾಸ್‌ಗಳ ಹುಂಡಿಗೆ ಹಾಕುತ್ತಾರೆ. ಇದೆಲ್ಲದರ ದುಷ್ಪರಿಣಾಮ ಅರಣ್ಯ ಇಲಾಖೆ ಮೇಲಾಗುತ್ತಿದೆ.

ಒಂದು ಅಂದಾಜಿನಂತೆ ಕಳೆದ 2014 ರಲ್ಲಿ ನಡೆದ ಆರ್‌ಎಫ್‌ಓ ವರ್ಗಾವಣೆಯಲ್ಲಿ ನಡೆದ ವಹಿವಾಟು ಹೆಚ್ಚುಕಮ್ಮಿ 25-30 ಕೋಟಿ ರೂಪಾಯಿಗಳು ಮಾತ್ರ! ಇಲಾಖೆಯಲ್ಲಿ ಒಟ್ಟು 765 ವಲಯ ಅರಣ್ಯ ಅಧಿಕಾರಿಗಳಿದ್ದಾರೆ. ಆಯಕಟ್ಟಿನ ವಲಯಗಳಾದ ಪ್ರಾದೇಶಿಕ ವಲಯ ಮತ್ತು ವನ್ಯಜೀವಿ ವಲಯಗಳಿರುವುದು 300. ಅರಣ್ಯ ಇಲಾಖೆ 2015 ರ ಜನವರಿಯಲ್ಲಿ ಪ್ರಕಟಿಸಿರುವ ಆರ್‌ಎಫ್‌ಓ ವಿತರಣಾ ಪಟ್ಟಿ ಪ್ರಕಾರ 29 ಜನ ನೇರನೇಮಕಾತಿ ಆರ್‌ಎಫ್‌ಓಗಳು ಹಣ, ಜಾತಿ, ರಾಜಕೀಯ ಪ್ರಭಾವ ಬಳಸಿ ಪೊಗದಸ್ತಾದ ಪ್ರಾದೇಶಿಕ ಮತ್ತು ವನ್ಯಜೀವಿ ವಲಯಗಳನ್ನು ಹೊಡೆದುಕೊಂಡಿದ್ದಾರೆ. ನಿಯಮ 32 ರಡಿ ಪ್ರಭಾರ ಆರ್‌ಎಫ್‌ಓ ಪಟ್ಟ ಪಡೆದ 75 ಮಂದಿಯನ್ನು ಪ್ರಾದೇಶಿಕ ವಲಯಕ್ಕೆ ಹಾಗು 30 ಮಂದಿಯನ್ನು ವನ್ಯಜೀವಿ ವಲಯದಲ್ಲಿ ಪ್ರತಿಷ್ಠಾಪಿಸಲಾಗಿದೆ. ಕಾಯಂ ಬಡ್ತಿ ಪಡೆದ ಎರಡು ವರ್ಷದೊಳಗಿನ 16 ಜನರನ್ನು ಪ್ರಾದೇಶಿಕ ವಲಯಗಳಿಗೆ ವರ್ಗಾವಣೆ ಮಾಡಲಾಗಿದೆ. ಅಂದರೆ 300 ಆಯಕಟ್ಟಿನ ಸ್ಥಾನಗಳ ಪೈಕಿ 150 ರಲ್ಲಿ ಅನರ್ಹರೂ, ನಾಲಾಯಕರು ಹಣ ಹರಿಸಿಯೇ ಪಟ್ಟಭದ್ರ ಮಾಡಿಕೊಂಡಿದ್ದಾರೆ! ಇದು 25-30 ಕೋಟಿಯ ಅಕ್ರಮ ವಹಿವಾಟು ಎಂಬುದಕ್ಕೆ ವರ್ಗಾವಣೆ ನಿಯಮ ಬುದ್ಧಿಪೂರ್ವಕವಾಗೇ ಧಿಕ್ಕರಿಸಿರುವುದೇ ಸಾಕ್ಷಿಯಂತಿದೆ!!

ಇದು ಕೇವಲ ಆರ್‌ಎಫ್‌ಓಗಳ ವರ್ಗಾವಣೆ ದಂಧೆಯಲ್ಲಿ ಕೈ ಬದಲಾದ ಮೊತ್ತವಷ್ಟೇ. ಇದರೊಂದಿಗೆ ಎಸಿಎಫ್‌ಗಳು, ಡಿಸಿಎಫ್, ಸಿಎಫ್.... ಮತ್ತಿತರ ಮೇಲ್ದರ್ಜೆ ಅಧಿಕಾರಿಗಳ ವರ್ಗಾವರ್ಗಿಯ 'ಬೆಲೆ' ಲೆಕ್ಕಕ್ಕೆ ಹಿಡಿದರೆ ಅರಣ್ಯ ಇಲಾಖೆಯಲ್ಲಿ ಕಳೆದ ವರ್ಷ ನೂರು ಕೋಟಿ ಟ್ರಾನ್ಸ್‌ಫರ್ ಡೀಲ್ ನಡೆದಿರುವುದು ಎಂಥವರಿಗೂ ಅರ್ಥವಾಗುತ್ತದೆ!! ಇದು ಈ ವರ್ಷ ಇನ್ನು ಹೆಚ್ಚಾಗುವ ಸಕಲ ಸೂಚನೆಗಳು ಗೋಚರಿಸಲಾರಂಭಿಸಿದೆ. 2010 ರಿಂದ 2013ರ ವರೆಗಿನ ಚೆಡ್ಡಿಗಳ ಯುಗದಲ್ಲೂ ನಿಯಮಬಾಹಿರ ವರ್ಗಾವಣೆ ಪುಷ್ಕಳವಾಗಿ ನಡೆದಿದೆ. ಆ ವರ್ಷಗಳ ವರ್ಗಾವಣೆ ಪಟ್ಟಿ ಮೇಲೊಮ್ಮೆ ಕಣ್ಣಾಡಿಸಿದರೆ ಇದು ಖಾತ್ರಿಯಾಗುತ್ತದೆ.

ಇದೆಲ್ಲ ಅರಣ್ಯ ಮಂತ್ರಿ ರೈ ಸಾಹೇಬರಿಗೆ ಗೊತ್ತಿಲ್ಲವಾ? ಇನ್ನಾದರೂ ರೈ ಎಚ್ಚೆತ್ತುಕೊಳ್ಳುವುದು ಒಳಿತು. ಈ ಬಾರಿಯ ವರ್ಗಾವಣೆಯಲ್ಲಿ ನಿಯಮಬದ್ಧವಾಗಿ ಪ್ರಕ್ರಿಯೆ ನಡೆಯುವಂತೆ ಅವರು ನಿಗಾ ವಹಿಸಿದಾಗಷ್ಟೆ ಹಾನಿಯಾಗದಿರಬಹುದು. ಹಣ, ರಾಜಕೀಯ, ಜಾತಿಬಲದಿಂದ ಆಯಕಟ್ಟಿನ ಜಾಗದಲ್ಲಿ ಗೂಟವೂರಿ ಕುಳಿತಿರುವ ಅಯೋಗ್ಯರಿಗೆ ಅವರವರ ಸ್ಥಾನ-ಮಾನ ತೋರಿಸಬೇಕಾದ ಜವಾಬ್ದಾರಿ ರೈ ಮೇಲಿದೆ. ಅರ್ಹರಿಗೆ, ಹಣ ಹಂಚದವರಿಗೆ ಅನ್ಯಾಯವಾಗದಂತೆ ನೋಡಿಕೊಳ್ಳಬೇಕಿದೆ. ಅಧೋಗತಿ ಹಿಡಿದಿರುವ ಅರಣ್ಯ ಇಲಾಖೆಯನ್ನು ರೈ ಸರಿಪಡಿಸುವತ್ತ ಯೋಚಿಸಬೇಕಿದೆ. ಧನಾಧಾರಿತ ವರ್ಗಾವಣೆ ಹೀಗೇ ಮುಂದುವರಿದರೆ ಇಲಾಖೆ ಕೆಲವೇ ವರ್ಷದಲ್ಲಿ ಎಕ್ಕುಟ್ಟಿ ಹೋಗೋದು ಗ್ಯಾರಂಟಿ.

ಮಂತ್ರಿ ರೈ ನುಡಿದಂತೆ ನಡೆದರೆ ಸಾಕು. ಅರಣ್ಯ ಇಲಾಖೆಯೊಳಗಿನ ವರ್ಗಾವರ್ಗಿ ದಂಧೆಗೆ ತಂತಾನೆ ಕಡಿವಾಣ ಬೀಳುತ್ತದೆ. ಕಳೆದ ವರ್ಷ ಸದನದಲ್ಲೇ ರೈ ಅರಣ್ಯ ಇಲಾಖಾಧಿಕಾರಿಗಳ ವರ್ಗಾವಣೆಯಲ್ಲಿ ಕೌನ್ಸಿಲಿಂಗ್ ಜಾರಿಗೆ ತರುವ ಭರವಸೆ ಕೊಟ್ಟಿದ್ದರು. ಪ್ರಾಮಾಣಿಕತೆ ಮತ್ತು ಬದ್ಧತೆ ಎಂಬುದೇನಾದರೂ ಇದ್ದರೆ ಅರಣ್ಯ ಮಂತ್ರಿ ರೈ ಕೊಟ್ಟ ಮಾತಿಗೆ ತಪ್ಪಬಾರದಷ್ಟೇ!!

■ ವರದಿಗಾರ





ದಾಳಿ ಮಾಡಲಿದ್ದಾನೆ ಬಾಹುಬಲಿ

ಇನ್ನು ಎರಡೇ ದಿನಗಳು ಬಾಕಿ ಇವೆ. ಇದೇ ಶುಕ್ರವಾರ ಆಜಾನುಬಾಹು ವ್ಯಕ್ತಿಯೊಬ್ಬ ದೇಶದ ಮೇಲೆ ದಾಳಿ ಮಾಡಲಿದ್ದಾನೆ. ಏಕಕಾಲಕ್ಕೆ ಬರೋಬ್ಬರಿ ನಾಲ್ಕು ಸಾವಿರ ಕಡೆ ಈತ ತನ್ನ ಚಮತ್ಕಾರವನ್ನು ಪ್ರದರ್ಶಿಸಿ ಲಕ್ಷಾಂತರ ಜನರನ್ನು ಸೂರೆಗೊಳ್ಳಲಿದ್ದಾನೆ. ಆತ ಬೇರಾರೂ ಅಲ್ಲ, ಬೆಳ್ಳಿತೆರೆಯ ಮೇಲೆ ಚಂದಿ ಚತ್ತಾನ್ನ ಬೂಂದಿ ಮೊಸರನ್ನ ಮಾಡಲಿರುವ 'ಬಾಹುಬಲಿ.'

ಈಗ ಇದೀ ದೇಶದಲ್ಲಿ ಸಂಚಲನವುಂಟುಮಾಡಿರುವ ಸಿನಿಮಾ 'ಬಾಹುಬಲಿ'. ಭಾರತದ ಸಿನಿಮಾ ಇತಿಹಾಸದಲ್ಲೇ ಅತಿ ದುಬಾರಿ ಚಿತ್ರ ಎಂಬ ಕಾರಣಕ್ಕೆ ಮಾತ್ರ ಇದು ಸುದ್ದಿಯಾಗಿಲ್ಲ, ಬದಲಾಗಿ ಇದರ ಹಿಂದೆ ಮತ್ತು ಮುಂದೆ ಇರುವವರೆಲ್ಲರೂ ಈ ಚಿತ್ರದ ಬಗ್ಗೆ ಎಲ್ಲರೂ - ಅಮಿತಾಭ್ ಬಚ್ಚನ್ ಅವರಿಂದ ಹಿಡಿದು ಸಾಮಾನ್ಯ ಜನರ ತನಕ-ಬೆಕ್ಕಸಬೆರಗಾಗುವಂತೆ ಮಾಡಿದ್ದಾರೆ.

'ಬಾಹುಬಲಿ' ಚಿತ್ರಕ್ಕೆ ವೆಚ್ಚವಾಗಿರುವುದು ಬರೋಬ್ಬರಿ 250 ಕೋಟಿ ರೂಪಾಯಿಗಳು! ಇದು ನುಂಗಿಹಾಕಿರುವ ಸಮಯ ಮೂರು ವರ್ಷ! ಇದಕ್ಕಾಗಿ ಶ್ರಮಿಸಿರುವವರು ಸಾವಿರಾರು ಜನ ತಜ್ಞರು ಮತ್ತು ನಟರು! ಇದು ತೆಲುಗು ಮತ್ತು ತಮಿಳು ಭಾಷೆಗಳಲ್ಲಿ ತಯಾರಾಗಿದ್ದರೂ ಹಿಂದಿ ಮತ್ತು ಮಲೆಯಾಳಂ ಭಾಷೆಗಳಲ್ಲೂ ಡಬ್ ಆಗಿದ್ದು ಒಂದೇ ದಿನ ದೇಶದಾದ್ಯಂತ 4,000 ಚಿತ್ರಮಂದಿರಗಳಲ್ಲಿ ಬಿಡುಗಡೆಗೊಳ್ಳಲಿದೆ. ಇಂಗ್ಲಿಷ್ ಮತ್ತು ಫ್ರೆಂಚ್ ಮಾತ್ರವಲ್ಲದೆ ಇತರೆ ವಿದೇಶಿ ಭಾಷೆಗಳಿಗೂ ಡಬ್ ಆಗಿರುವ ಈ ಚಿತ್ರ ಅವತ್ತು ಜಗತ್ತಿನ ಹಲವಾರು ದೇಶಗಳಲ್ಲೂ ತೆರೆ ಕಾಣಲಿದೆ. ಇಂಥ ಒಂದು ಬೃಹತ್ ಸಿನಿಮಾಗೆ ಕಾರಣವಾಗಿದ್ದು ಮೂಲತಃ ಕನ್ನಡಿಗರಾಗಿರುವ ಎಸ್.ಎಸ್.ರಾಜಮೌಳಿ ಎಂಬ ಸಿನಿಮಾ ಮಾಂತ್ರಿಕ!!

ನಮ್ಮ ರಾಯಚೂರಿನ ಒಂದು ಹಳ್ಳಿಯಲ್ಲಿ ಹುಟ್ಟಿದ ರಾಜಮೌಳಿ ಇವತ್ತು ತೆಲುಗು ಚಿತ್ರರಂಗದಲ್ಲಿ ದೊಡ್ಡ ಹೆಸರು. ಅವರು ಕಾಲೇಜ್ ಓದಲಿಲ್ಲ, ಸಿನಿಮಾ ಲೋಕವನ್ನು ಅಭ್ಯಸಿಸಲಿಲ್ಲ, ಆದರೆ ಅವರು ಇಲ್ಲಿಯತನಕ ನಿರ್ದೇಶಿಸಿರುವ ಒಂಭತ್ತು ಚಿತ್ರಗಳೂ ಹಿಟ್ ಆಗಿವೆ. ಈಗ ಅವರ ಹತ್ತನೆ ಚಿತ್ರಕ್ಕಾಗಿ ಎಲ್ಲರೂ ಎದುರು ನೋಡುತ್ತಿದ್ದಾರೆ. ಅವರ ಯಶಸ್ಸಿಗೆ ಮುಖ್ಯ ಕಾರಣ ಅವರು ಕತೆಯನ್ನು ಹೇಳುವ ತಾಂತ್ರಿಕ ಶೈಲಿ ಮತ್ತು ಅದು ಜನರ ಮನಮುಟ್ಟುವಂತೆ ತಲುಪಿಸುವ ಭಾವುಕತೆ. ಇವೆರಡರ ಬೆಸುಗೆ ಅವರ ಎಲ್ಲಾ ಸಿನಿಮಾಗಳಲ್ಲೂ ಎದ್ದು ಕಾಣುತ್ತಿದೆ.



ಮೂರು ವರ್ಷಗಳ ಹಿಂದೆ ಇದೇ ಜುಲೈ ತಿಂಗಳಲ್ಲಿ 'ಈಗ' ಎಂಬ ತೆಲುಗು ಸಿನಿಮಾ ಬಿಡುಗಡೆಯಾಗಿದ್ದು ನೆನಪಿದೆಯಾ? ಆ ಸಿನಿಮಾದಲ್ಲಿ ಕನ್ನಡದ ಕಿಚ್ಚ ಸುದೀಪ್ 'ನೆಗೆಟಿವ್' ಪಾತ್ರದಲ್ಲಿ ಕಾಣಿಸಿಕೊಂಡಿದ್ದರು. ಆ ಚಿತ್ರದ ಹೀರೋ ಒಂದು ಯಕಶ್ಚಿತ್ ನೊಣ! ಆದರೇನಂತೆ 'ಈಗ' ತೆಲುಗು, ತಮಿಳು ಮತ್ತು ಮಲೆಯಾಳಂನಲ್ಲಿ ದೊಡ್ಡ ಹಿಟ್ ಆಗಿತ್ತು. ಕನ್ನಡಿಗರೂ ಎದ್ದುಬಿದ್ದು ಅದನ್ನು ನೋಡಿದ್ದರು. ಆಮೇಲೆ ಅದು ಹಿಂದಿಯಲ್ಲಿ 'ಮಕ್ಕೀ' ಎಂದು ರೀಮೇಕ್ ಆಗಿ ಅಲ್ಲೂ ಎಲ್ಲರ ಗಮನ ಸೆಳೆದಿತ್ತು.

ಆ ಚಿತ್ರದ ಯಶಸ್ಸಿನ ನಂತರ ರಾಜಮೌಳಿ ಕೈಗೆತ್ತಿಕೊಂಡಿದ್ದೇ 'ಬಾಹುಬಲಿ' ಚಿತ್ರವನ್ನು. ಆದರೆ ರಾಜಮೌಳಿಯವರ ಬಾಹುಬಲಿ ನಮ್ಮ ಶ್ರವಣಬೆಳಗೊಳದಲ್ಲಿರುವ ಗೊಮ್ಮಟೇಶ್ವರನಂತಲ್ಲ, ಯಾವುದೇ ಪುರಾಣದ ರಾಜಕುಮಾರನನ್ನು ಹೋಲುವವನೂ ಅಲ್ಲ, ಬದಲಾಗಿ ಆತ ಯಾವುದೋ ಕಾಡೊಂದರಲ್ಲಿ ಬೆಳೆದು ಆಮೇಲೆ ಅನ್ಯಾಯ, ದೌರ್ಜನ್ಯ, ದಮನ ಇರುವಂತಹ ನಾಡಿನಲ್ಲಿ ಪ್ರತ್ಯಕ್ಷವಾಗಿ ಅಲ್ಲಿನ ದುಷ್ಟ ರಾಜನೊಂದಿಗೆ ಯುದ್ಧ ಮಾಡಿ ಜನರೋದ್ಧಾರ ಮಾಡುವ ಕುಮಾರ ಎಂಬುದು ಈ ಚಿತ್ರದ ಟ್ರೈಲರ್ ನೋಡಿರುವವರು ಅಂದಾಜಿಸಬಹುದು. ನಿರ್ದೇಶಕ ಕೂಡ ಇದೊಂದು ಕಾಲ್ಪನಿಕ ಕತೆ ಎಂದು ಹೇಳಿದ್ದಾರೆ.

ಅಂದಹಾಗೆ ಈ ಚಿತ್ರದ ಟ್ರೈಲರ್ ಕೂಡ ಈಗ ಅಂತರಜಾಲದಲ್ಲಿ ದೊಡ್ಡ ಧೂಳೆಬ್ಬಿಸಿದೆ. ಅದನ್ನು ಯೂಟ್ಯೂಬ್‌ನಲ್ಲಿ ಬಿಡುಗಡೆ ಮಾಡಿದ ಹಲವೇ ದಿನಗಳಲ್ಲಿ ಒಂದು ಕೋಟಿಗಿಂತಲೂ ಹೆಚ್ಚು ಜನ ಅದನ್ನು ವೀಕ್ಷಿಸಿದ್ದಾರು, ಲಕ್ಷಾಂತರ ಜನ 'ಲೈಕ್' ಮಾಡಿದ್ದರು. ಮೇರು ನಟ ಅಮಿತಾಭ್ ಬಚ್ಚನ್ ಕೂಡ "ಇದು ಎಷ್ಟು ಅದ್ಭುತವಾಗಿದೆ! ಇದನ್ನು ನೋಡಿ ನನಗೆ ಹೊಟ್ಟೆ ಕಿಚ್ಚಾಗುತ್ತಿದೆ. ನಾನೂ ಈ ಸಿನಿಮಾದ ಭಾಗವಾಗಬೇಕಿತ್ತು ಎನಿಸುತ್ತಿದೆ. ಇಂತಹ ಬೃಹತ್ ಸಿನಿಮಾ ಮಾಡುವ ಧೈರ್ಯವನ್ನು ತೋರಿರುವ ಮತ್ತು ಇದಕ್ಕೆ ತಕ್ಕುದಾದ ಪ್ರತಿಭೆಯನ್ನು ಹೊಂದಿರುವ ರಾಜಮೌಳಿಗೆ ನನ್ನ ಅಭಿನಂದನೆಗಳು" ಎಂದಿದ್ದಾರೆ.

ಈಗ ದೇಶದಾದ್ಯಂತ ಚಿತ್ರಮಂದಿರಗಳಲ್ಲೂ ಕಾಣಸಿಗುತ್ತಿರುವ ಈ ಟ್ರೈಲರ್‌ಅನ್ನು ನೋಡಿ ಜನ 'ಅಬ್ಬಬ್ಬಾ' ಎಂದು ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ. ಯಾಕೆಂದರೆ ರಾಜಮೌಳಿ ಒಂದೊಂದು ಪಾತ್ರವನ್ನೂ ಅಳೆದು ತೂಗಿ ಚಿತ್ರಿಸಿದ್ದಾರೆ. ಪಾತ್ರಗಳ ವೇಷಭೂಷಣ, ಅದ್ಭುತ ಹಿನ್ನೆಲೆಯ ದೃಶ್ಯಾವಳಿ, ಅದಕ್ಕೆ ಪೂರಕವಾಗಿ ಹಿನ್ನೆಲೆ ಸಂಗೀತ, ಅದ್ದೂರಿಯ ಯುದ್ಧಭೂಮಿಯ ಚಿತ್ರಣ ಕಣ್ಮನ ಸೆಳೆಯುತ್ತಿವೆ. ಯುದ್ಧ ಸನ್ನಿವೇಶಗಳು ಥೇಟ್ ಹಾಲಿವುಡ್ ಸಿನಿಮಾಗಳ ಯುದ್ಧಭೂಮಿಯಂತೆ ಕಾಣುತ್ತವೆ. ಐತಿಹಾಸಿಕ ಕಥೆಯುಳ್ಳ ಸಿನಿಮಾಗೆ ಹೇಳಿ ಮಾಡಿಸಿದಂತಿದೆ 'ಬಾಹುಬಲಿ' ಚಿತ್ರ.

ಅಷ್ಟೇ ಅಲ್ಲ, ಬಾಲಿವುಡ್‌ನಲ್ಲಿ ನಿರ್ದೇಶಕರಾಗಿ ಖ್ಯಾತಿ

ನಟ ಪ್ರಭಾಸ್‌ನ ದೊಡ್ಡ ಸಾಹಸ

ಪ್ರಭಾಸ್ ಈಗ ತೆಲುಗು ಚಿತ್ರರಂಗದಲ್ಲಿ ಬೇಡಿಕೆ ಹೊಂದಿರುವ ನಟ. ಮೂರು ವರ್ಷಗಳ ಹಿಂದೆ ಆತ ನಟಿಸಿದ್ದ ಮೂರ್ನಾಲ್ಕು ಚಿತ್ರಗಳು ಸಾಲುಸಾಲಾಗಿ ಹಿಟ್ ಆಗಿದ್ದರಿಂದ ನಿರ್ಮಾಪಕರು ಕೋಟಿಗಟ್ಟಲೆ ರೂಪಾಯಿಗಳನ್ನು ಹಿಡಿದು ಆತನ ಮನೆಮುಂದೆ ಸಾಲು ನಿಂತಿದ್ದರು. ಅದೇ ಹೊತ್ತಿಗೆ ಆತನನ್ನು ಭೇಟಿ ಆಗಿದ್ದು ರಾಜಮೌಳಿ.



ಸುಮಾರು ಹತ್ತು ವರ್ಷಗಳ ಹಿಂದೆ ರಾಜಮೌಳಿ ನಿರ್ದೇಶಿಸಿದ್ದ 'ಛತ್ರಪತಿ' ಸಿನಿಮಾದಲ್ಲಿ ಇದೇ ಪ್ರಭಾಸ್ ಹೀರೋ ಆಗಿ ನಟಿಸಿದ್ದ. ಆ ಚಿತ್ರ ಅದೆಷ್ಟು ದೊಡ್ಡ ಹಿಟ್ ಆಗಿತ್ತೆಂದರೆ ಅದು 54 ಚಿತ್ರಮಂದಿರಗಳಲ್ಲಿ ನೂರು ದಿನಗಳ ಪ್ರದರ್ಶನ ಕಂಡಿತ್ತಲ್ಲದೆ, ಬಾಕ್ಸ್ ಆಫೀಸಿನಲ್ಲಿ 300 ಕೋಟಿ ರೂಪಾಯಿಗಳನ್ನು ಗಳಿಸುವ ಮೂಲಕ 2005ರ ಅತಿದೊಡ್ಡ ಹಿಟ್ ಚಿತ್ರ ಎಂಬ ಹೆಗ್ಗಳಿಕೆಗೂ ಕಾರಣವಾಗಿತ್ತು.

ಆದರೂ ಆನಂತರ ರಾಜಮೌಳಿ ಮತ್ತು ಪ್ರಭಾಸ್ ಮತ್ತೆ ಜೊತೆಗೂಡಿ ಕೆಲಸ ಮಾಡಿರಲಿಲ್ಲ, ಅದಕ್ಕೆ ಮುಖ್ಯ ಕಾರಣ ರಾಜಮೌಳಿಯವರು ನಟರಿಗಾಗಿ ಚಿತ್ರಕಥೆ ಬರೆಯುವ ಬದಲು ಚಿತ್ರಕಥೆಗೆ ಸೂಕ್ತವಾದ ನಟರನ್ನು ಆಯ್ಕೆ ಮಾಡಿಕೊಳ್ಳುವುದು. ಆದರೆ 'ಬಾಹುಬಲಿ' ಸಿನಿಮಾದ ಪ್ರಸ್ತಾಪ ಬಂದಾಗ ಅದಕ್ಕೆ ಪ್ರಭಾಸ್ ಸೂಕ್ತ ನಟ ಎಂದು ರಾಜಮೌಳಿಗೆ ಅನ್ನಿಸಿತು. ಎರಡು ವರ್ಷಗಳೇ ಬೇಕಾಗುತ್ತಾದ್ದರಿಂದ ಪ್ರಭಾಸ್ ಒಪ್ಪುತ್ತಾನೋ ಇಲ್ಲವೋ ಎಂಬ ಅನುಮಾನ ಒಂದೆಡೆಯಾದರೆ, ಪ್ರಭಾಸ್ ಕೂಡ ತನ್ನಂತೆ ಹಣದ ಬಗ್ಗೆ ತಲೆ ಕೆಡಿಸಿಕೊಳ್ಳದೆ ಒಳ್ಳೆಯ ಸಿನಿಮಾ ಮಾಡುವತ್ತಲೇ ಹೆಚ್ಚು ಆಸಕ್ತಿ ಹೊಂದಿದ್ದಾನೆ ಎಂಬ ಭರವಸೆಯೂ ಇನ್ನೊಂದೆಡೆ ಇತ್ತು.

ಪ್ರಭಾಸ್‌ನನ್ನು ಭೇಟಿಯಾಗಿ 'ಬಾಹುಬಲಿ' ಚಿತ್ರದ ಕತೆಯನ್ನು ಹೇಳಿದ ರಾಜಮೌಳಿ "ನೋಡು, ಈ ಚಿತ್ರಕ್ಕೆ ತುಂಬಾ ಸಮಯ ಹಿಡಿಯುತ್ತದೆ. ನೀನು ಒಂದು ವರ್ಷವನ್ನಾದರೂ ಇದಕ್ಕಾಗಿ ಮೀಸಲಿಡಬೇಕಾಗುತ್ತದೆ. ಅದು ನಿನ್ನಿಂದ ಸಾಧ್ಯವಾ?" ಎಂದು ಕೇಳಿದರು.

ಅವರ ಮಾತನ್ನು ಕೇಳಿ ನಕ್ಕ ಪ್ರಭಾಸ್ "ಡಾರ್ಲಿಂಗ್, ಈ ನಿನ್ನ ಚಿತ್ರ ಒಂದು ವರ್ಷದಲ್ಲಿ ಮುಗಿಯುವಂತದ್ದಲ್ಲ. ಇದಕ್ಕೆ ಕನಿಷ್ಠ ಎರಡು ವರ್ಷವಾದರೂ ಬೇಕು. ಆದರೇನಂತೆ, ನಾನು ನಿನ್ನ ಚಿತ್ರದಲ್ಲಿ ನಟಿಸುತ್ತೇನೆ" ಎಂದು ಉತ್ತರಿಸಿದರು.


ವಿಚಿತ್ರವೆಂದರೆ ಈ ಚಿತ್ರ ಭಾರತದಲ್ಲೇ ಅತಿ ದುಬಾರಿ ಚಿತ್ರ ಆಗುತ್ತದೆ ಎಂಬುದು ಗೊತ್ತಿದ್ದರೂ ಪ್ರಭಾಸ್‌ನ ಸಂಭಾವನೆಯ ಬಗ್ಗೆ ಮೊದಲ ಆರು ತಿಂಗಳ ಕಾಲ ಚರ್ಚೆಯೇ ಆಗಲಿಲ್ಲ, ಸಿನಿಮಾದ ಕೆಲಸ ಶುರುವಾದ ಬಹಳ ತಿಂಗಳುಗಳ ನಂತರ ಒಂದು ದಿನ ರಾಜಮೌಳಿ "ನೋಡು, ಈ ಚಿತ್ರ ಚೆನ್ನಾಗಿ ಮೂಡಿ ಬರಬೇಕೆಂದು ಹೆಚ್ಚಿನ ಹಣವನ್ನು ಬೃಹತ್ತಾದ ಸೆಟ್‌ಗಳ ಮೇಲೆ ಮತ್ತು ವಿಷುಯಲ್ ಎಫೆಕ್ಟ್‌ಗಳ ಮೇಲೆ ವೆಚ್ಚ ಮಾಡಲಾಗುತ್ತಿದೆ. ಆದ್ದರಿಂದ ಇತರೆ ನಿರ್ಮಾಪಕರಿಗಿಂತ ಈ ಚಿತ್ರಕ್ಕೆ ನಿನಗೆ ಕಡಿಮೆ ಸಂಭಾವನೆ ಕೊಡುತ್ತೇವೆ" ಎಂದಾಗಲೂ ಪ್ರಭಾಸ್ "ಹೌದಾ? ಪರವಾಗಿಲ್ಲ" ಎಂದರಷ್ಟೇ.

ಈ ಚಿತ್ರದ ಶೂಟಿಂಗ್ ಶುರುವಾಗುವ ಮುನ್ನ ಪ್ರಭಾಸ್ ತನ್ನ ದೇಹವನ್ನು ಸದೃಢ ಮಾಡಿಕೊಳ್ಳಬೇಕಿದ್ದರಿಂದ ಸಿನಿಮಾದ ನಿರ್ಮಾಪಕರು ಆತನ ಮನೆಗೇ ಒಂದೂವರೆ ಕೋಟಿ ರೂಪಾಯಿ ಬೆಲೆಬಾಳುವಷ್ಟು ಜಿಮ್ ಯಂತ್ರಗಳನ್ನು ಸಾಗಿಸಿದರು. ಅಷ್ಟೇ ಅಲ್ಲದೆ, ಪ್ರಭಾಸ್ ಡಬ್ಲುಡಬ್ಲುಎಫ್‌ನ ಸೂಪರ್ ಸ್ಟಾರ್‌ಗಳನ್ನು ಭೇಟಿಯಾಗಿ ಅವರಿಂದ ಸಲಹೆ ಮತ್ತು ಸೂಚನೆಗಳನ್ನು ಪಡೆದರು. ಪ್ರತಿದಿನ ಬೆಳಗ್ಗೆ ತಿಂಡಿಗೆ ನಲವತ್ತು ಮೊಟ್ಟೆಗಳನ್ನು ತಿನ್ನುತ್ತಿದ್ದರು ಮಾತ್ರವಲ್ಲ, ಪ್ರತಿ ಮೂರು ಗಂಟೆಗಳಿಗೆ ಊಟ ಮಾಡುತ್ತಾ, ಹಲವಾರು ಗಂಟೆಗಳ ಕಾಲ ವ್ಯಾಯಾಮ ಮಾಡುತ್ತ ಏಟ್ ಪ್ಯಾಕ್ ಜೊತೆಗೆ ಬೈಸೆಪ್ಸ್, ಟ್ರೈಸೆಪ್ಸ್ ಇತ್ಯಾದಿಗಳನ್ನೂ ಬೆಳೆಸಿಕೊಂಡರು.

'ಬಾಹುಬಲಿ' ಚಿತ್ರಕ್ಕಾಗಿ ಪ್ರಭಾಸ್ ಮುನ್ನೂರು ದಿನಗಳಿಗಿಂತಲೂ ಹೆಚ್ಚು ದಿನ ಶೂಟ್ ಮಾಡಿದ್ದಾರೆ. ಭಾಗ -2ಕ್ಕೆ ಅಷ್ಟೇ ದಿನಗಳನ್ನು ಮೀಸಲಿಟ್ಟಿದ್ದಾರೆ. ಚಿತ್ರ ಹಿಟ್ ಆದರೆ ತಾನು ವಹಿಸಿದ ಎಲ್ಲಾ ಶ್ರಮವೂ ಸಾರ್ಥಕ ಎಂಬ ನಿಲುವು ಪ್ರಭಾಸ್ ಅವರದ್ದು. ಇದು ಎಲ್ಲರ ಮೆಚ್ಚುಗೆಗೆ ಪಾತ್ರವಾಗಬೇಕಲ್ಲವೇ?

ಸುದೀಪ್ ಮತ್ತೊಮ್ಮೆ ವಿಲನ್

ಸಿನಿಮಾ ತಯಾರಿಸುವುದರಲ್ಲಿ ನಿರ್ದೇಶಕ ರಾಜಮೌಳಿ ಎಷ್ಟು ಜಾಣರೋ, ಅದನ್ನು ಮಾರ್ಕೆಟ್ ಮಾಡುವಲ್ಲೂ ಅವರು ಅಷ್ಟೇ ಬುದ್ಧಿವಂತಿಕೆ ಮೆರೆಯುತ್ತಾರೆ. ಹೀಗಾಗಿಯೇ ಆಯಾ ಭಾಷೆಗೆ ಸಲ್ಲುವ ಕಲಾವಿದರನ್ನು ತಮ್ಮ ಚಿತ್ರಕ್ಕೆ ಆಯ್ಕೆ ಮಾಡುತ್ತಾರೆ. ಆ ನಿಟ್ಟಿನಲ್ಲಿ ಕರ್ನಾಟಕದ ಸಿನಿ ಮಾರುಕಟ್ಟೆಯನ್ನು ವಶಕ್ಕೆ ಪಡೆಯಲು ಕಿಚ್ಚ ಸುದೀಪ್‌ಗೂ ಪಾತ್ರ ನೀಡಿದ್ದಾರೆ. ಅದೂ ವಿಲನ್ ಪಾತ್ರ.



ಅಸ್ಲಂ ಖಾನ್ ಪಾತ್ರದಲ್ಲಿ ಸುದೀಪ್


ಇವರ ಹಿಂದಿನ ಸಿನಿಮಾ 'ಈಗ'ದಲ್ಲೂ ಸುದೀಪ್ ನೆಗೆಟಿವ್ ಪಾತ್ರ ಮಾಡಿದ್ದರು. ಆ ಚಿತ್ರ ಹಿಟ್ ಆಗಿತ್ತಲ್ಲದೆ ತೆಲುಗು ಚಿತ್ರರಂಗದಲ್ಲಿ ಸುದೀಪ್ ಅವರಿಗೆ ಸ್ಟಾರ್‌ಗಿರಿಯನ್ನು ತಂದುಕೊಟ್ಟಿತ್ತು, ಆನಂತರ ಸುದೀಪ್‌ಗೆ ತೆಲುಗು ಸಿನಿಮಾಗಳ ಆಫರ್‌ಗಳು ಬಂದಿದ್ದರೂ ಅವರು ಸೂಕ್ತ ಪಾತ್ರಕ್ಕಾಗಿ ಕಾಯುತ್ತಿದ್ದರು.


ಈ ಮಧ್ಯೆ ಒಂದು ದಿನ ರಾಜಮೌಳಿ ಸುದೀಪ್ ಅವರನ್ನು ಭೇಟಿಯಾಗಿ 'ಬಾಹುಬಲಿ' ಸಿನಿಮಾದ ಕತೆಯನ್ನು ಹೇಳಿದರಂತೆ. ಈ ಚಿತ್ರದಲ್ಲಿ ತನಗೇನು ಕೆಲಸ? ಯಾಕೆ ಅದನ್ನು ರಾಜಮೌಳಿ ತನಗೆ ಹೇಳುತ್ತಿದ್ದಾರೆ ಎಂದು ಸುದೀಪ್ ಚಿಂತಿಸುತ್ತಿರುವಾಗಲೇ ರಾಜಮೌಳಿ "ಇದೊಂದು ಚಿಕ್ಕ ಪಾತ್ರ. ಮಾಡಲ್ಲ ಅಂತ ನೀನು ಹೇಳಿದರೂ ಪರವಾಗಿಲ್ಲ, ಆದರೆ ನೀನು ನನ್ನ ಚಿತ್ರದಲ್ಲಿ ಇರಬೇಕು ಎಂಬ ಆಶೆ ನನ್ನದು" ಎಂದರಂತೆ.

"ರಾಜಮೌಳಿ ಒಂದು ಚಿಕ್ಕ ಹುಡುಗನಂತೆ. ಆತನಿಗೆ ಸಿನಿಮಾ ಎಂದರೆ ಒಂದು ಆಟದ ವಸ್ತು ಇದ್ದಂತೆ. ರಾಜಮೌಳಿಗೆ ಸಿನಿಮಾ ಎಂದರೆ ತುಂಬಾ ಪ್ರೀತಿ ಇರುವುದರಿಂದ ನಾನು ಈ ಚಿಕ್ಕ ಪಾತ್ರವನ್ನು ಮಾಡಲು ಒಪ್ಪಿಕೊಂಡೆ" ಎನ್ನುತ್ತಾರೆ ಸುದೀಪ್.

'ಬಾಹುಬಲಿ' ಚಿತ್ರದಲ್ಲಿ ಸುದೀಪ್ ನಿರ್ವಹಿಸಿರುವುದು ಆಯುಧಗಳನ್ನು ಮಾರುವ ಅಸ್ಲಂ ಖಾನ್ ಪಾತ್ರ. ಸಿನಿಮಾ ಬಿಡುಗಡೆಗಿಂತ ಮುಂಚೆ ಅಸ್ಲಂ ಖಾನ್‌ನ ಫಸ್ಟ್‌ಲುಕ್ ಬಿಡುಗಡೆ ಮಾಡಿರುವುದು ಕನ್ನಡ ಸಿನಿಮಾಪ್ರಿಯರಲ್ಲಿ ಕುತೂಹಲ ಮೂಡಿಸಿದೆ.

ಪೋಸ್ಟರ್ ಸುತ್ತಲೂ ವಾದವಿವಾದ





ಬಾಲಿವುಡ್‌ನ ನಿರ್ದೇಶಕ ರಾಮ್‌ಗೋಪಾಲ್ ವರ್ಮಾನಂತಾಗಲಿ, ಸ್ಯಾಂಡಲ್‌ವುಡ್‌ನ ನಿರ್ದೇಶಕ ಕಂ ನಟ [ಪ್ರೇ]ಮ್‌ನಂತಾಗಲಿ ರಾಜಮೌಳಿ ವಿವಾದಪ್ರಿಯ ಅಲ್ಲ. ಆದರೆ ಈ ಬಾರಿ ಅವರೂ ವಿವಾದಕ್ಕೀಡಾದರು.


ಈಗಾಗಲೇ ಬಿಡುಗಡೆಯಾಗಿರುವ 'ಬಾಹುಬಲಿ' ಸಿನಿಮಾದ ಎರಡೂ ಪೋಸ್ಟರ್‌ಗಳು ಕದ್ದದ್ದು ಎಂಬ ಆರೋಪ [ಕೇಳಿ]ಬಂದಿದೆ.


'ಬಾಹುಬಲಿ'ಯ ಮೊದಲ ಪೋಸ್ಟರ್‌ನಲ್ಲಿ ಸಮುದ್ರದ ಒಳಗಿಂದ ಮಹಿಳೆಯು ತನ್ನ ಕೈಯಿಂದ ಮಗುವನ್ನು [ಎತ್ತಿ] ಹಿಡಿದಿದ್ದಳು. ಇದು ಹಾಲಿವುಡ್‌ನ 'ಸೈಮನ್ ಬರ್ಚ್' ಸಿನಿಮಾದ ಪೋಸ್ಟರ್‌ನಂತಿದೆ. ಆದ್ದರಿಂದ ಅದನ್ನು [ರಾ]ಜಮೌಳಿ ಕದ್ದಿದ್ದಾರೆ ಎಂದು ಕೆಲವರು ದೂರಿದರು.

ಆನಂತರ ರಿಲೀಸ್ ಆದ ಎರಡನೆ ಪೋಸ್ಟರ್‌ನಲ್ಲಿ ನಟ ಪ್ರಭಾಸ್ ತನ್ನ ಭುಜದ ಮೇಲೆ ಶಿವಲಿಂಗವನ್ನು ಎತ್ತಿ [ಹಿಡಿ]ದಿದ್ದರು. ಈ ಪೋಸ್ಟರ್ ಕೂಡ ಅರ್ಜುನ್ ಸರ್ಜಾ ನಟನೆಯ ತಮಿಳಿನ 'ತಿರುವಣ್ಣಮಲೈ' ಸಿನಿಮಾದ [ಪೋ]ಸ್ಟರ್‌ನಿಂದ ಕದ್ದಿದ್ದಾರೆ ಎಂಬ ಸುದ್ದಿ ಆಯಿತು.

ರಾಜಮೌಳಿ ಮಾತ್ರ ಈ ಯಾವ ಆರೋಪಕ್ಕೂ ಪ್ರತಿಕ್ರಿಯಿಸಲಿಲ್ಲ.

ಈ ಮಧ್ಯೆ ಇದೇ ಚಿತ್ರದ ಇನ್ನೊಂದು 'ಪೋಸ್ಟರ್' ಗಿನ್ನಿಸ್ ದಾಖಲೆ ಸೇರಿತು. ಕೇರಳದ ಕೊಚ್ಚಿಯಲ್ಲಿ ['ಬಾ]ಹುಬಲಿ' ಸಿನಿಮಾದ ಮಲೆಯಾಳಂ ಆವೃತ್ತಿಯ ಹಾಡುಗಳ ಬಿಡುಗಡೆ ಕಾರ್ಯಕ್ರಮ ನಡೆಯಿತು. ಅದಕ್ಕಾಗಿ [ಆಯೋಜ]ದರಕರು ಬೃಹತ್ ಪೋಸ್ಟರ್ ಸಿದ್ಧಪಡಿಸಿದ್ದರು. 5196132 ಚ.ಮೀ ದೊಡ್ಡದಾಗಿರುವ ಈ ಪೋಸ್ಟರ್ ಈಗ [ಗಿನ್ನಿ]ಸ್ ದಾಖಲೆ ಬರೆದಿದೆ.







...ದಿರುವ, ಈಗ ಉತ್ತಮವಾದ ಮತ್ತು ಭಿನ್ನವಾದ ...ಗಳನ್ನು ಹೊಂದಿರುವ ಸಿನಿಮಾಗಳನ್ನು ನಿರ್ಮಿಸುತ್ತಿರುವ ...ಕ್ ಜೋಹರ್ ಅವರೇ 'ಬಾಹುಬಲಿ' ಚಿತ್ರದ ಹಿಂದಿ ...ವತರಣಿಕೆಯ ವಿತರಣೆಯ ಜವಾಬ್ದಾರಿಯನ್ನು ...ತೋಷದಿಂದಲೇ ಹೊತ್ತುಕೊಂಡಿದ್ದಾರೆ.


ಈ ಸಿನಿಮಾದ ಹೈಲೈಟ್ ಅಂದರೆ ವಿಷುಯಲ್ ...ಫೆಕ್ಟ್ಸ್! ಇಲ್ಲಿಯತನಕ ಯಾವ ಭಾರತೀಯ ಸಿನಿಮಾಗೂ ...ಹುಬಲಿ'ಯಲ್ಲಿರುವಷ್ಟು ವಿಷ್ಯಲ್ ಎಫೆಕ್ಟ್ಸ್ ಉಪಯೋಗಿಸಿಲ್ಲ. ಆಕಾಶದಿಂದ ಜಿಗಿಯುತ್ತಿರುವಂತೆ ಕಾಣುವ ಜಲಪಾತ, ಬೆಟ್ಟದ ತುದಿಯಿಂದ ಕೆಳಕ್ಕೆ ಹಾರುತ್ತಿರುವ ಹೀರೋ, ಮಂಜಿನಲ್ಲಿ ಮೋಹಕವಾಗಿ ಕಾಣಿಸುತ್ತಿರುವ ಹೀರೋಯಿನ್, ರಕ್ತ ಚಿಮ್ಮುತ್ತಿರುವ ಯುದ್ಧದ ರಣರಂಗ, ಯೋಧ ಬೀಸುತ್ತಿರುವ ಖಡ್ಗ ಎಲ್ಲವೂ ಪ್ರೇಕ್ಷಕನ ಮೈನವಿರೇಳಿಸುವಂತಿವೆ.

ರಾಜಮೌಳಿಯವರ ಹೆಚ್ಚಿನ ಸಿನಿಮಾಗಳಂತೆ 'ಬಾಹುಬಲಿ' ಚಿತ್ರದ ಕತೆಯನ್ನು ಬರೆದಿರುವವರು ಅವರ ತಂದೆ ವಿಜೇಂದ್ರ ಪ್ರಸಾದ್. ಜೊತೆಗೆ, ತಮ್ಮ ತಂದೆಯ ಜೊತೆಗೂಡಿ ರಾಜಮೌಳಿ ಚಿತ್ರಕತೆಯನ್ನು ತಯಾರಿಸಿದ್ದಾರೆ. ಇದಕ್ಕೆ ಸಂಗೀತ ನಿರ್ದೇಶನ ನೀಡಿರುವವರು ರಾಜಮೌಳಿಯವರ ಸಹೋದರ ಕೀರವಾಣಿ. ಇದರ ಪ್ರೊಡಕ್ಷನ್ ಡಿಸೈನರ್ ರಾಷ್ಟ್ರೀಯ ಪ್ರಶಸ್ತಿ ವಿಜೇತ ಸಾಬು ಸಿರಿಲ್. ವಿಷುಯಲ್ ಎಫೆಕ್ಟ್ಸ್ ಕೊಟ್ಟಿರುವವರು ವಿದೇಶಿ ಮತ್ತು ದೇಶಿ ತಂತ್ರಜ್ಞರು. ತಾರಾಗಣದಲ್ಲಿ ಇರುವವರು ಪ್ರಭಾಸ್, ರಾಣಾ ದುಗ್ಗುಬಟ್ಟಿ, ತಮನ್ನಾ, ಅನುಶ್ಕಾ ಶೆಟ್ಟಿ, ರಮ್ಯಾ ಕೃಷ್ಣ ಮತ್ತು ನಮ್ಮ ಸುದೀಪ್. ಜೊತೆಗೆ ಬೃಹದಾಕಾರದ ಸೆಟ್‌ಗಳು, ವಿಶೇಷ ಯುದ್ಧಾಸ್ತ್ರಗಳು ಮತ್ತು ಹೊಸತರಹದ ಸಲಕರಣೆಗಳನ್ನೂ ಚಿತ್ರದಲ್ಲಿ ಉಪಯೋಗಿಸಲಾಗಿದೆ.





ವಾಸ್ತವವಾಗಿ ಸಿನಿಮಾವನ್ನು ಶುರು ಮಾಡುವ ಮುನ್ನವೇ ರಾಜಮೌಳಿ ಒಂದು ವರ್ಷ ತಯಾರಿ ಮಾಡಿದರು. ಶೂಟಿಂಗ್‌ಗಿಂತ ಮುಂಚೆಯೇ ನೂರು ಚಿತ್ರಕಲಾವಿದರ ತಂಡ, ಇಡೀ ಸಿನಿಮಾವನ್ನು 15 ಸಾವಿರಕ್ಕೂ ಅಧಿಕ ಸ್ಕೆಚ್‌ಗಳಲ್ಲಿ ಮೂಡಿಸಿದ್ದು ಅದೇ ಮಾದರಿಯಲ್ಲೇ ರಾಜಮೌಳಿ ಶೂಟಿಂಗ್ ಮಾಡಿದ್ದಾರೆ.




ಎಲ್ಲಕ್ಕಿಂತ ಮುಖ್ಯವಾಗಿ ಈಗ ಬಿಡುಗಡೆ ಆಗುತ್ತಿರುವುದು ಸಂಪೂರ್ಣವಾದ ಚಿತ್ರ ಅಲ್ಲ ಎಂದರೆ ನಿಮಗೆ ಅಚ್ಚರಿ ಆಗಬಹುದು. ಆದರೆ ಅದು ನಿಜ. ಈ ಚಿತ್ರದ ಕತೆ ಎಷ್ಟು ದೊಡ್ಡದಾಯಿತು ಎಂದರೆ ರಾಜಮೌಳಿಗೆ ಅದೆಷ್ಟೇ ಪ್ರಯತ್ನಪಟ್ಟರೂ ಅದನ್ನು ಐದು ತಾಸುಗಳಿಗಿಂತ ಕಡಿಮೆ ಅವಧಿಗೆ ಕತ್ತರಿಸಲಾಗಲಿಲ್ಲ. ಜೊತೆಗೆ ಅಷ್ಟು ಹೊತ್ತಿಗಾಗಲೇ ಈ ಸಿನಿಮಾಗೆಂದು ಎತ್ತಿಟ್ಟಿದ್ದ ಹಣವೆಲ್ಲ ಖರ್ಚಾಗಿತ್ತು. ಆದ್ದರಿಂದ ಈಗ ಚಿತ್ರವನ್ನು ಅರ್ಧಕ್ಕೆ ಕಟ್ ಮಾಡಿ 'ಬಾಹುಬಲಿ – ದಿ ಬಿಗಿನಿಂಗ್' ಎಂದು ಬಿಡುಗಡೆ ಮಾಡಲಾಗುತ್ತಿದೆ. ಇದರ ಅರ್ಥ 'ಬಾಹುಬಲಿ ಭಾಗ-2' ಸಿನಿಮಾದ ಸುಮಾರು ಮೂರರಲ್ಲಿ ಒಂದು ಭಾಗ ಈಗಾಗಲೆ ಚಿತ್ರೀಕರಣಗೊಂಡಿದ್ದು ಇನ್ನೂ 150 ದಿನಗಳ ಚಿತ್ರೀಕರಣ ಬಾಕಿ ಇದೆಯಂತೆ. ಅದು ಮುಗಿಯುವ ತನಕ ತಾವು ಮತ್ತ್ಯಾವುದೇ ಸಿನಿಮಾ ಕೈಗೆತ್ತಿಕೊಳ್ಳುವುದಿಲ್ಲ ಎಂದು ನಿರ್ದೇಶಕ ರಾಜಮೌಳಿ ಮತ್ತು ಹೀರೋ ಪ್ರಭಾಸ್ ಈಗಾಗಲೇ ಸ್ಪಷ್ಟಪಡಿಸಿದ್ದಾರೆ. ಎಲ್ಲವೂ ಅಂದುಕೊಂಡಂತೆ ಸಾಗಿದರೆ ಮುಂದಿನ ವರ್ಷ ಇದೇ ಜುಲೈ ತಿಂಗಳಲ್ಲಿ 'ಬಾಹುಬಲಿ ಭಾಗ 2' ಬಿಡುಗಡೆ ಆಗಲಿದೆ ಎಂದು ರಾಜಮೌಳಿ ಭರವಸೆ ನೀಡಿದ್ದಾರೆ.

ಆದರೇನಂತೆ, ಬಹಳ ದಿನಗಳಿಂದ ರಾಜಮೌಳಿಯ ಮಾಂತ್ರಿಕತೆಯಲ್ಲಿ ಮೂಡಿ ಬರುವ ಸಿನಿಮಾ ನೋಡಲು ಕಾತುರರಾಗಿದ್ದ ಜನ 'ಬಾಹುಬಲಿ' ದಾಳಿಯನ್ನು ನೋಡಲು ತುದಿಗಾಲ ಮೇಲೆ ನಿಂತಿದ್ದಾರೆ...

■ ಸಾವಂತ್ರಿ

'ಬಾಹುಬಲಿ' ಹಿಂದೆ ಡಿಕೆ ದುಡ್ಡು?



ಹಲವಾರು ಕಾರಣಗಳಿಂದಾಗಿ 'ಬಾಹುಬಲಿ' ಸಿನಿಮಾ ದೇಶಾದ್ಯಂತ ಮಾತ್ರ ಸಂಚಲನವನ್ನುಂಟುಮಾಡಿದೆಯಲ್ಲದೆ ಗಾಂಧಿನಗರದಲ್ಲೂ ದೊಡ್ಡ ಸುದ್ದಿ ಮಾಡಿದೆ.

ಅದಕ್ಕೆ ಮುಖ್ಯ ಕಾರಣ ಈ ಚಿತ್ರದ ಕರ್ನಾಟಕದ ವಿತರಣಾ ಹಕ್ಕನ್ನು ಬರೋಬ್ಬರಿ ಇಪ್ಪತ್ತು ಕೋಟಿ ರೂಪಾಯಿಗಳಿಗೆ ಆರ್‌ಎಸ್ ಪ್ರೊಡಕ್ಷನ್ ಪಡೆದಿರುವುದು. ಇದು ಇಲ್ಲಿಯತನಕ ಯಾವುದೇ ಚಿತ್ರಕ್ಕೆ ನೀಡಿರುವ ವಿತರಣಾ ಹಣಕ್ಕಿಂತ ದೊಡ್ಡದ್ದು ಎಂದು ಪ್ರತ್ಯೇಕವಾಗಿ ಹೇಳುವ ಅಗತ್ಯವಿಲ್ಲ.

ಮೊದಮೊದಲು ಈ ಚಿತ್ರದ ವಿತರಣಾ ಹಕ್ಕನ್ನು ಮಾಜಿ ಮುಖ್ಯಮಂತ್ರಿ [ಕುಮಾ]ರಸ್ವಾಮಿ ಪಡೆಯಲಿದ್ದಾರೆ ಎಂಬ ಸುದ್ದಿ ಕೇಳಿಬಂದಿತ್ತು. ಅಷ್ಟೇ ಅಲ್ಲ, ಅವರು ನೂರು ಕೋಟಿ ಮೊತ್ತಕ್ಕೆ ಆಂಧ್ರ [ಪ್ರ]ದೇಶ ಮತ್ತು ಕರ್ನಾಟಕದ ವಿತರಣಾ ಹಕ್ಕು ಕೇಳಿದ್ದಾರೆ ಎಂಬ ಸುದ್ದಿಯೂ ಹರಡಿತ್ತು. ಆದರೆ ಆನಂತರ ತಾವು [ಖರೀ]ದಿಸಿಲ್ಲ ಎಂದು ಸ್ವತಃ ಕುಮಾರಸ್ವಾಮಿಯೇ ಹೇಳಿಕೆ ನೀಡಿದರು.

ಈಗ ಆರ್‌ಎಸ್ ಪ್ರೊಡಕ್ಷನ್ ಹೆಸರಲ್ಲಿ ಕನಕಪುರ ಶ್ರೀನಿವಾಸ್ ಮತ್ತು ಶ್ರೀಕಾಂತ್ ಪಡೆದಿರುವುದು ಪಕ್ಕಾ [ಆ]ಗಿದೆ. ಅಂದಹಾಗೆ, ಇದೇ ಆರ್‌ಎಸ್ ಪ್ರೊಡಕ್ಷನ್ ಕಂಪನಿ ರಾಜಮೌಳಿ ಅವರ ತಂದೆ ವಿಜೇಂದ್ರ ಪ್ರಸಾದ್ ಅವರ ...ತೆಗೆ ಒಂದು ದ್ವಿಭಾಷಾ ಸಿನಿಮಾ ನಿರ್ಮಿಸಲಿದೆ. ಇದರ ಬೆನ್ನಲ್ಲೇ ಇನ್ನೊಂದು ಸುದ್ದಿಯೂ ಹಬ್ಬಿದೆ. ಅದೇನೆಂದರೆ ...ರ ಹಿಂದೆ ಕಾಂಗ್ರೆಸ್ ಮಂತ್ರಿ, ಡಿ.ಕೆ. ಶಿವಕುಮಾರ್ ಇದ್ದಾರೆ ಎಂಬ ಮಾತು. ಹಲವು ಮೂಲಗಳ ಪ್ರಕಾರ [ಶಿವ]ಕುಮಾರ್ ಅವರು ಆರ್‌ಎಸ್ ಪ್ರೊಡಕ್ಷನ್ ಅವರ ಮುಂದಿನ ನಾಲ್ಕು ಪ್ರಾಜೆಕ್ಟ್‌ಗಳಲ್ಲೂ ದುಡ್ಡು ಹೂಡಿದ್ದಾರಂತೆ.

ಅದು ನಿಜವಾದರೆ 'ಬಾಹುಬಲಿ' ಎಂದು ದೈತ್ಯ ಸಿನಿಮಾ ಹೆಳಗಿದ ರಾಜಕಾರಣಿ ಶಿವಕುಮಾರ್ ಅವರನ್ನೂ ...ಸಂಗಿಕ, ಕಿರಿದು ಎಂದೇ ಅರ್ಥ. ಹೇಗಿದೆ 'ಬಾಹುಬಲಿ'ಯ ಮ್ಯಾಜಿಕ್?!

ಅನುಶ್ಕಾ ಎಂಬ ಕರಾವಳಿ ಕನ್ಯೆ



'ಬಾಹುಬಲಿ' ಚಿತ್ರತಂಡದಲ್ಲಿ ಇರುವ ಕನ್ನಡಿಗರಲ್ಲಿ ನಿರ್ದೇಶಕ ರಾಜಮೌಳಿ ಮತ್ತು ನಟ ಸುದೀಪ್ ಮಾತ್ರ ಪ್ರಮುಖರಲ್ಲ, ಅವರಿಬ್ಬರಲ್ಲದೆ ಮುಖ್ಯ ಪಾತ್ರವೊಂದನ್ನು ನಿಭಾಯಿಸುತ್ತಿರುವ ನಟಿ ಅನುಶ್ಕಾ ಶೆಟ್ಟಿ ಕೂಡ ಕನ್ನಡತಿಯೇ.

'ಬಾಹುಬಲಿ' ಮೊದಲ ಭಾಗದಲ್ಲಿ ತಮ್ಮನ್ನಾ ಹಿರೋಯಿನ್ ಆಗಿದ್ದು ಅನುಶ್ಕಾಳದ್ದು ಪುಟ್ಟ ಪಾತ್ರವಾದರೂ ಅದೊಂದು ಮುಖ್ಯ ಪಾತ್ರ. ಅದಕ್ಕಿಂತ ಮುಖ್ಯವಾಗಿ ಇದೇ ಚಿತ್ರದ ಭಾಗ-2ರಲ್ಲಿ ಅನುಶ್ಕಾಳೆ ಹೀರೋಯಿನ್.


ಮಂಗಳೂರಿನಲ್ಲಿ ತುಳು ಬಂಟ ಕುಟುಂಬವಾದ ವಿಟ್ಠಲ್ ಶೆಟ್ಟಿ ಮತ್ತು ಪ್ರಫುಲ್ಲಾ ದಂಪತಿಗಳಿಗೆ ಜನಿಸಿದ ಅನುಶ್ಕಾಳ ನಿಕ್‌ನೇಮ್ 'ಸ್ವೀಟಿ'! ಬೆಂಗಳೂರಿನ ಮೌಂಟ್ ಕಾರ್ಮೆಲ್ ಕಾಲೇಜಿನಲ್ಲಿ ಅನುಶ್ಕಾ ಕಂಪ್ಯೂಟರ್ ಅಪ್ಲಿಕೇಶನ್ಸ್ ಓದಿದರೂ ಆಕೆ ವೃತ್ತಿಯಾಗಿ ಆಯ್ಕೆ ಮಾಡಿಕೊಂಡಿದ್ದು ಯೋಗಾ ತರಬೇತಿಯನ್ನು.

ಅನುಶ್ಕಾ ತೆಗೆದುಕೊಳ್ಳುತ್ತಿದ್ದ ಯೋಗಾ ಕ್ಲಾಸ್‌ಗೆ ಒಮ್ಮೆ ತೆಲುಗು ನಿರ್ದೇಶಕ ಶ್ರೀನಿವಾಸ್ ವಿದ್ಯಾರ್ಥಿಯಾಗಿ ಬಂದರು. ಅಲ್ಲಿ ತೆಳ್ಳಗೆ ಮತ್ತು ಬೆಳ್ಳಗೆ ಮಾತ್ರವಲ್ಲ, ಯೋಗಾದಿಂದಾಗಿ ಉತ್ತಮ ಮೈಕಟ್ಟನ್ನು ಹೊಂದಿದ್ದ ಅನುಶ್ಕಾಳನ್ನು ನೋಡಿ ಮೆಚ್ಚಿದರು. ಅದೇ ಹೊತ್ತಿಗೆ ಪೂರಿ ಜಗನ್ನಾಥ್ ಅವರು ತಮ್ಮ ಹೊಸ ಚಿತ್ರಕ್ಕೊಂದು ಹೊಸ ಹೀರೋಯಿನ್‌ನ ತಲಾಶೆನಲ್ಲಿದ್ದರು. ಆಗ ನಿವಾಸ್ ಅವರು ಅನುಶ್ಕಾಳ ಹೆಸರನ್ನು ಜಗನ್ನಾಥ್ ಅವರಿಗೆ ಸೂಚಿಸಿದರು. ಅಗಿನಿಂದ ಅನುಶ್ಕಾ ತೆಲುಗು ಚಿತ್ರರಂಗದಲ್ಲಿ ಅಪಾರ ಜನಪ್ರಿಯತೆ ಪಡೆದಿದ್ದಾರಲ್ಲದೆ, ಹಲವಾರು ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ಆಕೆ ತಮಿಳು ಚಿತ್ರಗಳಲ್ಲೂ ನಟಿಸಿ ಖ್ಯಾತಿಗಳಿಸಿದ್ದಾಳೆ.

ಇಲ್ಲಿಯತನಕ ಅನುಶ್ಕಾ ಕನ್ನಡ ಸಿನಿಮಾದಲ್ಲಿ ನಟಿಸಿಲ್ಲವಾದರೂ ತನ್ನ ಮೂಲ ರಾಜ್ಯವನ್ನು ಮರೆತಿಲ್ಲ. ಆಕೆ ಪುರುಸೊತ್ತಿದ್ದಾಗಲೆಲ್ಲ ಮತ್ತು ಹಬ್ಬಹರಿದಿನಗಳು ಬಂದಾಗ ಬೆಂಗಳೂರಿಗೆ ಭೇಟಿ ಕೊಡುತ್ತಾರಲ್ಲದೆ, ತಮ್ಮ ಪೂರ್ವಾರ ಹಳ್ಳಿಯಾದ ಪುತ್ತೂರು ತಾಲೂಕಿನ ಬೆಳ್ಳಿಪಾಡಿಗೆ ಭೇಟಿ ಕೊಡುತ್ತಿರುತ್ತಾರೆ.

ನಮ್ಮ ರಾಜ್ಯದಲ್ಲಿ ಸಿಲ್ಲಕ್ಕುಕೊಳ್ಳಗಾಗಿ ನೆರೆಯ ಚಿತ್ರರಂಗಗಳಲ್ಲಿ ಹಲವಾರು ಪ್ರತಿಭೆಗಳು ಅರಳಿವೆ. ಅಂತಹ ಸುಂದರ ಹೂಗಳಲ್ಲಿ ಸ್ವೀಟಿ ಅನುಶ್ಕಾ ಶೆಟ್ಟಿ ಕೂಡ ಒಬ್ಬಳು.

ಕಡ್ಡಿ ಪೊಡಿಚ್ಛ



ಪ್ರಾತಃಕಾಲದ ನಮಾಜು ಮುಗಿಸಿ ಆಗಷ್ಟೇ ರಗ್ಗೆಳೆದು ನಿದ್ದೆಗೆ ಜಾರಿದ್ದೆ. ಮೊಬೈಲ್ ರಿಂಗಣಿಸಿತು. ಥೂ ದರಿದ್ರ ಮೊಬೈಲ್ ಈ ಸಿಹಿನಿದ್ರೆಯ ಸುಖವನ್ನು ಕೆಡಿಸಿಬಿಡುತ್ತಿದೆ ಎಂದು ಶಪಿಸುತ್ತಲೇ ತಲೆತಿಂಬಿನಡಿಗೆ ಕೈತೂರಿ ಮೊಬೈಲ್ ಎತ್ತಿದೆ. ಗೆಳೆಯ ರಿಯಾಜ್‌ನ ಕರೆ. ಫೋನ್ ರಿಸೀವ್ ಮಾಡುತ್ತಲೇ "ಏನಯ್ಯಾ ನಿನ್ನ ಕರ್ಮ ಬೆಳಗ್ಗೆ ಬೆಳಗ್ಗೆ..... ಒಂಚೂರು ನಿದ್ರಿಸಲೂ ಬಿಡುವುದಿಲ್ಲ" ಎಂದೆ. ಆತ ನನ್ನ ಮಾತನ್ನು ತುಂಡರಿಸುತ್ತಾ ಗಂಭೀರವಾಗಿ "ಕಡ್ಡಿ ಪೊಡಿಚ್ಛ ತೀರಿ ಹೋದರು ಕಣೋ..... ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್....." ಎಂದ.

ಹಿಂದಿನ ರಾತ್ರಿ ಕಡ್ಡಿ ಪೊಡಿಚ್ಛರ ಮನೆಗೆ ತೆರಳಿ ಅವರ ಬಿ.ಪಿ. ಪರೀಕ್ಷಿಸಿ ಅವರ ಹೆಂಡತಿ ಪಾತಾದರಿಗೆ "ಪೊಡಿಚ್ಛ ಹುಷಾರಾಗುತ್ತಿದ್ದಾರೆ, ಬಿ.ಪಿ. ನಾರ್ಮಲ್ ಇದೆ, ರಕ್ತ ಪರೀಕ್ಷೆಯ ರಿಪೋರ್ಟ್ ಎಲ್ಲಾ ನಾರ್ಮಲ್ ತೋರಿಸುತ್ತಿದೆ" ಎನ್ನುತ್ತಾ ಬ್ಯಾಗಿನಿಂದ ರಿಪೋರ್ಟ್ ತೆಗೆದು ಅವರ ಕೈಗಿಟ್ಟಿದ್ದೆ. ಪೊಡಿಚ್ಛರ ಮುಖದಲ್ಲಿ ಸ್ವಲ್ಪ ಲವಲವಿಕೆ ಮೂಡುತ್ತಿತ್ತು, ಪಾತಾದರ ಮುಖದಲ್ಲೂ ತೆಳು ಮಂದಹಾಸ ಕಾಣುತ್ತಿತ್ತು.

ಹಾಂ ಅಂದಹಾಗೆ..... ನಾನು ವೈದ್ಯನೇನಲ್ಲ, ನಾನು ವೈದ್ಯಕೀಯ ಪ್ರಯೋಗಾಲಯ ತಂತ್ರಜ್ಞನಷ್ಟೆ. ಆದರೂ ನನ್ನ ಬ್ಯಾಗ್‌ನಲ್ಲಿ ಜ್ವರ, ಮೈಕೈ ನೋವು, ನೆಗಡಿ, ಗ್ಯಾಸ್‌ಟ್ರಬಲ್ ಮುಂತಾದವುಗಳಿಗೆ ಬೇಕಾಗುವ ಮಾತ್ರೆಗಳು ಸ್ವಲ್ಪ ಸ್ಟಾಕ್ ಇರುತ್ತವೆ. ಟಿ.ಟಿ. ಇಂಜೆಕ್ಷನ್ ಚುಚ್ಚುವುದು, ಬಿ.ಪಿ.ಪರೀಕ್ಷೆ, ರೋಗಿಗಳ ಮನೆಯಿಂದ ರಕ್ತ ಸಂಗ್ರಹಿಸಿಕೊಂಡು ಹೋಗಿ ಪರೀಕ್ಷಿಸಿ ರಿಪೋರ್ಟ್ ತಲುಪಿಸುವುದು ಇವೆಲ್ಲಾ ನನ್ನ ವ್ಯಾಪ್ತಿಯ ಕೆಲಸಗಳು. ಒಟ್ಟಿನಲ್ಲಿ ನನ್ನ ಹಳ್ಳಿಯ ಜನಕ್ಕೆ ನಾನು ಆಪತ್ಕಾಲದ ಅರೆವೈದ್ಯ. ಈ ಕೆಲಸಗಳನ್ನು ನಾನು ಪುಗಸಟ್ಟೆ ಮಾಡುವುದಿಲ್ಲ; ಇದು ನನ್ನ ಹೊಟ್ಟೆಪಾಡಿನ ಕಸುಬು.

ಸುಮಾರು ಒಂದು ತಿಂಗಳ ಹಿಂದೆ ಕಡ್ಡಿ ಪೊಡಿಚ್ಛರ ಪ್ರೀತಿಯ ಹಸುಗಳಲ್ಲೊಂದಾದ ಚೆರೆಮೋಳು ಕಾಣೆಯಾದಾಗ ಅದನ್ನು ಹುಡುಕಿ ಹುಡುಕಿ ಹೈರಾಣಾಗಿದ್ದರು. ಕಾಣೆಯಾದ ಹಸು ಸಿಗಲೆಂದು ಅವರು ಹೊತ್ತ ಹರಕೆಗಳು ಸ್ವಲ್ಪವೇನಲ್ಲ. ಮೂರು ದಿನಗಳ ಬಳಿಕ ಬಾವಲಿಗುರಿಯ ಮೋಂತು ಸೋಜರ ಗುಡ್ಡದಲ್ಲಿದೆ ಎಂಬ ಸುಳಿವು ಸಿಕ್ಕಿತು. ಪೊಡಿಚ್ಛರ ಜೋಗಿಬೆಟ್ಟುವಿನ ಮನೆಯಿಂದ ಸುಮಾರು ನಾಲ್ಕು ಕಿಲೋಮೀಟರ್ ದೂರದ ಬಾವಲಿಗುರಿಯಿಂದ ಚೆರೆಮೋಳುಳನ್ನು ಮರಳಿ ಮನೆಗೆ ತಂದವರೇ ಎದೆನೋವು ಎಂದು ಕುಸಿದು ಬಿದ್ದರು. ಪಾತಾದರ ಆರಬಾಯಿ ಕೇಳಿ ಓಡಿಬಂದ ಪಕ್ಕದ ಮನೆಯ ಭೋಜ ಕೊಣಾಜೆಯಿಂದ ಡಾ.ದುರ್ಗಾ ಭಟ್ಟರನ್ನು ಆಟೋದಲ್ಲಿ ಕರೆದುಕೊಂಡು ಹೋದ. ಭಟ್ರು ಪೊಡಿಚ್ಛರನ್ನು ಪರೀಕ್ಷಿಸಿ "ಹಾರ್ಟ್ ಅಟ್ಯಾಕ್ ಆಗಿರುವ ಲಕ್ಷಣಗಳು ಕಾಣುತ್ತಿವೆ, ಕೂಡಲೇ ಆಸ್ಪತ್ರೆಗೆ ದಾಖಲಿಸಿ" ಎಂದಿದ್ದರು. ಭೋಜನೇ ಸ್ವತಃ ಮುತುವರ್ಜಿ ವಹಿಸಿ ದೇರಳಕಟ್ಟೆಯ ಯೆನಪೋಯ ಆಸ್ಪತ್ರೆಗೆ ದಾಖಲಿಸಿದ್ದ. ಪೊಡಿಚ್ಛರ ಆ್ಯಂಜಿಯೋಗ್ರಾಂ ಪರೀಕ್ಷೆ ನಡೆಸಿದ ವೈದ್ಯರು 80% ಬ್ಲಾಕ್ ಇರುವುದರಿಂದ ಆ್ಯಂಜಿಯೋಪ್ಲಾಸ್ಟ್ ಶಸ್ತ್ರಚಿಕಿತ್ಸೆ ಆಗಬೇಕೆಂದು ಸೂಚಿಸಿದ್ದರು. ಪೊಡಿಚ್ಛ ಬಿ.ಪಿ.ಎಲ್ ಕಾರ್ಡುದಾರರಾದ್ದರಿಂದ ಅವರ ಕೇಸನ್ನು ವಾಜಪೇಯಿ ಆರೋಗ್ಯಶ್ರೀ ಸ್ಕೀಂಗೊಳಪಡಿಸಿ ಉಚಿತ ಆ್ಯಂಜಿಯೋಪ್ಲಾಸ್ಟ್ ಶಸ್ತ್ರಚಿಕಿತ್ಸೆಯಾಗಲು ನಾನು ಮುತುವರ್ಜಿಯಿಂದ ಕೆಲಸ ಮಾಡಿದ್ದೆ.

ಈ ಪೊಡಿಚ್ಛ ನನಗೆ ಸಂಬಂಧಿಕರೋ, ನೆರೆಹೊರೆಯವರೋ ಅಲ್ಲ..... ಪೊಡಿಚ್ಛರ ಮೇಲೆ ನನಗೆ ವಿಪರೀತ ಆಸಕ್ತಿ ಮತ್ತು ಪ್ರೀತಿ ಬೆಳೆಯಲು ಕಾರಣ ನಾನು ತೊಡಗಿಸಿಕೊಂಡಿದ್ದ ಗೋ-ರಾಜಕೀಯದ ವಿರುದ್ಧದ ಚಳವಳಿ.

ಪೊಡಿಚ್ಛ ಪಾತಾರ ದಂಪತಿಗಳಿಗೆ ಮದುವೆಯಾಗಿ ವರ್ಷ ಹನ್ನೆರಡು ಕಳೆದರೂ ಮಕ್ಕಳಾಗಲಿಲ್ಲ, ಅದಕ್ಕಾಗಿ ಅವರು ಹೊರದ ಹರಕೆಗಳಿಲ್ಲ, ಒಮ್ಮೆ ಪಾತಾದ ನೀವು ಇನ್ನೊಂದು ಮದುವೆಯಾಗಿ ಎಂದು ಪೊಡಿಚ್ಛರಿಗೆ ದುಂಬಾಲು ಬಿದ್ದಿದ್ದರು. ಪಾತಾದರನ್ನು ಜೀವಕ್ಕಿಂತಲೂ ಮಿಗಿಲಾಗಿ ಪ್ರೀತಿಸುತ್ತಿದ್ದ ಪೊಡಿಚ್ಛರಿಗೆ ಪಾತಾದರಿಗೆ ಸವತಿಯನ್ನು ತರಲು ಸುತಾರಾಂ ಮನಸ್ಸಿರಲಿಲ್ಲ, ಪಾತಾದರ ಹಠ ತಡೆಯದಾದಾಗ "ಪಾತು, ನಿನಗೆ ಬೇಕಿರುವುದು ಮಕ್ಕಳು ತಾನೆ..... ಅಲ್ಲಾಹು ನಮಗೆ ಸಂತಾನ ಯೋಗವಿಟ್ಟಿದ್ದರೆ ಇಂದಲ್ಲ ನಾಳೆ ಮಕ್ಕಳಾಗುತ್ತದೆ. ಪ್ರವಾದಿ ಇಬ್ರಾಹಿಂ (ಅ. ಸ) ರಿಗೆ ಎಂಬತ್ತರ ಹರೆಯದಲ್ಲಿ ಸಂತಾನಭಾಗ್ಯ ಕರುಣಿಸಿದ ಮಹಾಮಹಿಮನ ಇಚ್ಛೆಯಿದ್ದರೆ ಖಂಡಿತ ನಮಗೆ ಮಕ್ಕಳಾಗುತ್ತದೆ. ನಮಗೆ ಮಕ್ಕಳಾಗದಿದ್ದರೂ ನಿನ್ನ ಸ್ಥಾನಕ್ಕೆ ಇನ್ನೋರ್ವಳನ್ನು ತರಲಾರೆ. ಅದಕ್ಕಿಂತ ನಾವು ಎರಡು ದನಗಳನ್ನು ತಂದು ಅವುಗಳನ್ನು ಮಕ್ಕಳಂತೆ ಸಾಕೋಣ" ಎಂದಿದ್ದರು. ಅದರಂತೆಯೇ ಎರಡು ಹೆಣ್ಣು ಕರುಗಳನ್ನು ತಂದು ಅವುಗಳಿಗೆ ಪುತ್ತುಮೋಳು, ಚೆರೆಮೋಳು ಎಂದು ಹೆಸರಿಟ್ಟರು.

ಪೊಡಿಚ್ಛ ಪಾತಾದ ತಮ್ಮ ಹಸುಗಳನ್ನು ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಂತೆ ಪ್ರೀತಿಯಿಂದ ಸಾಕತೊಡಗಿದರು. ಪೊಡಿಚ್ಛ ಪಾತಾದ ಪ್ರಾತಃಕಾಲದ ನಮಾಜು ಮುಗಿಸಿ ಮಾಡುವ ಮೊದಲ ಕೆಲಸ ಹಟ್ಟಿಗೆ ತೆರಳಿ ಹಸುಗಳಿಗೆ ಅಕ್ಕಚ್ಚು ಕುಡಿಸುವುದು. ಆ ಬಳಿಕ ಬಂದು ಇಬ್ಬರೂ ಕಡಕ್ ಕಪ್ಪ ಕುಡಿದು ಹಸುಗಳನ್ನು ಉಗುರು ಬಿಸಿ ನೀರಿನಲ್ಲಿ ಮೀಯಿಸಿ ಅವುಗಳನ್ನು ಶುಚಿಗೊಳಿಸುವುದು. ಆ ಬಳಿಕ ಹಾಲು ಕರೆದು, ಕರುಗಳಿಗೆ ಕುಡಿಯಲು ಬಿಟ್ಟು, ಮತ್ತೆ ಹಸುಗಳನ್ನು ಗುಡ್ಡಕ್ಕೆ ಅಟ್ಟಿಕೊಂಡು ಹೋಗಿ ಪಟಮೆ ಹಾಕಿ ಕಟ್ಟಿಬರುವುದು. ಹಟ್ಟಿಯಲ್ಲಿ ತುಂಬಿದ ಸೆಗಣಿಯನ್ನು ಬುಟ್ಟಿಯಲ್ಲಿ ತುಂಬಿಸಿ ತೋಟದ ತೆಂಗು, ಕಂಗುಗಳಿಗೆ ಹಾಕುವುದು. ಹೀಗೆ ಪೊಡಿಚ್ಛ ಪಾತಾದರ ದಿನಚರಿ ಪ್ರಾರಂಭವಾಗುವುದೇ ಹಸುಗಳೊಂದಿಗೆ.

ಕತೆ

ಪೊಡಿಚ್ಛರ ಜಾನುವಾರು ಪ್ರೇಮದ ಕತೆಗಳು ನಮ್ಮೂರಿನಲ್ಲಿ ಜನಜನಿತ. ಆದುದರಿಂದಲೇ ಪೊಡಿಚ್ಛರಿಗೆ ಕಡ್ಡಿ ಪೊಡಿಚ್ಛ ಎಂಬ ಅಡ್ಡ ಹೆಸರು ಬಂದದ್ದು. ತಮ್ಮ ಹಸುಗಳಿಗೇನಾದರೂ ಚಿಕ್ಕಪುಟ್ಟ ಕಾಯಿಲೆ ಕಸಾಲೆ ಬಾಧಿಸಿದರೆ ಈ ದಂಪತಿಗಳಿಗೆ ನಿದ್ರೆ ಹತ್ತುವುದಿಲ್ಲ, ಅಂತಹ ದಿನಗಳಲ್ಲಿ ಪೊಡಿಚ್ಛ-ಪಾತಾದ ಹಟ್ಟಿಯ ಪಕ್ಕದ ಕೃಷಿಯ ಪರಿಕರಗಳನ್ನಿಡುವ ಕೊಠಡಿಯಲ್ಲಿ ಎರಡು ಇಚ್ಚಾರು ಹಾಕಿ ಕೂತೇ ನಿದ್ರಿಸುತ್ತಾರೆ. ಪೊಡಿಚ್ಛ ಪಾತಾದ ದಂಪತಿಗಳು ಜಾನುವಾರುಗಳಿಗೆ ಚಿಕಿತ್ಸೆ ಶುಶ್ರೂಷೆ ನೀಡುವುದರಲ್ಲಿ ಎಷ್ಟು ಪರಿಣತರೆಂದರೆ ಸುತ್ತ-ಮುತ್ತಲ ಹಳ್ಳಿಗಳ ಜನ ತಮ್ಮ ಜಾನುವಾರುಗಳಿಗೆ ಕಾಯಿಲೆ ಕಸಾಲೆ ಬಾಧಿಸಿದರೆ ಇವರನ್ನು ಹುಡುಕಿಕೊಂಡು ಬರುತ್ತಾರೆ. ಪೊಡಿಚ್ಛ-ಪಾತಾದರು ಜಾನುವಾರುಗಳಿಗೆ ನೀಡುವ ಗಿಡಮೂಲಿಕೆ ಔಷಧಿಗಳು ಎಷ್ಟು ಪರಿಣಾಮಕಾರಿಯೆಂದರೆ ಇನ್ನೇನು ಸಾಯುತ್ತದೆ ಎಂಬ ಸ್ಥಿತಿಯಲ್ಲಿದ್ದ ಪಶುವೂ ಮೂರು ದಿನಗಳಲ್ಲಿ ಏನೂ ಆಗೇ ಇಲ್ಲ ಎನ್ನುವಷ್ಟು ಆರೋಗ್ಯಪೂರ್ಣವಾಗುತ್ತದೆ. ಪೊಡಿಚ್ಛ-ಪಾತಾದರು, ಜಾನುವಾರುಗಳಿಗೆ ಚಿಕಿತ್ಸೆ ನೀಡಿದ್ದಕ್ಕೆ ನಯಾಪೈಸೆಯ ಶುಲ್ಕ ಪಡೆಯುವುದಿಲ್ಲ, ಸರಕಾರಿ ಗೋ ಆಸ್ಪತ್ರೆಯ ವೈದ್ಯನಾದರೂ ಆತನನ್ನು ಕರೆದುಕೊಂಡು ಬರಲು ಆಟೋಗೆ ಕಡಿಮೆಯೆಂದರೂ ಮುನ್ನೂರು ರೂಪಾಯಿ ಸುರಿಯಬೇಕು. ಇನ್ನು ಆತನಿಗೆ ಐನೂರು ರೂಪಾಯಿಯ ಒಂದು ನೋಟಾದರೂ ಭಕ್ಷೀಸೆಂದು ನೀಡಬೇಕು. ನನ್ನ ಹಳ್ಳಿಯ ಜನಕ್ಕೆ ವೈದ್ಯನಲ್ಲದ ನಾನು ಹೇಗೆ ವೈದ್ಯನೋ ಹಾಗೆಯೇ ಪಶು ವೈದ್ಯರಲ್ಲದ ಪೊಡಿಚ್ಛ-ಪಾತಾದರು ಸುತ್ತಮುತ್ತಲ ಹಳ್ಳಿಗಳಿಗೆ ಪಶು ವೈದ್ಯರು.

ಪೊಡಿಚ್ಛ-ಪಾತಾದ ದಂಪತಿಗಳು ನಮ್ಮೂರಿನ ಜನಕ್ಕೆ ತಮಾಷೆಯ-ಹಾಸ್ಯದ ವಸ್ತುವೂ ಹೌದು. ಅವರು ತಮ್ಮ ಹಸುಗಳನ್ನು ಹೊಡೆದುಕೊಂಡು ಹೋಗುತ್ತಿದ್ದರೆ ಜನ ಕಡ್ಡಿ ಪೊಡಿಚ್ಛರ ಮಕ್ಕಳೆಂದು ಗೇಲಿ ಮಾಡುವುದು, ಪೊಡಿಚ್ಛರ ದನ ಕರು ಹಾಕಿದರೆ ಕಡ್ಡಿ ಪೊಡಿಚ್ಛರ ಮಗಳಿಗೆ ಹೆರಿಗೆಯಾಯಿತು. ಕಡ್ಡಿ ಪೊಡಿಚ್ಛ-ಪಾತಾದರಿಗೆ ಮೊಮ್ಮಗು ಹುಟ್ಟಿತು ಎಂದೆಲ್ಲಾ ಹಾಸ್ಯ ಮಾಡುವುದಿದೆ. ಪೊಡಿಚ್ಛ ಅವುಗಳಿಗೆ ಕೇವಲ ಒಂದು ಮುಗ್ಧ ಮಂದಹಾಸದ ಉತ್ತರ ನೀಡಿ ಮುಂದೆ ಸಾಗುತ್ತಿದ್ದರು.

ಜಾನುವಾರುಗಳನ್ನು ಮಕ್ಕಳಂತೆ ಪ್ರೀತಿಸುವ, ಜಾನುವಾರುಗಳ ಸಂವೇದನೆಯನ್ನು ತಕ್ಷಣ ಅರ್ಥಮಾಡಿಕೊಳ್ಳುವ, ಅವುಗಳ ಆರೈಕೆಯಲ್ಲೇ ಬದುಕಿನ ಸಕಲ ಸುಖಗಳನ್ನು ಪಡೆಯುವ ಪೊಡಿಚ್ಛ ಗೋ-ರಕ್ಷಕರಿಂದ ಪೆಟ್ಟು ತಿಂದದ್ದಿದೆ, ಹಲ್ಲು ಉದುರಿಸಿಕೊಂಡದ್ದಿದೆ, ಮೂಳೆ ಮುರಿಸಿಕೊಂಡದ್ದಿದೆ. ಇಷ್ಟು ಮಾತ್ರವಲ್ಲದೇ ಅಕ್ರಮ ಜಾನುವಾರು ಸಾಗಾಟ ಕೇಸಿನಲ್ಲಿ ಸಿಲುಕಿ ಮೂರು ವಾರಗಳ ಕಾಲ ಜೈಲಿನ ಅನ್ನ ತಿಂದದ್ದೂ ಇದೆ.


ಒಮ್ಮೆ ಮಾವಿನ ಗುಂಡಿಯ ಗೋ ಪಾಲನಾ ಕೇಂದ್ರದ ಪಕ್ಕದ ಮನೆಯ ರಾಮಭಟ್ಟರ ಹಸು ಗೌರಿಯನ್ನು ಖರೀದಿಸಿ ಸಂಜೆ ಸುಮಾರು 7 ಗಂಟೆಯ ಹೊತ್ತಿಗೆ ಮನೆಗೆ ಸಾಗಿಸುತ್ತಿದ್ದರು. ಗೋ-ರಕ್ಷಕರು ಪೊಡಿಚ್ಛ ಗೋ ಪಾಲನಾ ಕೇಂದ್ರದಿಂದ ದನ ಕದ್ದಿದ್ದಾರೆಂದು ಪುಕಾರು ಹಬ್ಬಿಸಿ ಅವರನ್ನು ಅರೆಬೆತ್ತಲೆ ಮಾಡಿ ಹೊಡೆದು, ಎರಡು ಹಲ್ಲುಗಳನ್ನು ಉದುರಿಸಿದ್ದರು. ಇಷ್ಟಾಗಿಯೂ ತಾನು ಖರೀದಿಸಿದ ಗೌರಿಯನ್ನು ಬಿಟ್ಟು ಕೊಡದೇ, ಅವರ ಕೈಯಿಂದ ಪೆಟ್ಟು ತಿನ್ನುತ್ತಲೇ ಅವರ ಹಿಂದೆ ಗೋಗರೆಯುತ್ತಾ ನಡೆಯುತ್ತಿದ್ದರು. ಸುದ್ದಿ ರಾಮಭಟ್ಟರಿಗೆ ತಲುಪಿ ಅವರು ತನ್ನ ಮಗ ವಕೀಲ ಕೇಶವಭಟ್ಟರೊಂದಿಗೆ ಸ್ಥಳಕ್ಕೆ ತಲುಪಿ ಪೊಡಿಚ್ಛರನ್ನು ಅವರ ಕೈಯಿಂದ ಬಿಡಿಸದಿದ್ದರೆ ಪೊಡಿಚ್ಛರ ಮಯ್ಯತ್ ಅಂದೇ ಬೀಳುತ್ತಿತ್ತು, ಅವರು ಪೊಡಿಚ್ಛರ ಮನೆಗೆ ಹಸು ಗೌರಿಯನ್ನು ತಲುಪಿಸಿ ತಮ್ಮದೇ ಜೀಪಿನಲ್ಲಿ ಪೊಡಿಚ್ಛರನ್ನು ಆಸ್ಪತ್ರೆಗೆ ಕೊಂಡೊಯ್ದು ಚಿಕಿತ್ಸೆ ಕೊಡಿಸಿದ್ದರು.

ಒಮ್ಮೆ ಪುತ್ತೂರಿಯ ಹಳೆ ಗೆಳೆಯ ದೋಗು ಪೂಜಾರಿ ತಮ್ಮ ಜರ್ಸಿ ದನವನ್ನು ಪೊಡಿಚ್ಛರಿಗೆ 8,000 ರೂಪಾಯಿಗಳಿಗೆ ಮಾರಾಟ ಮಾಡಿದ್ದರು. ಪೊಡಿಚ್ಛ ಒಂದು ಪಿಕಪ್ ವಾಹನವನ್ನು ಗೊತ್ತು ಮಾಡಿ ಜೋಗಿಬೆಟ್ಟುವಿನ ಮನೆಗೆ ಸಾಗಿಸುತ್ತಿದ್ದರು. ದಾರಿ ಮಧ್ಯೆ ದೋಗು ಪೂಜಾರಿಯ ಮಗ ನರೇಶ, ಕೆಲವು ಗೋರಕ್ಷಕರ ತಂಡ ಕಟ್ಟಿ ಪಿಕಪ್ ವಾಹನಕ್ಕೆ ಅಡ್ಡ ಹಾಕಿ ಪೊಡಿಚ್ಛರನ್ನು ಎಳೆದು ಹಾಕಿ ಹೊಡೆದಿದ್ದರು. ದನದ ಮಾಂಸ ತಿಂದು ಮೈ ಬೆಳೆಸಿರುವ ಹದಿನೈದು ಮಂದಿ ಯುವಕರ ಹೊಡೆತದ ಪೆಟ್ಟಿಗೆ ಪೊಡಿಚ್ಛರ ಮೂಳೆ ಮುರಿದಿತ್ತು, ಹದಿನೈದು ದಿನಗಳ ಕಾಲ ಆಸ್ಪತ್ರೆಯಲ್ಲಿ ಉಳಿದು ಕಾಲಿನ ಶಸ್ತ್ರಕ್ರಿಯೆ ಮಾಡಿಸಿದರೂ ಪೊಡಿಚ್ಛರ ಬಲಗಾಲು ಮುಂಚಿನಂತಾಗಲಿಲ್ಲ. ಶಾಶ್ವತವಾಗಿ ಊನಗೊಂಡು ಕಾಲೆಳೆದು ನಡೆಯುವಂತಾಯಿತು. ಬಡಪಾಯಿ ಪೊಡಿಚ್ಛರ ಊನತೆ ಗೋ-ರಕ್ಷಕರ ವಿಜಯದ, ಅಟ್ಟಹಾಸದ ಸಂಕೇತವಾಯಿತು. ಜನಸಾಮಾನ್ಯರಿಗೆ ಅದು ಅವರ ಜಾನುವಾರು ಪ್ರೇಮದ ನಿಶಾನೆಯಂತೆ ತೋರುತ್ತಿತ್ತು. ಪೊಡಿಚ್ಛರ ಕಾಲಿನ ಮೂಳೆ ಮುರಿದ ಗೋರಕ್ಷಕರು ಅವರು 8,000/- ರೂಪಾಯಿ ಕೊಟ್ಟು ಖರೀದಿಸಿದ ದನವನ್ನು ದೋಗು ಪೂಜಾರಿಯ ಮಗ ನರೇಶನ ನೇತೃತ್ವದಲ್ಲಿ ಮಾವಿನಗುಂಡಿಯ ಗೋ-ಪಾಲನಾ ಕೇಂದ್ರಕ್ಕೆ ಅರ್ಪಿಸಿ ಕೃತಾರ್ಥರಾದರು. ಗೋ-ಪಾಲನಾ ಕೇಂದ್ರದ ಅಧ್ಯಕ್ಷ ವಾಸುದೇವ ಸೋಮಯಾಜಿಯವರಿಂದ ನರೇಶನಿಗೆ ಹಾರ-ತುರಾಯಿ-ಶಾಲಿನ ಸನ್ಮಾನವೂ ಆಯಿತು!

ಅಂದಹಾಗೆ ರಹ್ಮತ್‌ನಗರದ ಕಸಾಯಿ ಮುನೀರನಿಗೆ ಕೋಣ-ದನಗಳು ಗೋ-ಪಾಲನಾ ಕೇಂದ್ರದಿಂದಲೇ ಸರಬರಾಜಾಗುತ್ತದೆ. ಗೋ-ಪಾಲನಾ ಕೇಂದ್ರ ಆರಂಭವಾದಂದಿನಿಂದ ಮುನೀರನಿಗೆ ಎಲ್ಲೆಲ್ಲಿಂದಲೋ ಹೆದರಿ ಬೆದರಿ ಜೀವ ಪಣಕ್ಕಿಟ್ಟು ಜಾನುವಾರುಗಳನ್ನು ತರುವ ತಲೆನೋವು ಇಲ್ಲವಾಗಿದೆ. ಗೋ-ರಕ್ಷಕರ ಪೆಟ್ಟಿನ ಕಾಟ ತಪ್ಪಿದೆ, ಪೊಲೀಸರಿಗೆ ಹಫ್ತಾ ನೀಡುವ ಸಮಸ್ಯೆಗೂ ಪರಿಹಾರ ಸಿಕ್ಕಿದೆ. ಗೋ-ಪಾಲನಾ ಕೇಂದ್ರದ ವಾಸುದೇವ ಸೋಮಯಾಜಿಯವರಿಗೆ ಮುನೀರ್ ಕಂಡಕಂಡಲ್ಲಿ ನಡು ಬಗ್ಗಿಸಿ ನಮಸ್ಕಾರ ಹೊಡೆಯುತ್ತಾನೆ. ವಾಸುದೇವ ಸೋಮಯಾಜಿಯವರ ದಯೆಯಿಂದ ಮುನೀರನೂ ಆರ್ಥಿಕವಾಗಿ ಸಶಕ್ತನಾಗಿದ್ದಾನೆ. ಮಾಂಸವನ್ನು ಮನೆಮನೆಗೆ ಸರಬರಾಜು ಮಾಡಲು ಹೊಸ ಮಾರುತಿ ಓಮ್ನಿ ವಾಹನವನ್ನೂ ಖರೀದಿಸಿದ್ದಾನೆ. ಪೊಡಿಚ್ಛನಂತಹ ಬಡಪಾಯಿಗಳು ದುಬಾರಿ ಕ್ರಯಕ್ಕೆ ಸಾಕಲು ಖರೀದಿಸುವ ಹಸುಗಳು ಗೋ-ರಕ್ಷಕರ ಕೃಪೆಯಿಂದ ಮುನೀರನಿಗೆ ಅರ್ಧ ಬೆಲೆಗೆ ದೊರೆಯುತ್ತದೆ.

ಪೊಡಿಚ್ಛರ ಜಾನುವಾರು ಪ್ರೇಮ ಕಾಲು ಊನಗೊಂಡರೂ ಕಡಿಮೆಯಾಗಲಿಲ್ಲ. ಒಮ್ಮೆ ಪಂಡಿತಹೌಸ್‌ನ ಶ್ರೀನಿವಾಸ ಪಂಡಿತರಿಂದ 15,000/- ರೂಪಾಯಿಗೆ ಖರೀದಿಸಿದ ಹಸು ಮತ್ತು ಕರುವನ್ನು ಜೋಗಿಬೆಟ್ಟುವಿನ ತನ್ನ ಮನೆಗೆ ಟೆಂಪೋದಲ್ಲಿ ಸಾಗಿಸುತ್ತಿದ್ದಾಗ ಭಜನಾಮಂದಿರದ ಬಳಿ ಗೋ-ರಕ್ಷಕರು ತಡೆದು ಪೊಡಿಚ್ಛರಿಗೆ ಹೊಡೆದು-ಬಡಿದು ಹಣ್ಣುಗಾಯಿ-ನೀರುಗಾಯಿ ಮಾಡಿದರು. ಅಷ್ಟಕ್ಕೇ ಸುಮ್ಮನಾಗದ ಗೋ-ರಕ್ಷಕರು ಪೊಡಿಚ್ಛರನ್ನು ಮಾಲು ಸಮೇತ ಪೊಲೀಸರಿಗೊಪ್ಪಿಸಿದರು. ಗೋ-ರಕ್ಷಕರಿಂದ ಪೆಟ್ಟು ತಿಂದು ತಿಂದೂ ಅರೆಜೀವವಾಗಿದ್ದ ಪೊಡಿಚ್ಛರ ಮೇಲೆ ಅತ್ತ ಪೊಲೀಸರೂ ಪ್ರಹಾರ ನಡೆಸಿದರು. ಆ ಬಳಿಕ ಅಕ್ರಮ ಜಾನುವಾರು ಸಾಗಾಟದ ಪ್ರಕರಣ ದಾಖಲಿಸಿ ನ್ಯಾಯಾಲಯಕ್ಕೊಪ್ಪಿಸಿದರು. ನ್ಯಾಯಾಲಯ ಮೂರು ವಾರಗಳ ನ್ಯಾಯಾಂಗ ಬಂಧನ ವಿಧಿಸಿ ಜೈಲಿಗಟ್ಟಿತು.

ಪಾತಾರ "ನಾನು ಮಕ್ಕಳಿಲ್ಲ ಎಂದು ಕೊರಗಿದ್ದಕ್ಕಲ್ಲವೇ ನನ್ನ ಪತಿ ಇಷ್ಟೆಲ್ಲ ಅನುಭವಿಸಬೇಕಾಗಿದ್ದು" ಎಂದು ಅಳುತ್ತಾ ಊಟ-ನಿದ್ದೆ ಬಿಟ್ಟು ಪೊಡಿಚ್ಛರ ಶೀಘ್ರ ಬಿಡುಗಡೆಗಾಗಿ ಅಲ್ಲಾಹನಲ್ಲಿ ಮೊರೆಯಿಡುತ್ತಿದ್ದರು. ರಾಮ ಭಟ್ಟರ ಮಗ ವಕೀಲ ಕೇಶವ ಭಟ್ಟರ ಶತಪ್ರಯತ್ನದಿಂದಾಗಿ ಪೊಡಿಚ್ಛರಿಗೆ ಜಾಮೀನು ದೊರಕಿತು. ಜೈಲಿನಿಂದ ಬಿಡುಗಡೆಯಾಗಿ



ಬಂದವರೇ ಪಾತಾದರ ಕೈಹಿಡಿದು ಅಳುತ್ತಾ "ಪಾತು, ಇನ್ನು ಜಾನುವಾರು ಖರೀದಿಸುವ ಗೋಜಿಗೆ ನಾನು ಹೋಗಲಾರೆ. ಇನ್ನು ನಮ್ಮ ಪುತ್ತುಮೋಳು, ಚೆರಿಮೋಳು, ಕುಂಞಮೋಳು ಮತ್ತು ಗೌರಿಯಿಂದಲೇ ನಮ್ಮ ಸಂತಾನ ಬೆಳೆಸೋಣ. ನಮ್ಮ ಈ ಜಾನುವಾರು ಪ್ರೇಮದಿಂದ ನಾನು ಅನುಭವಿಸಬಾರದ್ದನ್ನೆಲ್ಲಾ ಅನುಭವಿಸಿದೆ. ಪೊಲೀಸು ಠಾಣೆಯೆಂದರೆ ಏನೆಂದೇ ತಿಳಿಯದ ನಾನು ಜೈಲಿನ ಕತ್ತಲೆಕೋಣೆಯಲ್ಲಿ ಕಳೆಯಬೇಕಾಯಿತು. ಇನ್ನು ವರ್ಷಾನುಗಟ್ಟಲೆ ಕೋರ್ಟಿಗೆ ಅಲೆಯಬೇಕು. ಮುಂದಿನ ಎರಡು ಹಲ್ಲುಗಳೂ ಉದುರಿ ಮುಖವೂ ವಿಕಾರವಾಗಿ ಕಾಣುತ್ತಿದೆ. ಈ ಕಾಲೊಂದು ಊನವಾಗಿಬಿಟ್ಟಿದೆ..... ಯಾರಿಟ್ಟೀ ನನಗೇಕೆ ಇಂತಹ ಶಿಕ್ಷೆ.....? ಮೂಕಪ್ರಾಣಿಗಳನ್ನು ಮಕ್ಕಳಂತೆ ಪ್ರೀತಿಸಿದ ನನಗೆ ದನಗಳನ್ನು ಮಾತೆ ಎನ್ನುವವರೇ ಈ ಸ್ಥಿತಿ ತಂದೊಡ್ಡಿದರಲ್ಲಾ.....? ಗೆಳೆಯ ದೋಗು ಪೂಜಾರಿಯ ಮಗ ನರೇಶ, ನನ್ನ ಇದೇ ಕೈಯಿಂದ ಅದೆಷ್ಟು ಬಾರಿ ಕೈತುತ್ತು ತಿಂದಿಲ್ಲ.....? ನನ್ನ ಹೆಗಲಲ್ಲಿ ಜೋತು ಹಾಕಿ ನಾನು ಎಷ್ಟು ಬಾರಿ ಆತನನ್ನು ಉಪ್ಪಿನ ಮೂಟೆಯ ಆಟ ಆಡಿಸಿಲ್ಲ? ಈ ಕಾಲುಗಳಲ್ಲಿ ಕೂರಿಸಿ ಆತನನ್ನು ನಾನು ಎಷ್ಟು ಸಲ 'ಕೇರಿ, ಕೇರಿ ಪಾಂಬಟ್ಟೆ' ಆಟ ಆಡಿಸಿಲ್ಲ.....? ಈ ಕೋಮು, ಗೋ-ರಾಜಕೀಯದ ಅಮಲು ತಲೆಗೇರಿಸಿ ಆತ ತನ್ನ ತಂದೆಯ ಸಮನಾದ ನನ್ನನ್ನು ಈ ಪಾಟಿ ಹೊಡೆದನೆಂದರೆ, ಕಾಲಿನ ಮೂಳೆ ಮುರಿದನೆಂದರೆ ನಾನು ಇನ್ಯಾರನ್ನು ನಂಬಲಿ?" ಎಂದು ಪೊಡಿಚ್ಚ ಒಂದೇಸಮನೆ ಅಳತೊಡಗಿದರು. ಪೊಡಿಚ್ಚರ ಅಳು ಪಾತಾದರನ್ನು ಸುಮ್ಮನಿರಗೊಡಲಿಲ್ಲ, ಅವರೂ ಬಿಕ್ಕಿ ಬಿಕ್ಕಿ ಅತ್ತರು. ವಕೀಲ ಕೇಶವ ಭಟ್ಟರೇ ತಮ್ಮ ಜೀಪಿನಲ್ಲಿ ಪೊಡಿಚ್ಚರನ್ನು ಮನೆ ತನಕ ಕರೆತಂದಿದ್ದು. ಪೊಡಿಚ್ಚ ಬಿಡುಗಡೆಯಾಗಿ ಬಂದ ಸುದ್ದಿ ಕೇಳಿದ್ದೇ ರಾಮಭಟ್ಟರು ಪೊಡಿಚ್ಚರ ಮನೆಗೆ ಬಂದು ಅವರನ್ನು ಸಂತೈಸಿದರು.

ಇದಾಗಿ ತಿಂಗಳು ಕಳೆದಿರಬಹುದಷ್ಟೆ..... ಪೊಡಿಚ್ಚ ಪಾತಾದರ ಹಿರಿಮಗಳು ಚೆರಿಮೋಳು ಕಾಣೆಯಾಗಿದ್ದಳು. ಚೆರಿಮೋಳುಳನ್ನು ಹುಡುಕುತ್ತಾ ಹೋಗಿ ಅವಳನ್ನು ಮರಳಿ ಮನೆಗೆ ಕರೆತರುವಾಗ ಆಕೆಯ ಎಳೆದಾಟ, ಕೊಸರಾಟದಿಂದಾಗಿ ಪೊಡಿಚ್ಚರಿಗೆ ಎದೆನೋವು ಪ್ರಾರಂಭವಾಗಿ ಹೃದಯಾಘಾತವಾಗಿತ್ತು.

ಪೊಡಿಚ್ಚರ ಮಯ್ಯಿತ್ ಸ್ನಾನ ಮಾಡಿಸಲು ನಾನೂ ಕೈಜೋಡಿಸಿದ್ದೆ. ಪೊಡಿಚ್ಚರ ಮಯ್ಯಿತನ್ನು ಕಬರ್ ಸ್ಥಾನಕ್ಕೆ ಕೊಂಡೊಯ್ಯುವ ಮುನ್ನ ಅವರ ಪ್ರೀತಿಯ ಮಕ್ಕಳು, ಮೊಮ್ಮಕ್ಕಳನ್ನು ಹಟ್ಟಿಯ ಬೈಪಣೆಯ ಹಗ್ಗ ಬಿಚ್ಚಿ ತಂದು ಪೊಡಿಚ್ಚರ ಅಂತಿಮ ದರ್ಶನ ಮಾಡಿಸಲಾಯಿತು. ಆ ಮೂಕಪ್ರಾಣಿಗಳು ಪೊಡಿಚ್ಚರನ್ನು ಪ್ರೀತಿಯಿಂದ ನೆಕ್ಕಲಾರಂಭಿಸಿತು. ಸದಾ ಅವುಗಳ ಮೈದಡವುವ ಪೊಡಿಚ್ಚರಿಂದ ಯಾವುದೇ ಪ್ರತಿಕ್ರಿಯೆ ಸಿಗದಿದ್ದರಿಂದ ಅವುಗಳು ಅಂಬಾ..... ಅಂಬಾ... ಎನ್ನಲಾರಂಭಿಸಿದವು. ಮಯ್ಯಿತ್ ಮಂಚವನ್ನು ನಾವು ಹೆಗಲ ಮೇಲೆ ಎತ್ತಿಕೊಂಡು ಮಯ್ಯಿತಿಗೆ ಕಫನ್ ಬಟ್ಟೆ ತೊಡಿಸಲು ಒಳಹೋದಾಗ ಆ ಮೂಕಪ್ರಾಣಿಗಳಿಗೆ ಬಹುಶಃ ವಾಸ್ತವ ಮನವರಿಕೆಯಾಯಿತು. ಅವುಗಳ ಅಂಬಾ ಅಂಬಾ ಎಂಬ ರೋದನ ಮುಗಿಲು ಮುಟ್ಟಿತು. ಇದನ್ನು ಕಂಡ ರಾಮಭಟ್ಟ, ಕೇಶವ ಭಟ್ಟ, ಭೋಜ, ದೋಗು ಪೂಜಾರಿ, ಗೋಪಾಲನಾ ಕೇಂದ್ರದ ಕೆಲಸದಾಳು ತಿಮ್ಮನ ಕಣ್ಣಾಲಿಗಳು ಒದ್ದೆಯಾದವು.

ಪೊಡಿಚ್ಚ ತನ್ನ ಪತ್ನಿ ಪಾತಾದರಿಗೆ ಮಾಡಿದ ವಸಿಯ್ಯತ್ ಇಷ್ಟೆ. "ಪಾತು, ನಾನು ಮರಣ ಹೊಂದಿದರೆ ನೀನು ಮರೆಯಲ್ಲಿ (ಇದ್ದತ್) ಕೂರಬೇಡ. ನೀನು ಮರೆಯಲ್ಲಿ ಕೂತರೆ ನಮ್ಮ ಜಾನುವಾರುಗಳು ಹಸಿವಿನಲ್ಲಿ ಬಿದ್ದಾವು. ನೀನೇನು ಚಿಂತಿಸಬೇಡ. ನಿನಗೆ ನಮ್ಮ ಈ ಜಾನುವಾರುಗಳೇ ಜೀವನಾಧಾರವಾಗುತ್ತವೆ. ಅಲ್ಲಾಹು ನಿನ್ನನ್ನು ಕೈ ಬಿಡಲಾರ......"

ಪೊಡಿಚ್ಚರ ಮರಣದ ಏಳು ದಿನಗಳವರೆಗೂ ಪೊಡಿಚ್ಚನ ಮಕ್ಕಳು ನೀರು ಮುಟ್ಟದೇ ಮೂಕವಾಗಿ ಕಣ್ಣೀರು ಸುರಿಸುತ್ತಿದ್ದವು. ಪಾತಾದ ಅವುಗಳಿಗೆ ಅಕ್ಕಚ್ಚು ನೀಡಹೋದರೆ ಅವು ಮೂಸಿಯೂ ನೋಡಲಿಲ್ಲ, ಬದಲಾಗಿ ಪಾತಾದರನ್ನು ನೆಕ್ಕುತ್ತಿದ್ದವು.

ಇತ್ತ ಪೊಡಿಚ್ಚರ ದಫನ್ ಕಾರ್ಯ ಮುಗಿಸಿದಾಗ ಹೊಟ್ಟೆ ತಾಳ ಹಾಕತೊಡಗಿತು. ಗೆಳೆಯ ರಿಯಾಜ್‌ನೊಂದಿಗೆ ಬೈಕಲ್ಲಿ ಬದ್ರಿಯಾ ಕ್ಯಾಂಟೀನಿಗೆ ಹೋದೆ. ಅಲ್ಲಿ ನರೇಶ ಮತ್ತು ಆತನ ಪಟಾಲಂ, ನಾಲ್ಕು ಬೀಫ್ ಚಿಲ್ಲಿ, ನಾಲ್ಕು [illegible] ಪರೋಟ ಎಂದು [illegible] ಆರ್ಡರ್ [illegible]ಕೊಡುತ್ತಿದ್ದರು...... ಗಲ್ಲದಲ್ಲಿ [illegible] ಬಾರಿ [illegible] ನೋಡಿ [illegible] ಬಿಟ್ಟಿದರು.



■ ಇಸ್ಮತ್ ಫಜೀರ್

ನೆತ್ತರು ಹರಿಸಲು ಈ ಮುಸಲ್ಮಾನರಿಗೆ ಅಧಿಕಾರ ಕೊಟ್ಟವರು ಯಾರು?

ಇತ್ತೀಚೆಗೆ ಕೆಲವು ಮುಸ್ಲಿಂ ರಾಷ್ಟ್ರಗಳಲ್ಲಿ ನಡೆಯುತ್ತಿರುವ ಕೆಲವು ಘಟನೆಗಳ ಕುರಿತು ಕೇಳಿದಾಗ, ಟಿ.ವಿ. ಚಾನಲ್‌ಗಳಲ್ಲಿ ಕೆಲವು ಘಟನೆಗಳ ಚಿತ್ರಣಗಳನ್ನೂ ಕಂಡಾಗ ನಮ್ಮ ರಕ್ತ ಹೆಪ್ಪುಗಟ್ಟುತ್ತದೆ. ಧರ್ಮದ ಹೆಸರಿನಲ್ಲಿ ಈ ರೀತಿ ಅಮಾಯಕ ಮನುಷ್ಯರ ಮೇಲೆ ದೌರ್ಜನ್ಯ ನಡೆಸಿ, ಅವರ ಸಾಮೂಹಿಕ ಹತ್ಯೆ ಮಾಡಲು ಸಾಧ್ಯವಾಗುತ್ತಿರುವುದಾದರೂ ಹೇಗೆ? ಮನುಷ್ಯತ್ವವೆಂದರೆ ಏನೆಂದು ತಿಳಿಯದ, ಧಾರ್ಮಿಕ ಶಿಕ್ಷಣವನ್ನು ಸಮನಾಗಿ ಪಡೆಯದ, ಧರ್ಮದ ಹೆಸರಿನಲ್ಲಿ ದ್ವೇಷದ ಭಾಷಣವನ್ನೇ ಹಗಲಿರುಳೂ ಕೇಳುತ್ತಾ ತಲೆಯೊಳಗೆ ತುಂಬಿಕೊಂಡು, 'ಸ್ವರ್ಗ ನಮ್ಮದು, ದೇವರು ನಮ್ಮವನು' ಎಂದು ವಾದಿಸುತ್ತಾ ಮನುಷ್ಯರ ನೆತ್ತರನ್ನು ಹರಿಸುವ ಒಂದೇ ಗುರಿಯತ್ತ ಮುನ್ನಡೆಯುತ್ತಿರುವ ಈ ಜನರ ಮನದಾಳದಿಂದ ಈ ಮತಾಂಧತೆಯ ವಿಷಬೀಜಗಳನ್ನು ಕಿತ್ತೊಗೆಯುವವರು ಯಾರೂ ಇಲ್ಲವಾ?

ಕಳೆದ ಕೆಲವು ವರ್ಷಗಳಿಂದಲೂ ಇಸ್ಲಾಂ ಧರ್ಮಾನುಯಾಯಿಗಳು ಧರ್ಮದ ಹೆಸರಿನಲ್ಲಿ ತಮ್ಮ ಧರ್ಮಾನುಯಾಯಿಗಳನ್ನು ಹಾಗೂ ಮುಸ್ಲಿಮೇತರರನ್ನೂ ಕೊಲೆ ಮಾಡಿ ನೆತ್ತರು ಹರಿಸುವುದನ್ನು ನಿತ್ಯದ ಕಾಯಕವನ್ನಾಗಿ ಮಾಡಿಕೊಂಡಿದ್ದಾರೆ. ಕಳೆದೊಂದು ವರ್ಷದಲ್ಲಿ ಅಮಾಯಕ ಜನರ ಸಾಮೂಹಿಕ ಹತ್ಯೆ ನಡೆಸಿ ಹರಿಸಿದ ರಕ್ತಕ್ಕೆ ಲೆಕ್ಕವಿಟ್ಟವರು ಯಾರಾದರೂ ಇದ್ದಾರೆಯೇ? ಲಾಹೋರ್‌ನ ಶಾಲೆಗೆ ಮತಾಂಧರು ನುಗ್ಗಿ 132 ಹದಿಹರೆಯದ ವಿದ್ಯಾರ್ಥಿಗಳನ್ನು, ಪ್ರಾಣಿಗಳನ್ನು ಗುಂಡಿಟ್ಟುಕೊಲ್ಲುವಂತೆ ಕೊಂದರು. ಒಟ್ಟು ಸುಮಾರು 140 ಜನರು ಈ ಹತ್ಯಾಕಾಂಡದಲ್ಲಿ ಮೃತಪಟ್ಟರು. ಆ ಯುವ ವಿದ್ಯಾರ್ಥಿಗಳ ತಾಯಂದಿರು ಈ ದುಃಖವನ್ನು ಹೇಗೆ ಸಹಿಸಿಕೊಂಡಿರಬಹುದು? ಕೆಲವರ ಒಬ್ಬನೇ ಮಗನೂ ಮೃತಪಟ್ಟವರಲ್ಲಿರಬಹುದು. ಗುಂಡಿಟ್ಟು ಆ ರೀತಿ ಹತ್ಯೆ ಮಾಡಿದ ಆ ಹೃದಯಹೀನರಿಗೆ ಆ ತಾಯಂದಿರ ಕುರಿತು ಏನೂ ಯೋಚನೆ ಬರಲೇ ಇಲ್ಲವೇ?

ಇತ್ತೀಚೆಗೆ ಪಾಕಿಸ್ತಾನದ ಕರಾಚಿಯಲ್ಲಿ ಇಸ್ಲಾಂ ಧರ್ಮಾನುಯಾಯಿಗಳಾದ ಶಿಯಾ ಪಂಗಡದವರು ಬಸ್ಸಿನಲ್ಲಿ ತಮ್ಮ ಮಸೀದಿಗೆ ಪ್ರಯಾಣಿಸುತ್ತಿದ್ದರು. ಬಸ್ಸನ್ನು ತಡೆದು ನಿಲ್ಲಿಸಿದ ಭಯೋತ್ಪಾದಕರು ಬಸ್ಸಿನೊಳಗೆ ನುಗ್ಗಿ ಮನಬಂದಂತೆ ಗುಂಡು ಹಾರಿಸಿದರು. ಬಸ್ಸಿನೊಳಗಿದ್ದ 60 ಜನರ ಪೈಕಿ 45 ಜನರು ಕೂಡಲೇ ಮೃತಪಟ್ಟರು; ಉಳಿದವರು ಗಂಭೀರವಾಗಿ ಗಾಯಗೊಂಡರು. ಈ ಹಿಂದೆಯೂ ಇದೇರೀತಿ ಲಾಹೋರ್ ಮತ್ತು ಬಲೂಚಿಸ್ಥಾನದಲ್ಲೂ ಅಮಾಯಕರನ್ನು ಹತ್ಯೆ ಮಾಡಲಾಗಿತ್ತು. ಶಿಯಾ ಪಂಗಡದವರು ಮತ್ತು ಖಾದಿಯಾನಿಗಳೆಂಬ ಇನ್ನೊಂದು ಗುಂಪಿನವರು; ಇಸ್ಲಾಂ ಧರ್ಮಾನುಯಾಯಿಗಳಲ್ಲ ಎಂಬುದು ಈ ಹತ್ಯೆಗಳಿಗೆ ಇವರು ಕೊಡುವ ಕಾರಣವಾಗಿದೆ. ಅಷ್ಟು ಮಾತ್ರವಲ್ಲ ಹೆಣ್ಣುಮಕ್ಕಳು ಶಿಕ್ಷಣ ಪಡೆಯಬಾರದೆಂದು ಅವರ ಶಾಲೆಗಳನ್ನು ಕೆಡಹುವುದು, ಆ ಹೆಣ್ಣುಮಕ್ಕಳನ್ನೇ ಹತ್ಯೆ ಮಾಡುವುದೂ ಇವರ ಗುರಿಯಾಗಿದೆ. ಮಲಾಲ ಎಂಬ ಹೆಣ್ಣುಮಗಳ ತಲೆಗೆ ಗುಂಡಿಟ್ಟು ಅವಳ ಕೊಲೆ ಮಾಡಲು ಪ್ರಯತ್ನಿಸಿದರು. ಆದರೆ ಬ್ರಿಟಿಷರು ಅವಳನ್ನು ರಕ್ಷಿಸಿದರು. ಬಲೂಚಿಸ್ತಾನದಲ್ಲಿ ಮಾನವ ಹಕ್ಕುಗಳ ಕಾರ್ಯಕರ್ತೆ ಸೆಬೀನ್ ಮಹಮೂದ್ ಎಂಬವರನ್ನು, ಮಾನವ ಹಕ್ಕುಗಳ ಜಾಗೃತಿ ಎಂಬ ವಿಚಾರಸಂಕಿರಣದಲ್ಲಿ ಭಾಗವಹಿಸಿ ಮರಳುತ್ತಿದ್ದಾಗ ಬೈಕಿನಲ್ಲಿ ಬಂದ ಬಂದೂಕುಧಾರಿಗಳು ಅವರ ಮೇಲೆ ಗುಂಡಿನ ಮಳೆಗರೆದು ಹತ್ಯೆ ಮಾಡಿದರು. ಹೆಣ್ಣುಮಕ್ಕಳಲ್ಲಿ, ಮಹಿಳೆಯರಲ್ಲಿ ಯಾವ ರೀತಿಯಲ್ಲೂ ಜಾಗೃತಿ ಮೂಡಬಾರದು; ಅವರು ಯಾವಾಗಲೂ ನಾಲ್ಕು ಗೋಡೆಗಳೊಳಗೆ ಬಂಧಿಯಾಗಿದ್ದು ಮಕ್ಕಳನ್ನು ಸಾಕುತ್ತಾ ತಮ್ಮ ಬೋಧನೆಗಳನ್ನು ಮೈಗೂಡಿಸಿಕೊಂಡು ಬದುಕಬೇಕು ಎಂಬುದು ಈ ಮತಾಂಧರ ಇಚ್ಛೆಯಾಗಿದೆ. ತಮ್ಮ ಸಹ ನಾಗರಿಕರನ್ನು, ಅವರು ತಮ್ಮ ಧರ್ಮಾನುಯಾಯಿಗಳಲ್ಲ ಎಂಬ ಕಾರಣಕ್ಕಾಗಿ ಹತ್ಯೆ ಮಾಡಬಹುದು ಅಥವಾ ಹತ್ಯೆ ಮಾಡಬೇಕು ಎಂದು ಇಸ್ಲಾಂ ಧರ್ಮ ಬೋಧಿಸಿದೆಯೇ?

ಈ ಹತ್ಯೆಗಳು, ನೆತ್ತರು ಹರಿಸುವಿಕೆ ಇಸ್ಲಾಂ ಧರ್ಮದ ಹುಟ್ಟಿನೊಂದಿಗೇ ಪ್ರಾರಂಭವಾಗಿವೆ. ಪ್ರವಾದಿಗಳು ಅಂದಿನ ತೀರಾ ಅನಾಗರಿಕರಾಗಿದ್ದ ಅರಬರನ್ನು ನಾಗರಿಕರಾಗಿ ಪರಿವರ್ತಿಸಲು, ಆ ಸಮಾಜದಲ್ಲಿ ನಡೆಯುತ್ತಿದ್ದ ಅನ್ಯಾಯ, ಮೋಸ, ವಂಚನೆ, ಮಹಿಳೆಯರ ಮೇಲೆ ನಡೆಯುತ್ತಿದ್ದ ದೌರ್ಜನ್ಯ ಎಲ್ಲವನ್ನೂ ತಡೆಗಟ್ಟಿ ಹೊಸ ಸಮಾಜ ನಿರ್ಮಾಣ ಮಾಡಲು ಪ್ರಯತ್ನಿಸಿದರು. ಅಂದು ಮೆಕ್ಕಾದವರ ಸಂಪ್ರದಾಯಗಳನ್ನು ಅವರು ವಿರೋಧಿಸಿದ್ದಕ್ಕಾಗಿ ಮೆಕ್ಕಾದವರು ಪ್ರವಾದಿಗಳನ್ನು ಮೆಕ್ಕಾ ಬಿಟ್ಟು ಹೋಗುವಂತೆ ಮಾಡಿದರು. ಆಗ ಪ್ರವಾದಿಗಳು ತಮ್ಮ ಅನುಯಾಯಿಗಳನ್ನು ಕರೆದುಕೊಂಡು ಮದೀನಾಕ್ಕೆ ಹೋದರು. ಮದೀನಾದವರು ಪ್ರವಾದಿಗಳನ್ನು ಸ್ವಾಗತಿಸಿದರು. ಆ ಬಳಿಕ ಮದೀನಾ ಪ್ರವಾದಿಗಳ ಕಾರ್ಯಕ್ಷೇತ್ರವಾಯಿತು. ಭಿನ್ನಾಭಿಪ್ರಾಯಗಳು ಪ್ರವಾದಿಗಳನ್ನೂ ಬಿಡಲಿಲ್ಲ. ಮತಾಂಧತೆಯಲ್ಲಿ ಕುರುಡರಾದವರಿಗೆ ನಿಜವಾದ ಬೆಳಕಿನೆಡೆಗೆ ಕಣ್ಣು ತೆರೆಯಲು ಇಂದಿಗೂ ಸಾಧ್ಯವಾಗಲೇ ಇಲ್ಲ.

'ಶಿಯಾಗಳು ಮುಸ್ಲಿಮರಲ್ಲ, ಕಾಫಿರ್‌ಗಳು (ವಿಗ್ರಹಾರಾಧಕರು) ಹಾಗಾಗಿ ಅವರನ್ನು ಹತ್ಯೆ ಮಾಡಬೇಕು' ಎಂದು ಈ ಜನರೆನ್ನುತ್ತಿರುವುದು ತೀರಾ ಪೊಳ್ಳುವಾದವಾಗಿದೆ. 'ನಿರಾಕಾರನಾದ ಏಕದೇವನಲ್ಲಿ ಮತ್ತು ನ್ಯಾಯ ತೀರ್ಮಾನ (day of judgement) ಎಂಬ ಎರಡು ವಿಷಯಗಳಲ್ಲಿ ನಂಬಿಕೆ ಇಟ್ಟವರನ್ನು ಮುಸಲ್ಮಾನನಲ್ಲ ಎಂದು ಹೇಳಲು ಯಾರಿಗೂ ಅಧಿಕಾರವಿಲ್ಲ' ಎಂದು ವಿದ್ವಾಂಸರು ಹೇಳುತ್ತಾರೆ. ಹಾಗೆಯೇ ಇನ್ನೋರ್ವ ಮನುಷ್ಯನನ್ನು ಕೊಲೆ ಮಾಡುವುದೂ ಇಸ್ಲಾಂ ಬೋಧಿಸಿದ ಏಳು ಮಹಾಪಾಪಗಳಲ್ಲಿ ಪ್ರಥಮವಾದುದಾಗಿದೆ. ಹಾಗೆಯೇ ದೇವರಿಂದ ಪ್ರವಾದಿಗಳಿಗೆ, 'ಬೋಧಿಸುವುದು ಮಾತ್ರ ನಿನ್ನ ಕೆಲಸ. ಶಿಕ್ಷೆ ಕೊಡುವ ಅಧಿಕಾರ ನನ್ನದು' ಎಂಬ ಸಂದೇಶವೂ ಬಂದಿದೆ. ಅಂದರೆ ಮನುಷ್ಯನನ್ನು ಕೊಲೆ ಮಾಡಿ ಶಿಕ್ಷಿಸುವ ಅಧಿಕಾರವನ್ನು ದೇವರು ಯಾರಿಗೂ ನೀಡಿಲ್ಲ ಎಂಬುದು ಇದರ ಅರ್ಥ ತಾನೇ?

ಶಿಯಾ ಮತ್ತು ಸುನ್ನಿ ಎಂಬುದು ಇಸ್ಲಾಮಿನ ಎರಡು ಪ್ರಧಾನ ಪಂಗಡಗಳಾಗಿವೆ. ಹುಟ್ಟಿದ ನೂರು ವರ್ಷಗಳೊಳಗೆ



ಬೇರ್ಪಟ್ಟು ಎರಡು ವಿಭಾಗಗಳಾಗದ ಯಾವ ಧರ್ಮವೂ ಇಲ್ಲ ಎನ್ನಲಾಗುತ್ತಿದೆ. ಹಾಗೆಯೇ ಶಿಯಾ ಮತ್ತು ಸುನ್ನಿ ಎಂಬ ಈ ಎರಡು ಪಂಗಡಗಳು ಮಲತಾಯಿ ಮತ್ತು ಮಲಮಗಳ ಜಗಳದಿಂದ ಹುಟ್ಟಿಕೊಂಡಿದೆ ಎಂಬುದಕ್ಕೆ ಒಂದು ವಿವರಣೆ ಇದೆ. ಪ್ರವಾದಿಗಳ ಪ್ರಥಮ ಅನುಯಾಯಿ ಅಬೂಬಕ್ಕರ್ ಸಿದ್ದೀಖ್ ಅವರ ಮಗಳು ಆಯಿಷಾ ಪ್ರವಾದಿಯವರ ಪತ್ನಿಯರಲ್ಲಿ ಪ್ರಮುಖರಾದವರು. ಪ್ರವಾದಿಯವರ ಮಗಳು ಫಾತಿಮ್ಮ ಪ್ರವಾದಿಯವರ ಚಿಕ್ಕಪ್ಪನ ಮಗ ಅಲೀಯವರ ಪತ್ನಿಯಾಗಿದ್ದರು. ಪ್ರವಾದಿಗಳು ಬದುಕಿದ್ದಾಗ ಇವರೆಲ್ಲರೂ ಒಟ್ಟಾಗಿಯೇ ಇದ್ದರೂ ಅವರ ಮರಣಾನಂತರ ಸಮಾಜದ ಮುಖಂಡತ್ವ ಯಾರಿಗೆ ದೊರೆಯಬೇಕೆಂಬ ವಿವಾದ ಪ್ರಾರಂಭವಾಯಿತು. ಈ ಅಧಿಕಾರ ತನ್ನ ತಂದೆಗೆ ದೊರೆಯಬೇಕೆಂದು ಆಯಿಷಾ ವಾದಿಸಿದರೆ ತನ್ನ ಗಂಡನಿಗೆ ದೊರೆಯಬೇಕೆಂದು ಮಗಳು ಫಾತಿಮ್ಮ ವಾದಿಸಿದರು. ಈ ವಿವಾದದಿಂದ ಅಬೂಬಕ್ಕರ್ ಸಿದ್ದೀಖ್ ಅವರ ನಾಯಕತ್ವವನ್ನು ಒಪ್ಪಿಕೊಂಡವರು ಸುನ್ನಿ ಪಂಗಡವೆಂದೂ ಅಲೀಯವರ ನಾಯಕತ್ವವನ್ನು ಒಪ್ಪಿಕೊಂಡವರು ಶಿಯಾಗಳೆಂದೂ ಗುರುತಿಸಲ್ಪಟ್ಟರು. ಆ ಬಳಿಕ ಸುನ್ನಿಗಳಲ್ಲಿ ಶಾಫಿ, ಹನಫಿ, ಹಂಬಲಿ, ಮಾಲಿಕ್ ಎಂಬ ನಾಲ್ಕು ವಿಭಾಗಗಳಾದುವು. ಈಗ ಈ ಪಂಗಡಗಳಲ್ಲೂ ಭಿನ್ನಾಭಿಪ್ರಾಯಗಳಾಗಿ ಮತ್ತೂ ಕೆಲವು ಪಂಗಡಗಳು ಹುಟ್ಟಿಕೊಂಡಿವೆ. ಹಾಗೆಯೇ ಶಿಯಾಗಳಲ್ಲೂ ಬೋಹ್ರಾ, ಇಸ್ಮಾಯಿಲಿಯಾ, ಸಯುದ್‌ನಾ ಮುಂತಾದ ಪಂಗಡಗಳಾಗಿವೆ. ಶಿಯಾ ಪಂಗಡದ ಅಸ್ಗರ್ ಅಲಿ ಇಂಜಿನಿಯರ್, ಸಮಾಜದಲ್ಲಿ ಮೂಢನಂಬಿಕೆ ಹರಡುತ್ತಿದ್ದ ಸಯುದ್‌ನಾ ವಿರುದ್ಧ ಹೋರಾಡಿದವರಾಗಿದ್ದಾರೆ. ಪ್ರವಾದಿಗಳ ಅನುಯಾಯಿಗಳಲ್ಲಿ ಅಬೂಬಕ್ಕರ್ ಸಿದ್ದೀಖ್ ಮಾತ್ರ ಸಹಜವಾಗಿ ಮರಣ ಹೊಂದಿದರು. ತಮ್ಮ ಅಭಿಪ್ರಾಯ ವ್ಯತ್ಯಾಸ ಮತ್ತು ಅಧಿಕಾರದಾಹದಿಂದಾಗಿ ಉಮರ್ ಖತಾಬ್, ಉಸ್ಮಾನ್, ಅಲಿ ಎಲ್ಲರೂ ಹತ್ಯೆಗೊಳಗಾದರು. ಫಾತಿಮ್ಮ ಮತ್ತು ಅಲಿಯವರ ಮಗ ಹುಸೈನ್‌ರರನ್ನೂ ಹತ್ಯೆ ಮಾಡಲಾಯಿತು. ಅಂದಿನಿಂದ ಹರಿಯುತ್ತಿದ್ದ ನೆತ್ತರು ಇಂದಿಗೂ ಹರಿಯುತ್ತಲೇ ಇದೆ.

ಮಧ್ಯ ಪೂರ್ವ ದೇಶಗಳಲ್ಲಿ, ಆಫ್ರಿಕಾದ ಉತ್ತರದ ದೇಶಗಳಲ್ಲಿ ಭಯೋತ್ಪಾದಕ ಸಂಘಟನೆಗಳು ಧರ್ಮದ ಹೆಸರಿನಲ್ಲಿ ಅಮಾಯಕ ಜನರ ಸಾಮೂಹಿಕ ಕೊಲೆಗಳನ್ನು ನಡೆಸುತ್ತಲೇ ಇವೆ. ಐಸಿಸ್ ಎಂಬ ಉಗ್ರರ ಸಂಘಟನೆ ಮಹಿಳೆಯರ ಮೇಲೆ ನಡೆಸುತ್ತಿರುವ ದೌರ್ಜನ್ಯ ವರ್ಣಿಸಲಸಾಧ್ಯವಾಗಿದೆ. 13, 14 ವರ್ಷ ಪ್ರಾಯದ ಹೆಣ್ಣುಮಕ್ಕಳನ್ನು ಬಲವಂತವಾಗಿ ಕೊಂಡೊಯ್ದು ತಮಗೆ ಬೇಕಾದಂತೆ ಉಪಯೋಗಿಸಿ ಆ ಬಳಿಕ ಮಾರುಕಟ್ಟೆಯಲ್ಲಿ ಪ್ರಾಣಿಗಳನ್ನು ಮಾರಾಟ ಮಾಡಿದಂತೆ ಏಲಂ ಕರೆದು ಮಾರಾಟ ಮಾಡುತ್ತಾರೆನ್ನಲಾಗುತ್ತಿದೆ. ಗುಲಾಮ ಪದ್ಧತಿಯಂತೂ ಸಾವಿರಾರು ವರ್ಷಗಳಿಂದಲೂ ನಡೆದುಕೊಂಡು ಬಂದಿದ್ದು ಪ್ರವಾದಿಗಳಿಂದಲೂ ಆ ಪದ್ಧತಿಗೆ ತಡೆಯೊಡ್ಡಲು ಸಾಧ್ಯವಾಗಲಿಲ್ಲ. ಓರ್ವ ಗುಲಾಮನನ್ನು ಬಿಡುಗಡೆಗೊಳಿಸಿದರೆ ಪುಣ್ಯ ದೊರೆಯುತ್ತದೆಂದರಲ್ಲದೆ, ಮನುಷ್ಯರನ್ನು ಮಾರಾಟ ಮಾಡಿದರೆ ಇಷ್ಟು ಶಿಕ್ಷೆ ಇದೆಯೆಂದು ಎಲ್ಲಿಯೂ ಹೇಳಿಲ್ಲ.

ಬಹು ಮುಖ್ಯವಾದ ಇನ್ನೊಂದು ವಿಷಯವನ್ನೂ ನಾವು ಅರ್ಥ ಮಾಡಿಕೊಳ್ಳಬೇಕು. ಪ್ರವಾದಿಗಳ ಮರಣಾನಂತರ ಸುಮಾರು ನೂರು ವರ್ಷಗಳ ಬಳಿಕ ಖುರ್‌ಆನ್ ಬರಹಕ್ಕಿಳಿಯಿತಷ್ಟೆ. ಹೊರತು ಅದಕ್ಕೂ ಮೊದಲು ಜನರು ಬಾಯಲ್ಲೇ ಆ ಶ್ಲೋಕಗಳನ್ನು ಹೇಳಿಕೊಳ್ಳುತ್ತಿದ್ದರು. ಧಾರ್ಮಿಕ ಸಂಹಿತೆ (ಶರಿಯತ್) ಪ್ರವಾದಿಗಳ ಮರಣಾನಂತರ ಸುಮಾರು 150 ವರ್ಷಗಳ ಬಳಿಕವಷ್ಟೆ ರಚಿಸಲ್ಪಟ್ಟಿದೆ ಎಂಬುದು ಹಲವಾರು ವಿದ್ವಾಂಸರ ಅಭಿಪ್ರಾಯವಾಗಿದೆ. ಪ್ರವಾದಿಗಳ ಮರಣವಾಗಿ ಸುಮಾರು 150 ವರ್ಷಗಳ ಬಳಿಕ ರಷ್ಯಾದ ಬುಕಾರಾ ಎಂಬ ಊರಿನಿಂದ ಬುಕಾರಿ ಎಂಬುವರು ಮದೀನಾಕ್ಕೆ ಹೋಗಿ ಅಲ್ಲಿದ್ದ ಜನರೊಡನೆ ಮಾತನಾಡಿದರು. ತಮ್ಮ ಅಜ್ಜನೊ ಮುತ್ತಜ್ಜನೊ ಪ್ರವಾದಿಗಳೊಡನೆ ಮಾತನಾಡಿದ್ದರೆಂದಿದ್ದ ಕೆಲವರ ವಾಕ್ಯಗಳನ್ನು ಬುಕಾರಿ ಅವರು ದಾಖಲಿಸಿಕೊಂಡರು. ಇಂತಹ ದಾಖಲೆಗಳನ್ನು 'ಹದೀಸ್' ಎನ್ನಲಾಗುತ್ತದೆ. ಈ ಹದೀಸ್ ವಾಕ್ಯಗಳನ್ನೂ, ಖುರ್‌ಆನ್ ವಾಕ್ಯಗಳನ್ನೂ, ಪ್ರವಾದಿಗಳ ನಡವಳಿಕೆಗಳನ್ನೂ ಸೇರಿಸಿ 'ಶರಿಯತ್' ಎಂಬ ಧಾರ್ಮಿಕ ಸಂಹಿತೆಯು ರಚಿಸಲ್ಪಟ್ಟಿತು. ನಾಲ್ಕೈದು ತಲೆಮಾರುಗಳ ಬಳಿಕ ಪ್ರವಾದಿಗಳು ಹೇಳಿದ್ದರೆಂದು ಒಬ್ಬರು ಹೇಳಿದರೆ ಆ ಮಾತುಗಳನ್ನು ಕರಾರುವಾಕ್ಕಾಗಿ ನಂಬುವುದು ಹೇಗೆಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ಇಂತಹ 'ಹದೀಸ್'ಗಳನ್ನು ಇನ್ನೂ ಕೆಲವರು ರಚಿಸಿದ್ದರೂ ಬುಕಾರಿ ಹದೀಸ್ ಅತ್ಯಂತ ವಿಶ್ವಾಸಾರ್ಹವೆಂಬುದು ಧರ್ಮಗುರುಗಳ ಅಭಿಪ್ರಾಯವಾಗಿದೆ.

ವಿಶ್ವಾಸಾರ್ಹತೆ ಎಂಬುದು ಅವರವರಿಗೆ ಬಿಟ್ಟ ವಿಚಾರ. ಈ ವಿಶ್ವಾಸವನ್ನು ಪ್ರಶ್ನಿಸುವ ಅಧಿಕಾರ ನಮಗಿಲ್ಲ. ಆದರೆ ಅಮಾಯಕ ನಾಗರಿಕರನ್ನೂ, ಯುವ ಜನರನ್ನೂ, ವಿದ್ಯಾರ್ಥಿಗಳನ್ನೂ ಕ್ರೂರವಾಗಿ ಹತ್ಯೆ ಮಾಡಿ ನೆತ್ತರು ಹರಿಸುವ ಅಧಿಕಾರವನ್ನು ಈ ಜನರಿಗೆ ಕೊಟ್ಟವರು ಯಾರು ಎಂಬುದು ನಮ್ಮ ಪ್ರಶ್ನೆ. ಇನ್ನೋರ್ವನ ಕೊಲೆಯನ್ನು ಮಹಾಪಾಪವೆಂದೇ ಪ್ರವಾದಿಗಳು ಬೋಧಿಸಿರುವಾಗ ಈ ಜನರು ಯಾವ ಧರ್ಮದ ಆಧಾರದಲ್ಲಿ ಈ ಪಾಪದ ಜನರ ರಕ್ತ ಹರಿಸಿ ಅಟ್ಟಹಾಸದಿಂದ ಮೆರೆಯುತ್ತಿದ್ದಾರೆ?

ಈ ಜನರನ್ನು ವಿಮರ್ಶಿಸುವ ಅಥವಾ ಬುದ್ಧಿವಾದ ಹೇಳುವ ಅಧಿಕಾರ ನಮಗಿಲ್ಲ. ಆದರೆ ಅಮಾಯಕರ ರಕ್ತ ಹರಿಸುತ್ತಾ ಆ ತಾಯಂದಿರ ಹಾಗೂ ಕುಟುಂಬದ [illegible] ಮಹಿಳೆಯರನ್ನು [illegible] ನೋಯಿಸುತ್ತಿರುವ ಈ [illegible] ದಯವಿಟ್ಟು ನಿಲ್ಲಿಸಿ ಎಂಬುದು ನಮ್ಮೆಲ್ಲರ [illegible] ಎಂದಷ್ಟೆ ಹೇಳುತ್ತಿದ್ದೇನೆ.

■ ಸಾರಾ ಅಬೂಬಕ್ಕರ್

ನಿಜಾಮ್‌ನ ಆಳ್ವಿಕೆ



ಕೊಟ್ಟ ಮಾತಿಗೆ ತಪ್ಪಿ ನಡೆದರೆ ಮೆಚ್ಚನಾ ಪರಮಾತ್ಮನು. ಹೌದು, ಹೀಗೆಂದ ಪುಣ್ಯಕೋಟಿ ಕಾಡಿಗೆ ಮರಳಿ ಹೋಗಿ 'ಖಂಡವಿದೆಕೋ ಮಾಂಸವಿದೆಕೋ' ಎಂದು ವ್ಯಾಘ್ರನಿಗೆ ಹೇಳಿತು. ಹುಲಿ ಅದನ್ನು ಕೊಲ್ಲಬೇಕಿತ್ತು, ಈ ಹಿಂದೆ ಅದು ಅವೆಷ್ಟೋ ಪ್ರಾಣಿಗಳನ್ನು ಕೊಂದಿತ್ತು, ತಿಂದು ತೇಗಿತ್ತು. ಈಗಲೂ ಅದು ಹೀಗೇ ಮಾಡಬಹುದಿತ್ತು, ಕಾರಣ ದುರ್ಬಲ ಪಶುಪ್ರಾಣಿಗಳನ್ನು ಗುಳುಂ ಮಾಡುವುದು ಅದರ ಧರ್ಮ. ಬಲಿಷ್ಠ ಪ್ರಾಣಿಗಳಿಂದ ಹೇಗಾದರೂ ಮಾಡಿ ತನ್ನನ್ನು ರಕ್ಷಿಸಿಕೊಳ್ಳುವುದು ದುರ್ಬಲ ಪ್ರಾಣಿಯ ಚಾಣಾಕ್ಷತನ. ಆದರೆ ಇಂತಹ ನಿಯತ್ತಿನ ಜೀವಿಯನ್ನು ಕೊಲ್ಲುವುದೆ ಎಂದು ಹುಲಿ ತನ್ನ ದುರ್ನಡತೆ ಬಗ್ಗೆ ಪಶ್ಚಾತ್ತಾಪಪಟ್ಟು ತಾನೇ ಬೆಟ್ಟದಿಂದ ಪ್ರಪಾತಕ್ಕೆ ಹಾರಿಬಿಟ್ಟಿತು. ಈ ಕತೆ ಒಂದು ಆದರ್ಶವನ್ನು ಪ್ರತಿಪಾದಿಸುತ್ತದೆ. ನಾವು ಗೋವಿನ ಹಾಡನ್ನು ಕೇಳುತ್ತಲೇ ಬಂದಿದ್ದೇವೆ. ಆದರ್ಶ ಎಂದೂ ವಾಸ್ತವವಾಗಲಾರದು ಎಂಬ ಬಲವಾದ ನಂಬಿಕೆಯೊಂದಿಗೆ ಆ ಹಾಡನ್ನು ಕೇಳುತ್ತೇವೆಯೆ?

'ಸರ್ವೈವಲ್ ಆಫ್ ದಿ ಫಿಟೆಸ್ಟ್' ಎನ್ನುವುದೇ ಸಾರ್ವತ್ರಿಕ ಸತ್ಯವೆಂದು ನಂಬಿರುವ ಮನುಷ್ಯ ಮಾತ್ರ ಇನ್ನೂ ತನಕ ಆ ಸತ್ಯವನ್ನು ಪಾಲಿಸಿಕೊಂಡು ಬಂದಿದ್ದಾನೆಯೆ? ಆದಕ್ಕೆಂತಲೇ 'ನಾಯಕ' ಎನ್ನುವ ಹಿಂದಿ ಸಿನಿಮಾವನ್ನು ಇಷ್ಟಪಡುವವರನ್ನೆಲ್ಲ ಅಪ್ರಬುದ್ಧರೆನ್ನಲಾಗದು. ಇದು ವಾಸ್ತವವಾದಿ ಚಿತ್ರವಲ್ಲ ಎನ್ನುವುದು ಗೊತ್ತಿದ್ದರೂ ಇಂತಹ ಚಿತ್ರ ನೋಡುವವರಿದ್ದೇ ಇರುತ್ತಾರೆ. ಈ ಚಿತ್ರದಲ್ಲಿ "ಇಲ್ಲ, ಅಧಿಕಾರದ ಗದ್ದುಗೆ ಹೂವಿನ ಹಾಸಿಗೆಯಲ್ಲ ತಮ್ಮಾ. ನೀನು ಒಂದು ದಿನದ ಮಟ್ಟಿಗೆ ಈ ಕುರ್ಚಿಯಲ್ಲಿ ಕುಳಿತುಕೊಂಡಾದರೂ ನೋಡು. ನಿನಗೇ ನನ್ನ ಕಷ್ಟ ಅರ್ಥವಾಗುವುದು" ಎಂದು ಮುಖ್ಯಮಂತ್ರಿ ಪತ್ರಕರ್ತನೊಬ್ಬನಿಗೆ ಸವಾಲು ಹಾಕುತ್ತಾನೆ. ಆಪ್ತರು, ಮಿತ್ರರು, ಸಹೋದ್ಯೋಗಿಗಳನ್ನೊಳಗೊಂಡಂತೆ ಎಲ್ಲರ ಆಗ್ರಹಕ್ಕೆ ಮಣಿದು, ಸಾರಾಸಾರ ಯೋಚನೆ ಮಾಡಿ ಕಡೆಗೂ ಆ ಪತ್ರಕರ್ತ ಅವನ ಸವಾಲನ್ನು ಸ್ವೀಕರಿಸುತ್ತಾನೆ. ಕೊನೆಗೆ ಒಂದು ದಿನದ ಮಟ್ಟಿಗೆ ಮುಖ್ಯಮಂತ್ರಿಯಾಗಿ ಕಾರ್ಯ ನಿರ್ವಹಿಸಲು ಒಪ್ಪುತ್ತಾನೆ. ತನ್ನ ಕಾರ್ಯಕಾಲ ಮುಗಿಯುತ್ತಾಬಂದಂತೆ ದುಷ್ಟ ರಾಜಕಾರಣಿ ಮತ್ತು ಆದರ್ಶವಾದಿ ಮುಖ್ಯಮಂತ್ರಿಯಾಗಿ ಇನ್ನೂ ಕಾರ್ಯನಿರ್ವಹಿಸುತ್ತಿರುವ ಪತ್ರಕರ್ತ ಪರಸ್ಪರ ಮುಖಾಮುಖಿಯಾಗುತ್ತಾರೆ.

ಹಾಲಿ ಮುಖ್ಯಮಂತ್ರಿ ಏಕಾಏಕಿ ಪಿಸ್ತೂಲ್ ಕೈಗೆತ್ತಿಕೊಂಡಿದ್ದನ್ನು ನೋಡಿ ಗಾಬರಿಗೊಂಡ ಮಾಜಿ ಮುಖ್ಯಮಂತ್ರಿ "ಈಗ ನೀನು ನನ್ನ ಮೇಲೆ ಸುಳ್ಳು ಆರೋಪ ಹೊರಿಸುತ್ತಿರುವೆ. ವ್ಯವಸ್ಥೆ ಹದಗೆಟ್ಟಿರುವುದಕ್ಕೆ ನಾನು ಕಾರಣನಲ್ಲ, ನಿನ್ನ ಕೈಯಲ್ಲಿ ಇನ್ನೂ ಅಧಿಕಾರವಿದೆ. ಸದ್ಯ ನಾನು ಅಸಹಾಯಕ. ನೀನು ನನ್ನನ್ನು ಕೊಲ್ಲಬೇಕೆಂದಿದ್ದರೆ ಕೊಲ್ಲು" ಎನ್ನುತ್ತಾನೆ. "ನಾನು ನಿನ್ನನ್ನು ಕೊಲ್ಲುವುದಿಲ್ಲ, ಇಗೋ ಈ ಗುಂಡು ನನಗಾಗಿ" ಎನ್ನುತ್ತಾನೆ. ಧಡಂ ಎನ್ನುವ ಸದ್ದು ಕೇಳಿ ಬರುತ್ತದೆ. ಗುಂಡು ಹಾರಿರುತ್ತದೆ. ಹಾಲಿ ಮುಖ್ಯಮಂತ್ರಿ ಪಿಸ್ತೂಲನ್ನು ಮಾಜಿ ಮುಖ್ಯಮಂತ್ರಿಯತ್ತ ಎಸೆಯುತ್ತಾನೆ. ಭದ್ರತಾ ಸಿಬ್ಬಂದಿಗೆ ಕೂಗುತ್ತಾನೆ. ಭದ್ರತಾ ಸಿಬ್ಬಂದಿ ಆ ದುಷ್ಟ ರಾಜಕಾರಣಿಯ ಕೈಯಲ್ಲಿ ಪಿಸ್ತೂಲು ಕಂಡವರೇ ಅವನ ಮೇಲೆ ಗುಂಡಿನ ಮಳೆಗರೆಯುತ್ತಾರೆ. ಹಾಲಿ ಮುಖ್ಯಮಂತ್ರಿ ಪಿಸ್ತೂಲಿನಿಂದ ಉದ್ದೇಶಪೂರ್ವಕವಾಗಿ ತನ್ನ ಭುಜವನ್ನು ಗಾಯಗೊಳಿಸಿಕೊಂಡಿರುತ್ತಾನೆ. ತನ್ನ ಆಪ್ತ ಕಾರ್ಯದರ್ಶಿಗೆ "ಕೊನೆಗೂ ನೀವೆಲ್ಲ ಸೇರಿಕೊಂಡು ನನ್ನನ್ನು ರಾಜಕಾರಣಿಯನ್ನಾಗಿ ಮಾಡಿಬಿಟ್ಟಿರಿ" ಎನ್ನುತ್ತಾನೆ. ಅಧಿಕಾರ ಸೂತ್ರವನ್ನು ಮಾಜಿ ಮುಖ್ಯಮಂತ್ರಿಗೆ ವಹಿಸಿಕೊಡದೆ ಅವನನ್ನು ಉಪಾಯವಾಗಿ ಕೊಲ್ಲಿಸುತ್ತಾನೆ. ಆದರ್ಶ ವಾಸ್ತವವಲ್ಲ, ಅದು ಅಷ್ಟಿಷ್ಟು ವಾಸ್ತವವಾಗಬಲ್ಲದಾದರೂ ಕೆಲ ಮಟ್ಟಿಗೆ ಆದರ್ಶಗಳೊಡನೆ ರಾಜಿ ಮಾಡಿಕೊಳ್ಳುವುದು ಅನಿವಾರ್ಯ ಎನ್ನುವುದನ್ನು ಈ ಹಿಂದಿ ಸಿನಿಮಾ ಹೇಳಬಯಸುತ್ತಿದೆಯೇನೋ.

ಒಂದು ದಿನದ ಮಟ್ಟಿಗೆ ಮುಖ್ಯಮಂತ್ರಿಯಾಗುವುದು, ಅಧಿಕಾರ ವಹಿಸಿಕೊಂಡ ಮೇಲೆ ನಿಜಜೀವನದಲ್ಲಿ ಅಸಾಧ್ಯವಾದದ್ದೆಲ್ಲ ಸಿನಿಮಾದಲ್ಲಿ ಸಾಧ್ಯವಾಗುತ್ತದೆ. ಬಹುತೇಕ ಸಿನಿಮಾಗಳಲ್ಲಿ ಪವಾಡ ಸದೃಶ ಕಾರ್ಯಗಳು ಜರುಗುತ್ತವೆ. ಅದೇನೇ ಇರಲಿ ನಿಜಜೀವನದಲ್ಲಿ ಒಬ್ಬ ವ್ಯಕ್ತಿ ಒಂದು ದಿನದವಟ್ಟಿಗೆ ಮುಖ್ಯ ಮಂತ್ರಿಯಾಗುವುದನ್ನೇ ಕಲ್ಪಿಸಿಕೊಳ್ಳಲಾಗುವುದಿಲ್ಲ, ಅಲ್ಲವೆ? ಅರ್ಧ ದಿನ ಆಳಿದವನು ಏನು ಮಾಡಿದ? ಹಾಗೆ ಮಾಡಿದ್ದು ಸಹಜವೇ? ಈ ಕುರಿತಂತೆ ಒಮ್ಮೆ ನಾವು ನಮ್ಮ ಇತಿಹಾಸದ ಪುಟಗಳನ್ನು ತಿರುವಿ ಹಾಕಬಹುದು.

ಅರ್ಧ ದಿನ ಆಳ್ವಿಕೆ ಮಾಡಿದ ನಿಜಾಮ್

ಆಫ್ಘಾನ್ ಅರಸ ಶೇರ್‌ಶಾಹ್‌ನ ಬಲಾಢ್ಯ ಸೈನ್ಯ ಮೊಗಲ್ ದೊರೆ ಹುಮಾಯೂನ್‌ನ ಮೇಲೆ ಹಠಾತ್ತನೇ ದಾಳಿ ಮಾಡಿತ್ತು, ಮೊಗಲ್ ಸೈನ್ಯ ನಿಜಕ್ಕೂ ಧೃತಿಗೆಟ್ಟಿತು. ಇತಿಹಾಸದಲ್ಲಿ ಬನಾರಸ್ ಬಳಿಯ ಚೌಸಾ ಘೋರ ಕದನಕ್ಕೆ ಸಾಕ್ಷಿಯಾಗಬಹುದಿತ್ತು, ಆದರೆ ಹುಮಾಯೂನ್‌ನನ್ನು ಪದಚ್ಯುತಗೊಳಿಸಿ ಪಟ್ಟಕ್ಕೆ ಬರಬೇಕೆಂದು ಹೊಂಚು ಹಾಕಿದ್ದ ಅವನ ಸೋದರರಾಗಿದ್ದ ಕಾಮ್ರಾನ್ ಮತ್ತು ಹಿಂದಾಲ್ ವೈರಿಯ ಜೊತೆ ಶಾಮೀಲಾಗಿದ್ದರು. ಹುಮಾಯೂನ್‌ನ ಸೈನಿಕರು ಹಣಾಹಣಿಗಿಳಿಯುವ ಮುನ್ನವೇ ಸೋಲೊಪ್ಪಿಕೊಂಡುಬಿಟ್ಟಿದ್ದರು. ರಣಾಂಗಣದಿಂದ ದಿಕ್ಪಾಪಾಲಾಗಿ ಓಡಿ ಆತ್ಮರಕ್ಷಣೆಗಾಗಿ ಪರದಾಡಿದರು. ಶೇರ್‌ಶಾಹ್ ವೈರಿ ಸೈನಿಕರು ಪಾರಾಗಿ ಹೋಗದಂತೆ ಎಲ್ಲ ದಾರಿಗಳನ್ನು ಬಂದ್ ಮಾಡಿಸಿಬಿಟ್ಟ. ಗಂಗಾ ನದಿ ದಡದ ಎಲ್ಲ ನೌಕೆಗಳು ಮಟಾಮಾಯವಾಗಿ ಬಿಟ್ಟಿದ್ದವು.

ಮೊಗಲ್ ಸೈನಿಕರು ನಾಮುಂದೆ ತಾಮುಂದೆ ಎಂದು ಗಂಗಾನದಿಗೆ ಹಾರತೊಡಗಿದರು. ಸುಮಾರು ಏಳೆಂಟು ಸಾವಿರ ಸೈನಿಕರು ನೀರುಪಾಲಾದರು. ಹುಮಾಯೂನ್ ಕುದುರೆ ಹತ್ತಿ ನದಿ ದಡದಗುಂಟ ನಾಗಾಲೋಟದಲ್ಲಿ ಸಾಗಿದ್ದ, ಆದರೆ ಇದ್ದಕ್ಕಿದ್ದಂತೆ ಕುದುರೆ ಕುಸಿದು ನದಿಗೆ ಬಿದ್ದ ಮೇಲೆ ದಡ ಸೇರದಾಯಿತು. ಹುಮಾಯೂನ್ ಸಹ ಮುಳುಗಿಯೇ ಹೋಗುವುದರಲ್ಲಿದ್ದ, ಅಷ್ಟರಲ್ಲಿ ಜನರಿಗೆ ಚರ್ಮದಲ್ಲಿ ನೀರು ಸರಬರಾಜು ಮಾಡುವ ಕೆಳಜಾತಿಗೆ ಸೇರಿದ್ದ ವ್ಯಕ್ತಿಯೊಬ್ಬ ಜನಾನುರಾಗಿ ದೊರೆ ಸಾವಿನ ದವಡೆಗೆ ತುತ್ತಾಗುತ್ತಿದ್ದಾನೆ ಎಂದು ತನ್ನ ಪ್ರಾಣವನ್ನೇ ಪಣಕ್ಕಿಟ್ಟು ತನ್ನ ಬಳಿಯಿದ್ದ ಚರ್ಮದ ಚೀಲವನ್ನೇ ಆಧಾರವಾಗಿಸಿಕೊಂಡು ಅವನನ್ನು ಆಚೆ ದಡ ತಲುಪಿಸಿದ.

"ಯಾರು ನೀನು? ನಿನ್ನ ಹೆಸರೇನು?" ಎಂದು ಹುಮಾಯೂನ್ ಕೇಳಿದ.

"ನನ್ನ ಹೆಸರು ನಿಜಾಮ್" ಎಂದು ಆ ವ್ಯಕ್ತಿ ಉತ್ತರಿಸಿತು.

"ಏನು? ನಿಜಾಮ್? ನಿಜಾಮುದ್ದೀನ್ ಔಲಿಯಾ ಅವರೇ?" ಅರಸನಿಗೆ ದಂಗುಬಡಿದಂತಾಯಿತು.

"ಇಲ್ಲ, ಜಹಾಂಪನಾಹ್, ನಾನೊಬ್ಬ ಭಿಶ್ತಿ ಎನ್ನುವ ಕೆಳಜಾತಿಗೆ ಸೇರಿದ ತಮ್ಮ ನಮ್ರ ಸೇವಕ."

ಆದರೆ ಅರಸನಿಗೆ ನಂಬಲಾಗಲಿಲ್ಲ, ತನ್ನನ್ನು ಸಾವಿನ ದವಡೆಯಿಂದ ಪಾರು ಮಾಡಿದ ಆ ವ್ಯಕ್ತಿ ಸಾಮಾನ್ಯ ವ್ಯಕ್ತಿ ಅಲ್ಲವೇ ಅಲ್ಲ ಎಂದು ದೊರೆ ನಿಜಾಮ್‌ನೆದುರು ತಲೆಬಾಗಿದ. ಆದರೆ ದೊರೆ ತನ್ನಂಥ ಸಾಮಾನ್ಯನಿಗೆ ತಲೆಬಾಗುವುದೆ? ವಾಸ್ತವದಲ್ಲಿ ನಿಜಾಮ್‌ನಿಗೆ ಅದು ಬಲು ಮುಜುಗರದ ಪ್ರಸಂಗವೆನಿಸಿತು. ಕೊನೆಗೆ ಅಲ್ಲಾಹ್‌ನ ಮೇಲೆ ಆಣೆ ಮಾಡಿ ತಾನೊಬ್ಬ ತೀರ ಸಾಮಾನ್ಯ ವ್ಯಕ್ತಿಯಾಗಿದ್ದು ತನ್ನ ದೊರೆಯನ್ನು ರಕ್ಷಿಸಿ ತನ್ನ ಕರ್ತವ್ಯ ನಿಭಾಯಿಸಿರುವುದಾಗಿ ಆತ ಹೇಳಿದ.




ಧರ್ಮನಿಷ್ಠೆ, ದೈವಭೀರು ಹುಮಾಯೂನ್ ತನ್ನ ಸೋದರರೇ ತನ್ನ ಜೀವದ ವೈರಿಗಳಾಗಿದ್ದರೂ ಅವರನ್ನು ಕ್ಷಮಿಸಿ ಬಿಟ್ಟಿದ್ದ. ತನ್ನ ಸೋದರರ ರಕ್ಷಣೆ ಜವಾಬ್ದಾರಿ ತನ್ನದೆಂದು ತಂದೆಗೆ ಕೊಟ್ಟ ಮಾತನ್ನು ಪಾಲಿಸುವುದು ತನ್ನ ಕರ್ತವ್ಯವೆಂದು ಅವನು ಬಲವಾಗಿ ನಂಬಿದ್ದ. ಈಗ ಒಬ್ಬ ಸಾಮಾನ್ಯ ಪ್ರಜೆ ತನಗೆ ಪುನರ್ಜನ್ಮ ನೀಡಿದ್ದ. ಅವನಿಗೆ ತಾನು ಚಿರಋಣಿಯಾಗಿರುವುದಾಗಿ ಹೇಳಿದ. ಅಷ್ಟೇ ಅಲ್ಲ "ನಾನು ಮತ್ತೆ ಪಟ್ಟಕ್ಕೆ ಬಂದರೆ ಅರ್ಧ ದಿನದಮಟ್ಟಿಗೆ ನಿನಗೆ ನನ್ನ ಸಿಂಹಾಸನ ಬಿಟ್ಟು ಕೊಡುವೆ" ಎಂದು ಜಹಾಂಪನಾಹ್ ಅವನಿಗೆ ಮಾತು ಕೊಟ್ಟ. ಈ ದೊರೆ ಹುಚ್ಚನೆ? ಅವನ ಮಾತು ಕೇಳಿದ ಆ ಕೆಳಜಾತಿಯ ಸಾಮಾನ್ಯ ಪ್ರಜೆ ದಿಙ್ಮೂಢನಾದ.

ಹುಮಾಯೂನ್ ಮತ್ತೆ ಪಟ್ಟಕ್ಕೆ ಬಂದ. ನಿಜಾಮ್‌ನನ್ನು ಆಗ್ರಾಕ್ಕೆ ಕರೆಯಿಸಿಕೊಂಡ. ನಿಜಾಮ್‌ನನ್ನು ಪ್ರೀತಿಯಿಂದ ಬರಮಾಡಿಕೊಂಡ. ದ್ವಾರಪಾಲಕರು ಅರಮನೆಯೊಳಕ್ಕೆ ಪ್ರವೇಶಿಸತೊಡಗಿದ್ದ ನಿಜಾಮ್‌ನನ್ನು ತಡೆದರು. "ಯಾರು ನೀನು? ಇಲ್ಲಿ ನಿನಗೇನು ಕೆಲಸ?" ಎಂದು ಕೇಳಿದರು. ಅವನು ಅಂಜದೆ ಅಳುಕದೆ "ನಾನು ನಿಜಾಮ್. ಸದ್ಯ ಮೊಗಲ್ ಅರಸ" ಎಂದು ಅರಸನ ಗತ್ತಿನಲ್ಲೇ ಹೇಳಿದ. ದ್ವಾರಪಾಲಕರು ಮತ್ತು ಅಲ್ಲಿ ನೆರೆದವರೆಲ್ಲ ಗೊಳ್ಳೆಂದು ನಕ್ಕರು. "ನಿಮ್ಮ ಜಹಾಂಪನಾಹ್ ಎದುರು ಹೀಗೆ ವರ್ತಿಸುವುದು ತರವಲ್ಲ, ಇದರ ಪರಿಣಾಮ ನೆಟ್ಟಗಾಗಲಿಕ್ಕಿಲ್ಲ" ಎಂದು ನಿಜಾಮ್ ಅವರಿಗೆ ಎಚ್ಚರಿಸಿದ.

"ನೀನೊಬ್ಬ ಹುಚ್ಚ, ಹುಚ್ಚನನ್ನು ಈಗ ನಾವು ಆಚೆ ಅಟ್ಟಬಿಡಬೇಕಾದದ್ದು ನಮ್ಮ ಕರ್ತವ್ಯ" ಎಂದ ಅವರು ತಮ್ಮ ಕಾರ್ಯಾಚರಣೆಗೆ ಮುಂದಾದರು. ಈ ಗಲಾಟೆಯಿಂದ ಮೇಲಧಿಕಾರಿ ವಿಚಾರಣೆಗೆ ಮುಂದಾದ. ಅವನು ತನ್ನ

ಮನದಾಳದ್ದಲ್ಲದ ಮನ್ ಕಿ ಬಾತ್

ನರೇಂದ್ರ ಮೋದಿಗೂ ನೇರಾನೇರ ಸಂವಾದಕ್ಕೂ ಒಂದು ರೀತಿಯ ಎಣ್ಣೆಸೀಗೇಕಾಯಿ ಸಂಬಂಧ ಇರುವುದನ್ನು ನೀವು ಗಮನಿಸಿರಬಹುದು. ಆದುದರಿಂದಲೆ ಅನಾನುಕೂಲ ಪ್ರಶ್ನೆಗಳ ಪತ್ರಿಕಾ ಸಂದರ್ಶನಗಳೆಂದರೆ ಆತನಿಗೆ ಅಲರ್ಜಿ. ವಿದೇಶ ಪ್ರವಾಸದ ವೇಳೆ ಪತ್ರಕರ್ತರನ್ನು ಜೊತೆಗೊಯ್ಯದಿರಲು ಮುಖ್ಯ ಕಾರಣವೆ ಇದು. ಕರಣ್ ಥಾಪರ್ ಸಂದರ್ಶನದಲ್ಲಿ ಆರಂಭದ ಒಂದೆರಡು ಪ್ರಶ್ನೆಗಳೇ ಬೆವರಿಳಿಸಿ ಗಂಟಲೊಣಗಿಸಿದಾಗ ಅಲ್ಲಿಂದೆದ್ದು ಪಲಾಯನ ಮಾಡಿದುದನ್ನು ಯಾರಿಗಾದರೂ ಮರೆಯಲು ಸಾಧ್ಯವೇ? ಅದೇ ಕೊನೆ, ಆ ದಿನದಿಂದ ಆತ ಕೆದಕುವ ಪ್ರಶ್ನೆಗಳನ್ನು ನಿರೀಕ್ಷಿಸಬಹುದಾದ ಸಂದರ್ಶನಗಳನ್ನು ತಪ್ಪಿಸುತ್ತಾ ಬಂದಿದ್ದಾನೆ. ಮಾಧ್ಯಮವನ್ನು ನಿಭಾಯಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳುವ ಮೂಲಕ ಮುಂದೆಂದೂ ಅಂತಹ ಮುಜುಗರದ ಪರಿಸ್ಥಿತಿ ಬರದಂತೆ ನೋಡಿಕೊಂಡಿದ್ದಾನೆ. ಇತ್ತೀಚೆಗೆ ಫ್ರಾನ್ಸ್ ಭೇಟಿಯ ಸಂದರ್ಭದಲ್ಲಿ ಸ್ಥಳೀಯ **Le Monde** ಪತ್ರಿಕೆ ಒಂದು ಸಂದರ್ಶನಕ್ಕಾಗಿ ಕೋರಿಕೆ ಮಾಡಿಕೊಂಡಿತ್ತು, ಆದರೆ 'ಮೌಖಿಕ ಸಂದರ್ಶನ ಸಾಧ್ಯವಿಲ್ಲ, ನಿಮ್ಮ ಪ್ರಶ್ನೆಗಳನ್ನು ಮೊದಲೇ ಕಳುಹಿಸಿ. ನಾವು ಕೊಡುವ ಲಿಖಿತ ಉತ್ತರಗಳನ್ನಷ್ಟೆ ಪ್ರಕಟಿಸಿ' ಎಂಬ ಶರತ್ತು ವಿಧಿಸಿದಾಗ ಆದನ್ನೊಪ್ಪದ ಪತ್ರಿಕೆ ಸಂದರ್ಶನವನ್ನೇ ರದ್ದುಗೊಳಿಸಿದ ಘಟನೆ ನಡೆದಿದೆ. ಮೋದಿಯ ಉತ್ತರಿಸಲಾಗದ ವಿಷಯಗಳ ಪಟ್ಟಿ ಸಾಕಷ್ಟು ದೀರ್ಘವಾಗಿದ್ದು ಅದರಲ್ಲಿ ಗುಜರಾತ್ ನರಮೇಧ, ಪತ್ನಿ ಜಶೋದಾಬೆನ್, ಬೇಹುಗಾರಿಕೆಗೆ ಒಳಪಡಿಸಿದ ಯುವತಿ, ನಕಲಿ ಡಿಗ್ರಿಯ ಸಚಿವೆ ಮತ್ತು ಇತ್ತೀಚಿನ ಲಮೋ ಪ್ರಕರಣ, ವ್ಯಾಪಂ ಗೋಲ್‌ಮಾಲ್, ಅಕ್ಕಿ ಹಗರಣ, ಚಿಕ್ಕಿ ಹಗರಣ ಇತ್ಯಾದಿಗಳು ಸೇರಿವೆ. ಹಾಗಾಗಿ ಆತ ಒಂದೂ ಸಿದ್ಧ ಪ್ರಶ್ನೋತ್ತರಗಳ ಮೂಲಕ ತನಗೆ ಅನುಕೂಲಕರವಿರುವ ಸಂದರ್ಶನಗಳನ್ನಷ್ಟೆ ನೀಡುತ್ತಿದ್ದಾನೆ ಅಥವಾ ಭಾಷಣ ಅಥವಾ ಮನ್ ಕಿ ಬಾತ್ (ಮಕಿಬಾ) ಮೂಲಕ ತನ್ನ ಏಕಾಲಾಪ ಮಾಡುತ್ತಿರುತ್ತಾನೆ. ಎಲ್ಲರೂ ತಾನು ಹೇಳುವುದನ್ನಷ್ಟೆ ಆಲಿಸಬೇಕು ಎಂಬ ಸರ್ವಾಧಿಕಾರಿ ಪ್ರವೃತ್ತಿಯ ಭಾಗವಾಗಿ ಪ್ರಚಾರದ ಉದ್ದೇಶದಿಂದ ಆರಂಭಿಸಿರುವ ಮಕಿಬಾ ಒಂದು ಒಮ್ಮಾರ್ಗದ ವಾಗ್ಝರಿ ಹೊರತು ಬೇರೇನೂ ಅಲ್ಲ, ಅದರಲ್ಲಿ ಭಾರತದ ಬಹುಸಂಸ್ಕೃತಿ ಬಗ್ಗೆ, ಅದಕ್ಕೆದುರಾಗಿರುವ ಅಪಾಯಗಳ ಬಗ್ಗೆ, ಬಡವ, ಶ್ರೀಮಂತರ ನಡುವಿನ ಅಂತರ ಹೆಚ್ಚುತ್ತಿರುವ ಬಗ್ಗೆ ಏನಾದರೂ ಕೇಳಿಬಂದಿದೆಯೇ? ವಾಸ್ತವದಲ್ಲಿ ಮಕಿಬಾ ಎಂಬ ಈ ಗಿಮಿಕ್‌ನಲ್ಲಿರುವುದು



ಕೇವಲ ಮೇಲುಮೇಲಿನ ಮಾತುಗಳಷ್ಟೆ, ಹೊರತು, ಮನದಾಳದಿಂದ ಬರುವ ಪ್ರಾಮಾಣಿಕ ನುಡಿ ಅಲ್ಲ.

ಇವತ್ತು ಪ್ರೇಕ್ಷಕರನ್ನು ಸಮ್ಮೋಹನಕ್ಕೊಳಪಡಿಸಿ, ಅವರ ವಿಶ್ವಾಸವನ್ನು ಗೆಲ್ಲುವಂತಹ ಮಾತುಗಳನ್ನಾಡುವಲ್ಲಿ ದೇಶದಲ್ಲೇ ನಂಬರ್ ಒನ್ ಅನಿಸಿರುವ ಮೋದಿ ಕಳೆದೊಂದು ವರ್ಷದ ಅವಧಿಯಲ್ಲಿ ಮಕಿಬಾ ಮೂಲಕ ಹಲವಾರು ಕಲ್ಪನಾಲೋಕದ ವಿಲಾಸಗಳನ್ನು ಹರಿಯಬಿಟ್ಟಿದ್ದಾನೆ. ಆದರೆ ಸಮಸ್ಯೆಗಳು, ವಿವಾದಗಳು ಇರುವ ಸಂದರ್ಭಗಳಲ್ಲಿ ತಮಾಷೆಯ ಮಾತುಗಳನ್ನಾಡುತ್ತಾನೆ. ಮಕಿಬಾದ ಇತ್ತೀಚಿನ ಕಂತಿನ ಕೊನೆಯಲ್ಲಿ ಆತ ಇಂತಹ ಕಾರ್ಯಕ್ರಮಗಳಲ್ಲಿ ತಾನು ಬೃಹತ್ ಯೋಜನೆಗಳ ಬಗ್ಗೆ ಮಾತನಾಡುವುದಿಲ್ಲ ಎಂದಿದ್ದಾನೆ. ಕಾರಣವೇನೆಂದರೆ ಅಲ್ಲಿ ಗಂಭೀರ ವಿಚಾರಗಳು ಬೇಡವಂತೆ. ಅಲ್ಲಿ ಹುಳಿ, ಸಿಹಿ ಮಿಶ್ರಿತ ಹಗುರವಾದ, ಖುಷಿಯ ಮಾತುಗಳಿದ್ದರೆ ಸಾಕಂತೆ. ಇದರರ್ಥ ಮಕಿಬಾ ಕಾರ್ಯಕ್ರಮಕ್ಕೆ ಲಕ್ಷಾಂತರ ರೂಪಾಯಿ ಖರ್ಚು ಮಾಡುತ್ತಿರುವುದು ಮೋದಿಯ ವೈಯಕ್ತಿಕ ಖುಷಿಗೋಸ್ಕರ ಎಂದಾಯಿತು. ಮಕಿಬಾದ ಇದುವರೆಗಿನ ಕಂತುಗಳನ್ನು ನೋಡಿದಾಗ ಬಹಳ ಸ್ಪಷ್ಟವಾಗಿ ಗೋಚರಿಸುವುದೇನೆಂದರೆ ಮೋದಿ ತನಗೆ ಬೇಕೆನಿಸಿದಾಗೆಲ್ಲ ಗಂಭೀರ ವಿಷಯಗಳನ್ನು ಎತ್ತಿಯೇಎತ್ತಿದ್ದಾನೆ. ಸರ್ಕಾರದ ನಡೆಯ ಬಗ್ಗೆ ಟೀಕೆಗಳಿದ್ದಾಗ ಅಥವಾ ಬಿಜೆಪಿ ದಿಲ್ಲಿ ಚುನಾವಣೆಗಳಲ್ಲಿ ಸೋತಾಗ ಹಗುರ ವಿಷಯಗಳ ಬಗ್ಗೆ ಮಾತಾಡಿದ್ದಾನೆ:

ಮಕಿಬಾ 1 (ಉದ್ಘಾಟನಾ ಕಾರ್ಯಕ್ರಮ): ಖಾದಿ ಮತ್ತು ಸ್ವಚ್ಛ ಭಾರತ ಅಭಿಯಾನ

ಮಕಿಬಾ 2: ಕಪ್ಪುಹಣ

ಮಕಿಬಾ 3: ಮಾದಕವಸ್ತು ಮುಕ್ತ ಭಾರತ

ಮಕಿಬಾ 4: ತಾನು ಅಮೆರಿಕ ದೇಶದ ಅಧ್ಯಕ್ಷನಿಗೆ ಸಮಾನ ಎಂದು ತೋರಿಸಿಕೊಳ್ಳಲು ಆತನನ್ನು ಬರಾಕ್ ಎಂದು ಸಂಬೋಧಿಸಿದ್ದಾನೆ.


ಮಕಿಬಾ 5: ತಾನು ಪರೀಕ್ಷೆಗಳ ಒತ್ತಡಕ್ಕೆ ಸಿಲುಕಿದ್ದ ಬಗ್ಗೆ ಮಾತನಾಡಿದವನು ಶಾಲಾ ಶಿಕ್ಷಣದ ಹೊರೆಯನ್ನು ತಗ್ಗಿಸುವ ಕುರಿತು ಏನೂ ಹೇಳಲಿಲ್ಲ.

ಮಕಿಬಾ 6: ತನ್ನ ನೂತನ ಭೂಸ್ವಾಧೀನ ಮಸೂದೆಯನ್ನು ಬೆಂಬಲಿಸುವಂತೆ ಕೋರಿದ್ದಾನೆ.

ಮಕಿಬಾ 7: ನೇಪಾಳ ದುರಂತದ ಬಗ್ಗೆ ನಾಟಕೀಯ ಮಾತುಗಳ ನಂತರ ಡಾ। ಅಂಬೇಡ್ಕರ್ ಬಗ್ಗೆ ಮಾತನಾಡಿದ್ದಾನೆ.

ಮಕಿಬಾ 8: ಕಳೆದ ಒಂದು ವರ್ಷದಲ್ಲಿ ತನ್ನ ಸರ್ಕಾರ ಮಾಡಿರುವ "ಸಾಧನೆ"ಗಳನ್ನು ಪಟ್ಟಿಮಾಡಿದ್ದಾನೆ. ಕೊನೆಯಲ್ಲಿ ರಜಾದಿನಗಳನ್ನು ಚೆನ್ನಾಗಿ ಕಳೆಯಿರಿ, ಚಿತ್ರಗಳನ್ನು ಟ್ವೀಟಿಸಿರೆಂದು ಕೇಳುಗರಿಗೆ ಉಪದೇಶಿಸಿದ್ದಾನೆ.

ಮೋದಿ ಸರ್ಕಾರದ ಒಂದು ವರ್ಷದ ಬಗ್ಗೆ



ನಿಷ್ಪಕ್ಷಪಾತೀಯ ವಿಶ್ಲೇಷಕರ ಅಭಿಪ್ರಾಯ ಏನೆಂದ ಸಾಧನೆಗಳನ್ನು ಅತಿಯಾಗಿ ರಂಜಿಸಲಾಗಿದೆ ಮತ ಸವಾಲುಗಳನ್ನು ತೇಲಿಸಿಬಿಡಲಾಗಿದೆ. ನಮೋ ಭಕ್ತರಿಗಂತು ಮೋದಿ ಸರ್ಕಾರದ "ಸಾಧನೆ"ಗಳನ್ನು ಕೊಂಡಾಡ ವಿಧಿಯಿಲ್ಲ, ಆದರೆ ಕೆಲವು ಬಾಲಬಡುಕ ಮಾಧ್ಯಮಗಳ ಕೂಡ "ಭರ್ಜರಿ ಬ್ಯಾಟಿಂಗ್" ಎಂದು ಬಣ್ಣಿಸು ಮಟ್ಟಕ್ಕಿಳಿದಿರುವುದು ಮಾತ್ರ ತೀರ ದುರದೃಷ್ಟಕರ.

ವಿಶ್ವ ನಾಯಕರೊಂದಿಗೆ ಸೆಲ್ಫೀ ಕ್ಲಿಕ್ಕಿಸುವ ಮೋ ತಾನೂ ಒಬ್ಬ ದೊಡ್ಡ ವಿಶ್ವ ಮಟ್ಟದ ರಾಜಕಾರಣಿಯೆಂ ಭ್ರಮೆಯಲ್ಲಿ ತೇಲಾಡುತ್ತಿದ್ದಾನೆ. ಮೊದಲು ಆತ ನೆಲಕ್ಕಿಳಿ ಅಂತಾರಾಷ್ಟ್ರೀಯ ಮಟ್ಟದ ರಾಜಕಾರಣಿಯಾಗಲು ಬೇಕಾ ಅರ್ಹತೆಗಳ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳುವು ಒಳಿತು. ಮಗಳ ಜೊತೆ ಸೆಲ್ಫೀ ತೆಗೆದು ಕಳುಹಿಸಿ ಎಂ

ಹುಮಾಯೂನ್‌ಗೆ ನಿಜಾಮ್‌ನ ಆಗಮನದ ಕುರಿತು ಸಂದೇಶ
ದ.

ಕ್ಷಣ ನಿಜಾಮ್‌ನನ್ನು ಬರಮಾಡಿಕೊಳ್ಳಲು ಸ್ವತಃ ಹುಮಾಯೂನ್ ಮನೆಯ ಮಹಾದ್ವಾರದೆಡೆ ಧಾವಿಸಿದ. ನಿಜಾಮ್‌ನನ್ನು ಗೌರವಾದರದೊಂದಿಗೆ ಗ ಕರೆದೊಯ್ದು, ತಾನು ಕೊಟ್ಟ ಮಾತಿನಂತೆ ಅವನನ್ನು ಸಿಂಹಾಸನದ ಲೆ ಕೂರಿಸಿದ. ನಿಜಾಮ್‌ನೇನೂ ನಾಮ್ ಕಾ ವಾಸ್ತೆ ಅರಸನಾಗಿರಲಿಲ್ಲ, ದಿನದ ಮಟ್ಟಿಗೆ ನಿಜಾಮ್ ಮೊಗಲ್ ದೊರೆಯಾಗಿ ಹಲವಾರು ಆಜ್ಞೆ ಹೊರಡಿಸಿದ. ತನ್ನ ಅರ್ಧ ದಿನದ ಆಳ್ವಿಕೆಯಲ್ಲಿ ಅವನು ತನ್ನ ಸಮುದಾಯದವರಿಗೆ ಬಾಸ್ತಿ, ಮನೆ, ಜಮೀನು ಇತ್ಯಾದಿ ಧಾರಾಳವಾಗಿ ಕೊಡಮಾಡಿದ. ಆದರೆ ಕಾರ್ಯಕಾಲ ಮುಗಿದೊಡನೆ ಅಧಿಕಾರದಲ್ಲಿ ಮುಂದುವರಿಯದೆ ಗದ್ದುಗೆಯಿಂದ ದ. ತನ್ನ ಆಳ್ವಿಕೆ ಮುಗಿಸಿ ತನ್ನ ಊರು ಸೇರಿ ತನ್ನ ವೃತ್ತಿಯನ್ನು ಮುಂದುವರಿಸಿದ. ಊರ ಜನರಿಗೆ ನಿತ್ಯವೂ ನೀರು ಸರಬರಾಜು ಮಾಡುವುದನ್ನು ತ ಎಂದೂ ಮರೆಯಲಿಲ್ಲ.

ಅರಸ ಸಹ ಮಾನವೀಯತೆ ಮೆರೆಯಬಲ್ಲ, ಸಾಮಾನ್ಯ ಪ್ರಜೆ ನಿಜಾಮ್ ನಿಗೆ ನಿಜಾಮುದ್ದೀನ್ ಔಲಿಯಾ (ಪ್ರಸಿದ್ಧ ಸೂಫಿ ಸಂತ) ಆಗಿ ಕಾಣಬಲ್ಲ ವುದು ಈ ಪ್ರಸಂಗದಿಂದ ಸ್ಪಷ್ಟಗೊಂಡಿತ್ತು. ಅರಸ ವಚನಭ್ರಷ್ಟನಾಗಲಿಲ್ಲ, ಗೆ ಅಧಿಕಾರದ ಅಮಲೇರಲಿಲ್ಲ. ಇದಕ್ಕೇನೆನ್ನಬೇಕು? ನಿಯಮವೆಂದ ಲೆ ಅದಕ್ಕೆ ಅಪವಾದವೂ ಇರುವುದು ಸಹಜ ಎಂದು ಈ ಪ್ರಸಂಗವನ್ನು ಯುವುದರಿಂದ ಇತಿಹಾಸ ಮುಕ್ಕಾಗಲಿಕ್ಕಿಲ್ಲವೆ?

"ಒಂದು ದಿನದ ಮಟ್ಟಿಗೆ ಈ ಮುಖ್ಯಮಂತ್ರಿಯ ಸ್ಥಾನದಲ್ಲಿ ಕುಳಿತುಕೊಂಡು ನ್ನ ನಿರ್ವಹಿಸಬಲ್ಲೆಯಾ?" ಎಂದು ಒಬ್ಬ ಮುಖ್ಯಮಂತ್ರಿಯ ಸವಾಲನ್ನು ರಿಸಿದ ಪತ್ರಕರ್ತನ ಕತೆ ಸಿನಿಮಾದಲ್ಲಿ ಮಾತ್ರ ಸಾಧ್ಯ ಎನ್ನುವವರು ಮ್ ಎಂಬ ಸಾಮಾನ್ಯ ಮನುಷ್ಯನೊಬ್ಬ ಅರ್ಧ ದಿನದ ಮಟ್ಟಿಗೆ ಮೊಗಲ್ ರೆಯಾಗಿ ವಿಜೃಂಭಿಸಿದ್ದನ್ನು ನಂಬಲೇಬೇಕು. ಈ ಅಭೂತಪೂರ್ವ ನೆಯನ್ನು ಇತಿಹಾಸಕಾರ ಮೊಹಮ್ಮದ್ ಕಾಸಿಮ್ ಫರಿಶ್ತಾ ಖೀಬ್-ಎ-ಫರಿಶ್ತಾ'ದಲ್ಲಿ ದಾಖಲಿಸಿದ್ದಾನೆ. ಇಂತಹ ದೃಷ್ಟಿಕೋನ ಇತಿಹಾಸ ಖನಕ್ಕೆ ಹೊಸ ತಿರುವು ಕೊಡಬಲ್ಲದು, ಅಲ್ಲವೆ? ಇತಿಹಾಸದ ಈ ನೆಯನ್ನೇ ಕತೆಯಾಗಿ ನಿರೂಪಿಸಿದ ಕುಂವರ್ ನಾರಾಯಣ್ ಯಾರಿಗೆ ರೆಯಾಗಿರಬೇಕು? ಭಾರತೀಯ ಜ್ಞಾನಪೀಠ ಪ್ರಶಸ್ತಿ ವಿಜೇತ ಕುಂವರ್ ರಾಯಣ್ ಮೂಲತಃ ಒಬ್ಬ ಕವಿ. ಆ ಒಂದು ಕತೆ ಮೂಲಕ ಅವರು ದಿ ಕಥಾಲೋಕದಲ್ಲಿ ಶ್ರೇಷ್ಠ ಕತೆಗಾರನೆಂದು ಸಹ ಹೆಸರುವಾಸಿಯಾದರು. ತಹ ಸಂದರ್ಭಗಳಲ್ಲಿ ಕಲೆಗಿಂತ ಜೀವನವೇ ಮುಖ್ಯ ಎಂಬ ಮಾತು ಜವಾಗಿ ನೆನಪಾಗಬಹುದು. ವಾಸ್ತವದಲ್ಲಿ ಅದು ಸಹ ಅರ್ಥ ನೆನಿಸಬಹುದೇನೋ.

ಗೋವಿನ ಹಾಡು ಕಲ್ಪನಾಜನ್ಯ ಸಾಹಿತ್ಯವಾದರೆ, ಕುಂವರ್ ನಾರಾಯಣರದು ಭವಜನ್ಯ ಸಾಹಿತ್ಯ. ಯಾವುದೇ ವಿಧದ ಸಾಹಿತ್ಯಕ್ಕಾದರೂ ಮಾನವೀಯ ವೇ ಜೀವಸೆಲೆಯಾಗಿರಬೇಕು. ಈ ಮಾತು ಇತಿಹಾಸ ಲೇಖನಕ್ಕೂ ಯಿಸುವಂತಹದ್ದು. ಇತಿಹಾಸವೆಂದರೆ ಜಗತ್ತಿನ ಅಸಂಖ್ಯಾತ ನದಿಗಳಲ್ಲಿ ರ ನೀರು ನಿರಂತರ ಹರಿಯುವಷ್ಟೇ ಸಹಜವಾಗಿ ಎಗ್ಗಿಲ್ಲದೆ ಮನುಷ್ಯನ ಹರಿದದ್ದರ ಭಾವಾವೇಶದ ದಾಖಲೆಯಾಗಿ ಉಳಿಯುತ್ತಿದೆ. ಇಲ್ಲಿಯತನಕ ದಾಖಲೆ ವಾಸ್ತವವನ್ನೇ ಮರೆಯುತ್ತಿದ್ದರೂ, ಇತಿಹಾಸಕಾರರು ಮಾನವೀಯ ತಃಕರಣದ ಅನನ್ಯ ಒಯಸಿಸ್‌ಗಳನ್ನು ಮಾತ್ರ ಎಂದೂ ಮರೆಮಾಚಕೂಡದು. ಗಾದಾಗ ನಮ್ಮ ಭವಿಷ್ಯ ನಮ್ಮ ಭೂತದ ಕರಾಳ ಛಾಯೆಯಿಂದ ತಂತಾನೇ ಸ್ತವಾಗಿ ಮುಕ್ತಿ ಪಡೆಯುವ ಸಾಧ್ಯತೆ ಇದೆಯೆಂದು ಅನ್ನಿಸುವುದಿಲ್ಲವೆ?

■ ಹಸನ್ ನಯೀಂ ಸುರಕೋಡ

ಕೊಡುವವನಿಗೆ ಕೌಸರ್ ಬಾನು ಹೊಟ್ಟೆಯಿಂದ ಬಗೆದು ತೆಗೆದ ಣದೊಂದಿಗೆ ಬಜರಂಗಿಗಳು ಪೋಸ್ ಕೊಟ್ಟ ಚಿತ್ರ ಬಹುಶಃ ಾಗಲಿಲ್ಲವೆನಿಸುತ್ತದೆ. ಅಷ್ಟಕ್ಕೂ ಈ ಸೆಲ್ಫೀ ಚಿತ್ರಗಳಿಂದ ಏನು ಪ್ರಯೋಜನ? ಹೆಣ್ಣು ಶಿಶುಗಳ ಗರ್ಭಪಾತವನ್ನು ತಡೆಗಟ್ಟಬಲ್ಲುದೇ? ಆದರೂ ಮಗಳಂದಿರ ತೆ ಸೆಲ್ಫೀ ಕ್ಲಿಕ್ಕಿಸಿರೆಂಬ ಕರೆಗೆ ರೋಮಾಂಚನಗೊಂಡಿರುವ ನಮೋ ಭಕ್ತಗಣ ಗ ವಿಧವಿಧದ ಸೆಲ್ಫೀ ಕ್ಲಿಕ್ಕಿಸುವುದರಲ್ಲಿ ಮುಳುಗಿದ್ದಾರೆ. ಅಂದಹಾಗೆ ೋವಿಜ್ಞಾನಿಗಳ ಅಭಿಪ್ರಾಯದಲ್ಲಿ ಈ ಸೆಲ್ಫೀ ಗೀಳು ಒಂದು ವಿಧದ ನಸಿಕ ಕಾಯಿಲೆ.

ಹಿಂದಿನ ಪ್ರಧಾನಿಯನ್ನು "ಮೌನಿ ಸಿಂಗ್" ಅಂತಲೇ ಗೇಲಿ ಮಾಡುತ್ತ, ಷ್ಟಾಚಾರದ ಬಗ್ಗೆ ಬೆಂಕಿಯುಗುಳುವ ಭಾಷಣ ಮಾಡುತ್ತ ಅಧಿಕಾರಕ್ಕೆ ಬಂದ ದಿ ತನ್ನ ಇತ್ತೀಚಿನ ಮನ್ ಕಿ ಬಾತ್‌ನಲ್ಲಿ ದೇಶಾದ್ಯಂತ ಬಿರುಗಾಳಿಯನ್ನೇ ಸಿರುವ ಲಮೋ ಹಗರಣದ ಕುರಿತಾಗಲಿ, ಅದರಲ್ಲಿ ಭ್ರಷ್ಟಾಚಾರದ ಆರೋಪ ಸುತ್ತಿರುವ ಸುಷ್ಮಾ ಸ್ವರಾಜ್, ವಸುಂಧರಾ ರಾಜೆ ಕುರಿತಾಗಲಿ; ಸ್ಮೃತಿ ರಾನಿಯ ನಕಲಿ ಡಿಗ್ರಿ ಪ್ರಕರಣದ ಕುರಿತಾಗಲಿ, ಮಹಾರಾಷ್ಟ್ರ ಸಚಿವೆ ಪಂಕಜಾ ಂಡೆಯ ಚಿಕ್ಕಿ ಹಗರಣದ ಕುರಿತಾಗಲಿ, ಮತ್ತೊಬ್ಬ ಸಚಿವ ವಿನೋದ್ ವಡೆಯ ನಕಲಿ ಡಿಗ್ರಿ ಮತ್ತು ಅಗ್ನಿಶಾಮಕಗಳ ಡಬ್ಬಲ್ ಹಗರಣದ ಕುರಿತಾಗಲಿ, ಪ್ರದೇಶ ಮತ್ತು ಛತ್ತೀಸ್‌ಗಢದ ಮುಖ್ಯಮಂತ್ರಿಗಳಾದ ಶಿವರಾಜ ಸಿಂಗ್ ಹಾನ್ ಮತ್ತು ರಮಣ ಸಿಂಗರ ವ್ಯಾಪಂ ಮತ್ತು ರೇಷನ್ ಅಕ್ಕಿ ಹಗರಣದ ಕಾಗಲಿ ಚಕಾರವೆತ್ತದೆ ಹಗುರ, ಆಹ್ಲಾದಕರ, ಕಟ್ಟಾ - ಮೀಠಾ ಮಾತುಗಳ ಬಡಬಡಿಸಿದ್ದಾನೆ. ಮನಮೋಹನ ಸಿಂಗ್ ಮಿದು ಮೌನಕ್ಕೆ ಹೋಲಿಸಿದರೆ ಮೋದಿಯ ಮೌನ ಕಪಿ ಕಿವುಡಾಗಿಸುವಂಥದ್ದು.

ಭಾರತದ ಪ್ರಧಾನಿಯಾಗಿರುವ ಮೋದಿಗೆ ದೇಶದ ಮುಸ್ಲಿಂ ಸಮುದಾಯವಿಂದು ಪವಿತ್ರ ರಮ್ಜಾನ್ ಉಪವಾಸವನ್ನು ಆಚರಿಸುತ್ತಿರುವ ವಿಷಯ ಗೊತ್ತಿದೆ? ಆದರೂ ಆ ಬಗ್ಗೆ ಒಂದು ಶಬ್ದವಾದರೂ ಹೇಳದೆ, ಶುಭಾಶಯವನ್ನೂ ಕೋರದೆ ಕೇವಲ ರಕ್ಷಾಬಂಧನವನ್ನು ರಾಷ್ಟ್ರೀಯ ಹಬ್ಬವಾಗಿ ಆಚರಿಸುವ ಕುರಿತು ಮಾತಾಡಿದ್ದಾನೆ. ಹಾಗಾದರೆ ಆತ ಇತ್ತೀಚೆಗೆ ಮುಸ್ಲಿಂ ಮೌಲ್ವಿಗಳೊಂದಿಗೆ ಕುಳಿತುಕೊಂಡದ್ದು, ಇಸ್ಲಾಂ ಬಗ್ಗೆ ಭಾಷಣ ಬಿಗಿದದ್ದು, ಕುರಾನ್ ಶ್ಲೋಕಗಳನ್ನು ಉಲ್ಲೇಖಿಸಿದ್ದು ಎಲ್ಲವೂ ಒಂದು ಕಪಟ ನಾಟಕ ಎಂದಾಯಿತಲ್ಲವೇ? ಜೊತೆಗೆ ಕಳೆದ "ಇನ್‌ಕ್ರೆಡಿಬಲ್ ಇಂಡಿಯಾ"ದ ಚಿತ್ರಗಳು ಭಾರತದ ಧಾರ್ಮಿಕ ವೈವಿಧ್ಯತೆಯನ್ನು ಬಿಂಬಿಸುತ್ತವೆಂದು ಹೇಳುವ ಪ್ರಧಾನಿ 'ತನ್ನ ದೇಶದ ಸಾಂಸ್ಕೃತಿಕ ಮತ್ತು ಧಾರ್ಮಿಕ ವೈವಿಧ್ಯತೆ ಕುರಿತು ಸೋಲಿಸುತ್ತಿರುವುದನ್ನೂ ಗಮನಿಸಬೇಕು. ಸೋಜಿಗವೆಂದರೆ, ಮೋದಿ ಹೇಳುವ ಅಥವಾ ಹೇಳದೆ ಇರುವುದೇ ವಿಚಾರವೂ ಆಕಸ್ಮಿಕವಲ್ಲ, ಎಲ್ಲವೂ ಉದ್ದೇಶಪೂರ್ವಕ.

(ಆಧಾರ: asianage.com ನಲ್ಲಿ ನೀಲಾಂಜನ ಮುಖ್ಯೋಪಾಧ್ಯಾಯರ ಲೇಖನ)

ಗಾಂಧಿ ಕುರಿತಾದ ವಸ್ತುನಿಷ್ಠ ವಿಮರ್ಶೆ ಬೇಡವೇ?

ಇತ್ತೀಚೆಗೆ ಅಂಬೇಡ್ಕರ್ ಮತ್ತು ಗಾಂಧಿ ಚಿಂತನೆಗಳೊಂದಿಗೆ ಮುಖಾಮುಖಿಯಾಗುವ ದೃಷ್ಟಿಕೋನ ಹೆಚ್ಚೇ ನಡೆಯುತ್ತಿದೆ. ಇದಕ್ಕೆ 'ಗೌರಿ ಲಂಕೇಶ್' ಪತ್ರಿಕೆ ವೇದಿಕೆ ನಿರ್ಮಿಸಿಕೊಟ್ಟು ಅತ್ಯುಪಯುಕ್ತ ಮಾಹಿತಿಗಳು ಚರ್ಚೆಯಾಗಲು ಸಹಕರಿಸುತ್ತಿದೆ. ಇದು ಉತ್ತಮ ಬೆಳವಣಿಗೆ. ಆದರೆ ಈ ಚರ್ಚೆಯಲ್ಲಿ ಹಿರಿಯರಾದ ಸುರೇಂದ್ರ ಕೌಲಗಿಯವರು ಮತ್ತು ಅವಿನಾಶ್ ನೆಲ್ಲಿಕಟ್ಟೆಯವರು ಗಾಂಧಿ ಕುರಿತ ವಿಮರ್ಶೆಗೆ ಕೊಂಚ ಗಲಿಬಿಲಿಗೊಂಡವರಂತೆ ಪ್ರತಿಕ್ರಿಯಿಸಿದ್ದಾರೆ. ಇದು ಗಾಂಧಿ ಕುರಿತ ವಸ್ತುನಿಷ್ಠ ವಿಮರ್ಶೆ ಬೇಡವೇ? ಎಂಬ ಅನುಮಾನವನ್ನು ಹುಟ್ಟುಹಾಕುತ್ತಿದೆ.

ಸುರೇಂದ್ರ ಕೌಲಗಿಯವರಂತೂ ತಮ್ಮ ಲೇಖನಕ್ಕೆ 'ಅಂಬೇಡ್ಕರ್ ಮತ್ತು ಗಾಂಧಿ' ಎಂದು ಹೆಸರಿಟ್ಟು ಬರೆದಿರುವುದೆಲ್ಲಾ ಗಾಂಧಿಯವರ ಬಗ್ಗೆಯೇ.. ನಾಮಕಾವಸ್ಥೆಗೆ ಮಾತ್ರ ಅಂಬೇಡ್ಕರ್ ಅವರನ್ನು ಉಲ್ಲೇಖಿಸಿದ್ದಾರೆ. ಅದರಲ್ಲೂ ರಘೋತ್ತಮ ಹೊ.ಬ. ಲೇಖನವನ್ನು ಮನಸ್ಸಿಗೆ ಗಾಢವಾಗಿ ಹಚ್ಚಿಕೊಂಡಿದ್ದಾರೆ. ಇದರಿಂದಾಗಿ ಅವರು ಬರೆದಿರುವ ಲೇಖನದಲ್ಲಿ ಭಾವನೆಗಳು ಮೇಲುಗೈ ಸಾಧಿಸಿವೆ. ವಿಮರ್ಶೆ ಸತ್ತುಹೋಗಿದೆ.

ಸುರೇಂದ್ರ ಕೌಲಗಿ ಅವರು ತಮ್ಮ ಲೇಖನದಲ್ಲಿ ದುಂಡುಮೇಜಿನ ಸಮ್ಮೇಳನವನ್ನು ಕೇವಲ ರಾಜಕೀಯ ಸಮಸ್ಯೆಯೆಂದು ಪರಿಗಣಿಸಿದ್ದಾರೆ. ಇದರಿಂದಾಗಿ ಅವರು ಈ ರೀತಿ ಬರೆದಿದ್ದಾರೆ: "ದುಂಡುಮೇಜಿನ ಪರಿಷತ್ತು ಸಂಪೂರ್ಣವಾಗಿ ರಾಜಕೀಯ ಪರಿಷತ್ತಾಗಿತ್ತು. ಅಲ್ಲಿಯೂ ಇಂಗ್ಲಿಷರು 'ಒಡೆದು ಆಳುವ ನೀತಿಯನ್ನು' ಅನುಸರಿಸಲು ಪ್ರಯತ್ನಿಸುತ್ತಿದ್ದರು. ಭಾರತದಲ್ಲಿಯ ದಲಿತರ ಸಮಸ್ಯೆ ರಾಜಕೀಯವಾದುದಲ್ಲ ಅದೊಂದು ಉಗ್ರವಾದ ಸಾಮಾಜಿಕ ಸಮಸ್ಯೆಯಾಗಿತ್ತು. ಸಾಮಾಜಿಕ ಸಮಸ್ಯೆಯ ಪರಿಹಾರಕ್ಕೆ ರಾಜಕೀಯ ತಂತ್ರವನ್ನು ಉಪಯೋಗಿಸಿದಲ್ಲಿ ಸಮಸ್ಯೆ ಕರಾಳರೂಪವನ್ನು ತಾಳುತ್ತದೆಯೆಂಬ ಯೋಚನೆಯಿಂದ ಗಾಂಧೀಜಿ ಆ ಸಮಸ್ಯೆಯನ್ನು ತಮ್ಮ ಹತೋಟಿಯಲ್ಲಿಟ್ಟುಕೊಳ್ಳಲು ಪ್ರಯತ್ನಿಸಿದರೆ ವಿನಃ ಬೇರೆ ಯಾವುದೇ ಮುಖಂಡರನ್ನು ಅಲ್ಲಗಳೆಯುವ ಕುಹಕ ನೀತಿಯಾಗಿರಲಿಲ್ಲ."

ಇಲ್ಲಿ ದಲಿತರ ಸಮಸ್ಯೆ ರಾಜಕೀಯವಾದುದಲ್ಲ ಎಂಬ ನಿರ್ಣಯಕ್ಕೆ ಬರಲಾಗಿದೆ. ಗಾಂಧಿಯವರಿಗೆ ಇದು ಬರೀ ಸಾಮಾಜಿಕ ಸಮಸ್ಯೆಯಾಗಷ್ಟೇ ಕಂಡಿದ್ದರೆ ಮೀಸಲಾತಿ ಕ್ಷೇತ್ರಗಳಿಗೆ ಒಪ್ಪಿಗೆ ಸೂಚಿಸುತ್ತಿದ್ದರೇಕೆ? ಅಲ್ಪಸಂಖ್ಯಾತರಾದ ಮುಸ್ಲಿಂರಿಗೆ ಪ್ರತ್ಯೇಕ ಮತದಾನ ನೀಡಲು ಒಪ್ಪಿದ್ದ್ಯಾಕೆ? ಬ್ರಿಟಿಷರು ನೀಡಿದ ದಲಿತ ಪರ ಹಕ್ಕುಗಳ ವಿರುದ್ಧ ಗಾಂಧಿಯವರು ನಿಂತಿದ್ಯಾಕೆ? ಇದನ್ನು ಗ್ರಹಿಸಿದರೆ ಅರ್ಥವಾಗುತ್ತೆ ಇದರೊಳಗೆ ರಾಜಕೀಯ ಮತ್ತು ಸಾಮಾಜಿಕ ನೆಲೆಗಳು ಹೇಗೆ ಬೆರೆತಿದ್ದಾವೆ ಎಂಬುದು. ರಾಜಕೀಯ ಮೂಲದ ಅಭದ್ರತೆ ಕಾರಣದಿಂದಲೇ ದಲಿತರು ಅನೇಕ ಸಮಸ್ಯೆಗಳಲ್ಲಿ ಇಂದಿಗೂ ಬಳಲುವಂತಾಗಿದೆ. ಇದನ್ನು ಇಂದಿನ ಗಾಂಧಿವಾದಿಗಳೂ ನಿರಾಕರಿಸುತ್ತಿರುವುದು ಸೋಜಿಗವೇ ಸರಿ.

ಅದಕ್ಕೂ ಮುಖ್ಯವಾಗಿ ಈ ದೇಶದಲ್ಲಿ ಒಡೆದು ಆಳುವ ನೀತಿಯನ್ನು ಮೊದಲು ಪ್ರಯೋಗಿಸಿದವರ್ಯಾರು? ಒಡೆದು ಆಳುವ ನೀತಿ ಇಂಡಿಯಾದ ಪುರೋಹಿತಶಾಹಿಗಳ ಮೂಲಧರ್ಮ. ಇದನ್ನು ಬ್ರಿಟಿಷರು ಸಂಪೂರ್ಣವಾಗಿ ಬಳಸಿಕೊಂಡರು. ಇಂದಿಗೂ ಇದನ್ನು ಇಲ್ಲಿನ ಬಂಡವಾಳಶಾಹಿಗಳು, ರಾಜಕಾರಣಿಗಳು, ಪುರೋಹಿತಶಾಹಿಗಳು ಮಾಡುತ್ತಲೇ ಬರುತ್ತಿದ್ದಾರೆ. ಗಾಂಧೀಜಿ ಕೂಡ ಇಂತಹ ಒಡೆದು ಆಳುವ ನೀತಿಯಿರುವ ಚಾತುರ್ವರ್ಣ ವ್ಯವಸ್ಥೆಯ ಬಗ್ಗೆಯೇ ಹೆಚ್ಚು ಒಲವಿತ್ತು. ಇದರಿಂದಾಗಿ ಹಿಂದೂ ಧರ್ಮವನ್ನು ಮತ್ತು ಜಾತಿಯನ್ನು ಬೇರುಸಹಿತ ಕಿತ್ತು ಹಾಕಲು ಅವರು ಎಂದೂ ಪಣ ತೊಡಲಿಲ್ಲ. ಇದರಿಂದ ಜಾತಿವಿನಾಶದ ಬಗ್ಗೆ ಮಾತನಾಡುವ ಬದಲು ಅಸ್ಪೃಶ್ಯತೆ ನಾಶದ ಬಗ್ಗೆ ಮಾತನಾಡುತ್ತಾರೆ. ಇದರಿಂದಾಗಿಯೇ ಅಂಬೇಡ್ಕರ್ ಅವರು "ಜಾತಿ ವ್ಯವಸ್ಥೆಯನ್ನು ಅಳಿಸಿಹಾಕದೆ ಅಸ್ಪೃಶ್ಯತೆ ನಿವಾರಣೆಯಾಗದು ಎಂಬ ಸರಳ ಸತ್ಯವನ್ನು ಗಾಂಧಿಯವರು ಅರಿಯುವುದು ಅವಶ್ಯಕ" ಎಂದು ಅಂದೇ ಹೇಳಿದ್ದರು. ಆದರೆ ಗಾಂಧಿಯವರಿಗೆ ಇದನ್ನು ಕೇಳಿಸಿಕೊಳ್ಳುವ ಮನಸ್ಸೂ ಇರಲಿಲ್ಲ.


ದುಂಡುಮೇಜಿನ ಪರಿಷತ್ತಿನಲ್ಲಿ ಅಸ್ಪೃಶ್ಯರು ಇಟ್ಟ ರಾಜಕೀಯ ಬೇಡಿಕೆ ಮತ್ತು ನಂತರ ನಡೆದ ಪೂನಾ ಒಪ್ಪಂದ ಇವು ಅಸ್ಪೃಶ್ಯರ ರಾಜಕೀಯ ಭವಿಷ್ಯದ ಬಹುಮುಖ್ಯ ಘಟ್ಟಗಳು. ಇವುಗಳು ಕೇವಲ ರಾಜಕೀಯ ಸಮಸ್ಯೆಯಷ್ಟೇ ಆಗಿರಲಿಲ್ಲ, ರಾಜಕೀಯ ಹಕ್ಕುಗಳು ಮುಂದೊಂದು ದಿನ ಸಾಮಾಜಿಕ ಸಮಸ್ಯೆಗಳಿಗೆ ಎಳ್ಳು ನೀರು ಬಿಡಬಹುದೆಂಬ ನಂಬಿಕೆಯಿಂದಲೇ ಅಂಬೇಡ್ಕರ್ ರಾಜಕೀಯ ಹಕ್ಕು ಕೇಳಲು ಮುಂದಾಗಿದ್ದು. ಆದರೆ ಗಾಂಧಿಯವರು ದುಂಡುಮೇಜಿನ ಪರಿಷತ್ತಿನಲ್ಲಿ ಅಸ್ಪೃಶ್ಯರು ಮಂಡಿಸಿದ ರಾಜಕೀಯ ಸೌಲಭ್ಯದ ಬೇಡಿಕೆಗಳನ್ನು ವಿರೋಧಿಸಿದರಲ್ಲದೆ, ಬೇಡಿಕೆಗಳು ಈಡೇರಬಾರದೆಂದು ಶ್ರಮಿಸಿದರು. ಆದರೆ ಇವರ ವಿರೋಧವನ್ನು ಲೆಕ್ಕಿಸದೆ ಬ್ರಿಟಿಷ್ ಸರಕಾರವು ಅಸ್ಪೃಶ್ಯರ ರಾಜಕೀಯ ಬೇಡಿಕೆಗಳನ್ನು ಈಡೇರಿಸಲು ಒಪ್ಪಿಕೊಂಡಿತು. ಇದಕ್ಕೆ ಗಾಂಧಿಯವರು ಆಮರಣಾಂತ ಉಪವಾಸ ಕೈಗೊಂಡರು. ನಂತರದ ಪೂನಾ ಒಪ್ಪಂದದ ಮೂಲಕ ಅಸ್ಪೃಶ್ಯರ ಎಲ್ಲ ರಾಜಕೀಯ ಹಿತಾಸಕ್ತಿಗಳನ್ನು ಕಿತ್ತು ನೆಲಸಮ ಮಾಡಿದರು. ಇದು ರಾಜಕೀಯ ಕೊಂಡಿಯ ಮೂಲಕ ಸಾಮಾಜಿಕ ನೆಲೆಯನ್ನು ಗಟ್ಟಿಗೊಳಿಸುವ ಸಾಧನವಾಗಿತ್ತು. ಇದಕ್ಕೆ ಗಾಂಧಿಯವರು ಅಡ್ಡಗಾಲಾಗಿ ನಿಂತರು. ಅದಕ್ಕೆ ಅಂಬೇಡ್ಕರ್ ಹೇಳಿದ್ದು "ನೂರಾರು ವರ್ಷಗಳ ಕಾಲ ಅಸ್ಪೃಶ್ಯತೆಯನ್ನು ವಿರೋಧಿಸಿ ಭಾಷಣ ಮಾಡಿದರೂ ಸಾಧಿಸಲಾರದ್ದನ್ನು, ರಾಜಕೀಯ ಶಕ್ತಿಯ ಸೀಡಿಕೆಯಿಂದ ಕೆಲವೇ ವರ್ಷಗಳಲ್ಲಿ ಸಾಧಿಸಬಹುದೆಂಬುದು ಸಾಮಾನ್ಯ ಜ್ಞಾನ. ಅಸ್ಪೃಶ್ಯರಿಗೆ ರಾಜಕೀಯ ಹಕ್ಕುಗಳನ್ನು ನೀಡುವ ವಿಚಾರವೇ ಗಾಂಧಿಯವರಿಗೆ ಅಪ್ರಿಯವಾದದ್ದು."

ಇದು ಗಾಂಧಿಯವರು ಅಸ್ಪೃಶ್ಯರಿಗೆ ಬಗೆದ ದ್ರೋಹವಲ್ಲವೇ? ಇದರಿಂದ ಇಂದಿಗೂ ದಲಿತರ ರಾಜಕೀಯ ಭವಿಷ್ಯ ಅತಂತ್ರ ಸ್ಥಿತಿಯಲ್ಲಿ ಇಲ್ಲವೇ? ಮೊನ್ನೆ ನಡೆದ ಪಂಚಾಯತಿ ಚುನಾವಣೆಯಲ್ಲಿ ಎಷ್ಟೋ ಹಳ್ಳಿಗಳಲ್ಲಿ ದಲಿತರ ಹತ್ತಿರ ಓಟು ಕೇಳಲೂ ಹೋಗದ ಸವರ್ಣೀಯರು ಇಲ್ಲಿನ ಜಾತಿಯ ತಾರತಮ್ಯವನ್ನು ಮತ್ತೆ ಎತ್ತಿ ತೋರಿಸಿದರು. ಇದರ ಹಿಂದೆ ಪೂನಾ ಒಪ್ಪಂದದಲ್ಲಿ ಕಳೆದುಕೊಂಡ ಹಕ್ಕುಗಳ ನೆನಪಿಲ್ಲವೇ? ಇಂತಹ ಅಸ್ಪೃಶ್ಯರ ಕೋಪ ಸಕಾರಣವಲ್ಲದೇ..!

ನೆಲ್ಲಿಕಟ್ಟೆ ಅವರು 'ಪೂನಾ ಒಪ್ಪಂದ ಮತ್ತು ಹರಿಜನ ಪದದ ವಿಚಾರದಲ್ಲಿ ದಲಿತರು ಗಾಂಧಿಯ ವಿರೋಧಿ ನೆಲೆಯಲ್ಲಿ ನಿಂತುಬಿಡುತ್ತಾರೆ' ಎಂದು ಆರೋಪಿಸುತ್ತಾರೆ. ಆದರೆ ಇವರು ದಲಿತರ ಆರೋಪದ ಸಕಾರಣತೆ ಕುರಿತು ಚಿಂತಿಸುವುದೇ ಇಲ್ಲ. 'ಹರಿಜನ' ಎನ್ನುವ ಪದ ದಲಿತರ ಆತ್ಮಾಭಿಮಾನಕ್ಕೆ ಧಕ್ಕೆ ತರುವಂತದ್ದು. ಪೂನಾ ಒಪ್ಪಂದ ಈ ದೇಶದಲ್ಲಿ ದಲಿತರ ರಾಜಕೀಯ ಭವಿಷ್ಯವನ್ನು ನುಚ್ಚು ನೂರು ಮಾಡಿದಂತಹ ಘಟನೆ. ಇದರ ವಿರುದ್ಧ ದಲಿತರ ಆಕ್ರೋಶ ಸಹಜವಾಗಿಯೇ ಇದೆ. ಇದಕ್ಕೆ ತಕರಾರೇಕೆ? ಅದರಲ್ಲೂ ದಲಿತರು ಅಷ್ಟರಲ್ಲೇ ನಿಂತಿದ್ದರೆ ಇಂದಿಗೆ ಈ ಚರ್ಚೆ ಸಾಗುತ್ತಿರಲಿಲ್ಲ, 'ಗೌರಿ ಲಂಕೇಶ್' ಎಂಬ ಪ್ರಗತಿಪರ ಪತ್ರಿಕೆ ಇದಕ್ಕೆ ವೇದಿಕೆಯನ್ನೂ ನಿರ್ಮಿಸಿಕೊಡುತ್ತಿರಲಿಲ್ಲ.

ಗಾಂಧಿಯವರ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿಯೇ ಅನೇಕ ಸನ್ನಿವೇಶಗಳು ಅಸ್ಪೃಶ್ಯತೆ ನಿವಾರಣಾ ಕಾರ್ಯಕ್ರಮಕ್ಕೆ ಒದಗಿಬಂದಿದ್ದವು. ಗಾಂಧಿಯವರು ಇವುಗಳನ್ನು ಸಮರ್ಥವಾಗಿ ಬಳಸಿಕೊಳ್ಳಲಿಲ್ಲ ಮತ್ತು ಸ್ಪಷ್ಟ ನಿಲುವಿಗೆ ಬರಲಿಲ್ಲ. ಉದಾಹರಣೆಗೆ 1921ರ ಬಾರ್ಡೋಲಿ ಕಾರ್ಯಕ್ರಮವನ್ನು ರಾಷ್ಟ್ರಾದ್ಯಂತ ಉತ್ಸುಕತೆಯಿಂದ ಪ್ರಾರಂಭಿಸುವ ಸಂದರ್ಭದಲ್ಲಿ ಆ ಕಾರ್ಯಕ್ರಮದಲ್ಲಿನ ಅಸ್ಪೃಶ್ಯತಾ ನಿವಾರಣೆಯ ಅಂಶವನ್ನು ಗಾಂಧಿ ವಿರೋಧಿಸಿದರು. ಈ ಎಲ್ಲಾ ಅಂಶಗಳು ಅಂಬೇಡ್ಕರ್ ಅವರ ಬರಹಗಳಲ್ಲಿ ಸಿಗುತ್ತವೆ.

ಗಾಂಧಿಯವರು ಜಾತಿ ಮತ್ತು ಅಸ್ಪೃಶ್ಯತೆ ವಿರುದ್ಧ ಮಾತನಾಡುತ್ತಿದ್ದರೇ ಹೊರತು ಒಂದು ಸ್ಪಷ್ಟ ಕಾರ್ಯಕ್ರಮ ಮಾಡಲಿಲ್ಲ ಹಾಗೂ ಅಂತಹ ಕಾರ್ಯಕ್ರಮದ ರೂಪುರೇಷೆಯೂ ಇರಲಿಲ್ಲ. 'ಹರಿಜನ ಸೇವಾಸಂಘ' ಕೂಡ ಅಂತಿಮವಾಗಿ ಅಸ್ಪೃಶ್ಯತೆ ನಿವಾರಣೆ ಅಸಾಧ್ಯ ಎನ್ನುವಂತೆ ಕೈಕಟ್ಟಿ ಕೂರುತ್ತದೆ. ಗಾಂಧಿಯವರು 'ಗಂಡು ಹೆಣ್ಣಿನಲ್ಲಿ ಒಬ್ಬರು ಅಸ್ಪೃಶ್ಯರಾಗಿದ್ದರೆ ಮಾತ್ರ ನಾನು ಮದುವೆಗೆ ಹೋಗುತ್ತೇನೆ' ಎಂದು ಕೊನೆಗೆ ಹೇಳಿದ್ದೇನೋ ಸರಿ. ಆದರೆ ಪೆರಿಯಾರ್ ಮಾಡಿದಂತೆ ಹಿಂದೂ ಧರ್ಮದ ಬಾಹುಗಳನ್ನು ಕತ್ತರಿಸಲಿಕ್ಕೆ ಸೂಕ್ತ ವೇದಿಕೆ ನಿರ್ಮಿಸಲೇ ಇಲ್ಲ. ತನ್ನ ಕಾಲದಲ್ಲೇ ಗಾಂಧಿಯವರು ದಲಿತರಿಗೆ ದೇವಾಲಯಗಳೊಳಗೆ ಮುಕ್ತವಾಗಿ ಪ್ರವೇಶ ಮಾಡಿಸಬಹುದಿತ್ತು. ಆದರೆ ಅವರು ಆ ಪ್ರಕ್ರಿಯೆಯನ್ನು ತೀರ ಗೌಣಗೊಳಿಸಿದರು. ಅಸ್ಪೃಶ್ಯರ ಅವಮಾನದ ಹಿನ್ನೆಲೆಯಲ್ಲಿ ಮತಾಂತರಕ್ಕೆ ಪ್ರೋತ್ಸಾಹ ಕೊಡಬಹುದಿತ್ತು. ಆದರೆ ಗಾಂಧಿಯವರಿಗಿದ್ದ ಹಿಂದೂ ಧರ್ಮದ ಪ್ರೀತಿ ಇದಕ್ಕೆಲ್ಲ ಅವಕಾಶವನ್ನೇ ಮಾಡಿಕೊಡಲಿಲ್ಲ.



ರಾಜಕೀಯ ಪರಿಹಾರವೇ ಸಾಮಾಜಿಕ ಪರಿಹಾರಕ್ಕೆ ಮೂಲ ನೆಲೆಗಟ್ಟು ಒದಗಿಸುತ್ತದೆ. ಇದು ಸದ್ಯಕ್ಕೆ ಅಸ್ಪೃಶ್ಯರ ಪಾಲಿಗೆ ಆಗದ ಮಾತು. ಇದರೊಂದಿಗೆ ಸಾಮಾಜಿಕ ಸಮಸ್ಯೆಗೆ ಧರ್ಮವೂ ಪರಿಹಾರ ಒದಗಿಸಬೇಕು. ಆದರೆ ಹಿಂದೂ ಧರ್ಮ ಯಾವತ್ತೂ ಅಸ್ಪೃಶ್ಯತೆಯನ್ನು ಬುಡಸಮೇತ ಕೀಳಲು ಪ್ರಯತ್ನಿಸಲೇ ಇಲ್ಲ, ಇಂತಹ ಧರ್ಮದಲ್ಲೇ ಗಾಂಧಿಗೆ ನಂಬಿಕೆ ಹೆಚ್ಚು. ಕೇವಲ ಮನಃಪರಿವರ್ತನೆಯಿಂದಲೇ ಎಲ್ಲವನ್ನು ನಿಭಾಯಿಸಬಲ್ಲದು ಎಂಬುದು ಇವತ್ತಿಗೆ ಸುಳ್ಳಾಗಿ ಹೋಗಿದೆ. ಈ ಹಿನ್ನೆಲೆಯಲ್ಲಿ ಗಾಂಧಿಯನ್ನೂ ಅವರು ಮೆಚ್ಚಿದ ಧರ್ಮವನ್ನೂ ಅಸ್ಪೃಶ್ಯರು ವಿಮರ್ಶಿಸುವುದರಲ್ಲಿ ತಪ್ಪೇನಿದೆ?

ಒಮ್ಮೆ ಗಾಂಧಿಯವರು 'ಗುಜರಾತಿನ ಭೂಕಂಪಕ್ಕೆ ಕಾರಣ ನಾವು ಆಚರಿಸುವ ಅಸ್ಪೃಶ್ಯತೆಯೇ ಕಾರಣ' ಎನ್ನುವ ಅವೈಜ್ಞಾನಿಕ ಕಾರಣವನ್ನೂ ಹೇಳುತ್ತಾರೆ. ಇದರಲ್ಲಿ ಅಸ್ಪೃಶ್ಯತೆಯ ವಿರುದ್ಧ ಧ್ವನಿ ಇರುವುದಾದರೂ ಗಾಂಧಿಯವರ ಮಾತು ಕೇಳಲು ಇಡೀ ಭಾರತವೇ ನಿಂತಿತ್ತು ಎಂದ ಮೇಲೆ ಹಿಂದೂಗಳ ಮೇಲೆ ಅಸ್ಪೃಶ್ಯತೆಯ ನಿಷೇಧವನ್ನು ಕಟ್ಟುನಿಟ್ಟಾಗಿ ಗಾಂಧಿಯವರು ಹೇರಲಿಲ್ಲವೇಕೆ? ಈ ಪ್ರಶ್ನೆ ಸದಾ ಕಾಡುವಂತೆ ಮಾಡುತ್ತದೆ. ಈ ಹಿನ್ನೆಲೆಯಲ್ಲಿ ಗಾಂಧಿಯವರನ್ನು ವಿಮರ್ಶಿಸುವ ನೈತಿಕ ಹಕ್ಕು ದಲಿತರಿಗಿದೆ. ಇದನ್ನು ಅಸ್ಪೃಶ್ಯತೆಯ ಬಗ್ಗೆ ಒಂದಿಂಚೂ ಕದಲದೆ ಗಾಂಧಿವಾದಿಗಳೆನಿಸಿಕೊಂಡ ಎಲ್ಲರೂ ಅರ್ಥಮಾಡಿಕೊಳ್ಳಬೇಕು.

'ಆದದಕ್ಕೆಲ್ಲ ಶನೀಶ್ವರನೇ ಕಾರಣ' ಎನ್ನುವಂತೆ ಎಲ್ಲದಕ್ಕೂ ಗಾಂಧಿಯನ್ನು ಎಳೆದು ತರುವ ಉದ್ದೇಶ ಇಲ್ಲಿಲ್ಲ. ಆದರೆ ದಲಿತರು ಗಾಂಧಿಯನ್ನು ವಿಮರ್ಶಿಸಲಿಕ್ಕೆ ಸಕಾರಣ ಇದೆ. ಅದನ್ನು ಅರಿಯಬೇಕೆನ್ನುವುದೇ ಈ ಲೇಖನದ ಉದ್ದೇಶ. ಅದೂ ಹೋಗಲಿ ಇಂದಿನ ಗಾಂಧಿವಾದಿಗಳಾದರೂ ಏನು ಮಾಡುತ್ತಿದ್ದಾರೆ. ಈ ಅಸ್ಪೃಶ್ಯ ನಿವಾರಣೆಗೆ ಎಳ್ಳಷ್ಟು ಕೊಡುಗೆಯೂ ಅವರಿಂದ ಇಲ್ಲ, ಇಂತಹ ಸಮಯದಲ್ಲಿ ದಲಿತರ ವಿಮರ್ಶೆಯನ್ನು ಭಾವನಾತ್ಮಕವಾಗಿ ತೆಗೆದುಕೊಳ್ಳದೆ ಸಕಾರಾತ್ಮಕವಾಗಿ ತೆಗೆದುಕೊಳ್ಳುವುದು ಒಳ್ಳೆಯದು.

ಇದರಾಚೆಗೆ, ಮುಚ್ಚಿದ ಮೂರ ನಿಂತು ಮಾತನಾಡುವವರಿಗಿಂತ ಮುಕ್ತ ಮಾತನಾಡುವ ಗಾಂಧಿಯವರ ನಡೆ ಎಷ್ಟೋ ಆಶ್ಚರ್ಯಮಾನ. ಸ್ವಾತಂತ್ರ್ಯ ಹೋರಾಟದ ಅನೇಕ ವಿಷಯಗಳಲ್ಲಿ ಅಸ್ಪೃಶ್ಯತೆಯ ಬಗ್ಗೆ ಗೌಣವಾಗಿದ್ದರು. ಕ್ರಿಯಾಶೀಲರಾಗಿ ಗಾಂಧಿಯವರು ಅದರ ಬಗ್ಗೆ ಮಾತನಾಡಿದ್ದೂ ಕೂಡ ಒಂದು ರೀತಿಯಲ್ಲಿ ಗುಣಾತ್ಮಕ ಅಂಶ. ಇದನ್ನು ಕೂಡ ಗಾಂಧಿಯವರನ್ನು ಟೀಕಿಸುವ ತಳ್ಳಿಹಾಕುವವರು ಅರ್ಥಮಾಡಿಕೊಳ್ಳಬೇಕು.

■ ಡಾ.ಹೆಚ್.ವಿ.ಉಮಾಶಂಕರ್,
ಸಹಾಯಕ ಪ್ರಾಧ್ಯಾಪಕರು, ಕೆ.ಆರ್. ನಗರ

ಅನುರಣನ



ಡಾ ಟಿ.ಎಸ್. ಚನ್ನೇಶ್
channeshts@gmail.com

ಸಪ್ತ ಸಾಗರಗಳ ಕಲ್ಪನೆಯ ಹಿಂದಿನ ಸೊಗಸು

ನಾವು ಈ ನೆಲಕ್ಕೆ ಭದ್ರವಾಗಿ ಕಾಲೂರಿ ಕೇವಲ ಈ ಗ್ರಹದ ಮೇಲಿನ ನೇರ ನಿವಾಸಿಗಳ ಅನಿಸಿಕೆಯಿಂದಷ್ಟೇ ಈ ಭೂಮಿಯನ್ನು ನೋಡುವ ಕ್ರಮವನ್ನು ಕಲಿತಿದ್ದೇವೆ. ಹಾಗಾಗಿ ನೆಲದ ಮೇಲಿನ ಮಣ್ಣಿನಿಂದಾವೃತವಾದ ಕಲ್ಪನೆಯಷ್ಟೇ ನಮಗೆ ಬರುತ್ತದೆ. ಆದರೆ ನಾವು ಸೌರವ್ಯೂಹದಲ್ಲೇ ಅತೀಹೆಚ್ಚು ನೀರಿನಿಂದಾವೃತವಾದ ಗ್ರಹದಲ್ಲಿದ್ದೇವೆ ಎಂಬುದು ಹೊಳೆಯುವುದೇ ಇಲ್ಲ. ಈ ಗ್ರಹವನ್ನು 'ಭೂಮಿ' ಎಂದು ಕರೆಯುವುದಕ್ಕಿಂತಲೂ 'ಸಾಗರದ ಗ್ರಹ' - 'ನೀರಿನ ಗ್ರಹ' ಎಂದು ಕರೆಯುವುದೇ ಹೆಚ್ಚು ಅರ್ಥಪೂರ್ಣವಾದುದು. ಭೂಮಂಡಲದ ಮೂರನೇ ಎರಡು ಭಾಗಕ್ಕಿಂತಲೂ ಹೆಚ್ಚು ಭಾಗವನ್ನು ಆವರಿಸಿದ ಈ ನೀರು ಐದು ಮಹಾಸಾಗರಗಳಲ್ಲಿ ತುಂಬಿದೆ. ನಮ್ಮ ಕಥೆ-ಪುರಾಣಗಳಲ್ಲಿ ಸಪ್ತ ಸಾಗರಗಳ ಕಲ್ಪನೆಯನ್ನು ಕೇಳಿದ್ದೇವೆ. ಯಾವುದೋ ಕೆಲಸದ ನಿಮಿತ್ತ ಏಳು-ಸಮುದ್ರಗಳ ದಾಟಿ ಬಂದ ಬಗ್ಗೆ ಓದಿದ್ದೇವೆ. ಏನೇ ಆದರೂ ಅವರ ಯಾನ ಹೆಚ್ಚುಕಡಿಮೆ60,000,000,000, 000,000,000,000, 000, 000,000,000,000,000,000,000 ನೀರಿನ ಹನಿಗಳ ನಿರಂತರ ಚಕ್ರದ ಒಂದೇ ಸಾಗರವೆಂದೇ ಹೇಳಬೇಕು. ಏಕೆಂದರೆ ಭೂಮಿಯ ಒಟ್ಟು ಸಾಗರಗಳ ನೀರೆಲ್ಲಾ ಒಂದೇ ಬೃಹತ್ ಸಾಗರದ ವಿವಿಧ ಭಾಗಗಳೆನ್ನಬಹುದು.

ನಮ್ಮ ವಾತಾವರಣದಂತೆ ಈ ಸಾಗರಗಳಿಗೂ ಒಂದು ಕೊನೆಯೆಂಬುದಿಲ್ಲ, ಸಾಮಾನ್ಯವಾಗಿ ನಾವಿರುವ ಈ ಖಂಡದ ಸುತ್ತಲೂ ಅಗಾಧವಾದ ಉಪ್ಪಿನ ನೀರು ಆವೃತವಾಗಿದೆ. ಅದನ್ನೆ ಸಮುದ್ರ ಎಂದುಕೊಳ್ಳುತ್ತೇವೆ. ಹಾಗೆ ನೋಡಿದರೆ ಈ ಅನಿಸಿಕೆಗೆ ತದ್ವಿರುದ್ಧವಾದುದೇ ಸತ್ಯ. ಅಂದರೇ ಇಡೀ ಜಗತ್ತು ನೀರಿನಿಂದ ಆವೃತವಾಗಿದೆ. ಅದರಲ್ಲಿ ಅಲ್ಲಲ್ಲಿ ಈ ನೆಲದ ಮುದ್ದೆ ಅಡಗಿಕೊಂಡಿದೆ.

ನೀರಿಗಿಂತಲೂ ಮಿಕ್ಕಿ

ಸಾಗರಗಳು ಈ ನೆಲವನ್ನು ಸುತ್ತುವರಿದ ಕೇವಲ ಒಂದು ಭೌತಿಕ ನೀರಿನ ಹೊದಿಕೆಯಷ್ಟೇ ಅಲ್ಲ, ನಮ್ಮ ಊಹೆಗೂ ಮೀರಿ ನಮ್ಮೆಲ್ಲಾ ಜೀವರಾಶಿಯ ಮೇಲೆ ಆಗಾಧ ಪರಿಣಾಮವನ್ನು ಬೀರುತ್ತಿರುತ್ತವೆ. ತಮ್ಮೊಳಗೆ ಅಡಗಿಸಿಟ್ಟ ಅಪಾರ ಶಕ್ತಿಯಿಂದ, ಮೀನು ಮತ್ತಿತರ ಜಲಚರಗಳಿಂದ, ಖನಿಜ ಸಂಪತ್ತಿನಿಂದ ಸಾಗರಗಳು ನಮಗೆ ಬಹುಮುಖ್ಯವಾಗುತ್ತವೆ. ಭೂಮೇಲ್ಮೈಯ ಹವಾಮಾನದ ಏರಿಳಿತದಲ್ಲೂ ಸಾಗರದ ಪ್ರಭಾವ ಅಧಿಕವಾದುದು. ಒಂದು ರೀತಿಯಲ್ಲಿ ಈ ಸಾಗರಗಳು ದೈತ್ಯಾಕಾರದ ಹವಾಮಾನ ನಿಯಂತ್ರಕ ಯಂತ್ರಗಳು. ಗಾಳಿಯ ಒತ್ತಡದಿಂದ, ನೀರಾವಿಯಿಂದ ಸದಾ ಬಿಸಿ ಮತ್ತು ತಂಪನ್ನು ಉಂಟುಮಾಡಬಲ್ಲವು. ಈ ನೆಲದ ಉಷ್ಣತೆ ಸಹಾರಾದಲ್ಲಿ 570 ಸೆ ಗೂ ಅಂಟಾರ್ಕ್ಟಿಕ್‌ನಲ್ಲಿ -520 ಸೆ ತಲುಪಿದರೆ, ಸಮುದ್ರದ ಉಷ್ಣತೆ 270 ಸೆ ಅನ್ನೂ ದಾಟುವುದಿಲ್ಲ -10 ಕ್ಕಿಂತಲೂ ಕಡಿಮೆಯಾಗುವುದಿಲ್ಲ. ಇಂತಹ ಒಂದು ಅದ್ಭುತವಾದ ವಾತಾನುಕೂಲ ವ್ಯವಸ್ಥೆ ಇಲ್ಲಿದೆ. ಕಾರಣವೇನೆಂದರೆ ನೆಲ-ಹಾಗು-ಗಾಳಿಗಿಂತಲೂ ನೀರು ಅತ್ಯುತ್ತಮವಾದ ಉಷ್ಣವಾಹಕ. ಆದುದರಿಂದಲೇ ಅಪಾರವಾದ ಜಲರಾಶಿ ಅಗಾಧವಾದ ಉಷ್ಣವನ್ನು ನುಂಗಿ ತಂಪನ್ನು ಸೂಸಬಲ್ಲುದು. ಇದರಿಂದಾಗಿಯೇ ಭೂಮಂಡಲದ ಹವಾಮಾನವನ್ನು ನಿಯಂತ್ರಣದಲ್ಲಿಟ್ಟರಲು ಸಾಧ್ಯವಾಗಿರುವುದು.

ಅಗಾಧವಾದ ಇಡೀ ಸಾಗರದ ಒಂದೆ ವ್ಯವಸ್ಥೆಯನ್ನು, ನೀರಿನ ಆಳ, ಉಷ್ಣತೆ, ಉಪ್ಪಿನಂಶ ಮತ್ತು ಆಹಾರಾಂಶಗಳ ದೊರೆಯುವಿಕೆ ಇವೇ ಮುಂತಾದ ಲಕ್ಷಣಗಳಿಂದ ವಿವಿಧ ವಲಯಗಳಾಗಿ ಗುರುತಿಸಲಾಗುತ್ತದೆ. ಈ ಲಕ್ಷಣಗಳ ಸಂಯೋಜನೆ ಮತ್ತು ಕ್ರಮಬದ್ಧತೆಯನ್ನು ಅನುಸರಿಸಿ ವಿವಿಧ ಸಸ್ಯ ಮತ್ತು ಪ್ರಾಣಿಗಳ ವಾಸಯೋಗ್ಯತೆಯ ಸ್ಥಳವಾಗುತ್ತದೆ. ಅನೇಕ ಬಾರಿ 'ಸಮುದ್ರ ಮತ್ತು ಸಾಗರ' ಪದಗಳನ್ನು ಒಂದಕ್ಕೊಂದು ಪರ್ಯಾಯವಾಗಿ ಬಳಸಲಾಗುತ್ತದೆ. ಆದರೆ ಅವೆರಡೂ ಭಿನ್ನವಾದವು. ಸಾಗರವೆಂದರೆ ಈ ಭೂಮೇಲ್ಮೈಯಲ್ಲಿಯ ಕಂದಕ ಅಥವಾ ಅಗಾಧವಾದ ಕುಳಿಗಳಲ್ಲಿ ಸೇರಿದ ಪರಸ್ಪರ ಸಲೀಸಾದ ದಾರಿಯುಳ್ಳ ಉಪ್ಪುನೀರಿನ ಬೃಹತ್‌ರಾಶಿ. ಸಮುದ್ರವೆಂಬುದು ಸುತ್ತಲೂ ಅಥವಾ ಸ್ವಲ್ಪಭಾಗದಲ್ಲಿ ನೆಲದಿಂದ ಆವೃತವಾಗಿರುವ ಉಪ್ಪುನೀರಿನರಾಶಿ, ಸಾಮಾನ್ಯವಾಗಿ ಸಮುದ್ರಗಳು ಕಡಲ್ಗಾಲುವೆಗಳಿಂದ ಸಾಗರಕ್ಕೆ ಸಂಪರ್ಕ ಹೊಂದಿರುತ್ತವೆ. ಸಾಮಾನ್ಯ ಅರ್ಥದಲ್ಲಿ ಸಾಗರ-ಸಮುದ್ರವನ್ನು ಪರಸ್ಪರ ಪೂರಕವಾಗಿ ಹೆಸರಿಸುತ್ತೇವೆ.

ಉಪ್ಪಿನ ಸಮುದ್ರ

ಸಮುದ್ರ ಎಂದರೇನೇ ಉಪ್ಪಿಂದ ತುಂಬಿದ್ದು ಎಂದು ನಮಗೆಲ್ಲಾ ಗೊತ್ತು, ಆದರೆ ಎಷ್ಟು? ಯಾವ ಲವಣಗಳಿವೆ? ಎಂಬೆಲ್ಲಾ ಪ್ರಶ್ನೆಗಳು ಸಹಜವಾದವು. ಒಂದು ಘನ ಕಿ.ಮೀ.ನಷ್ಟು ಸಮುದ್ರದ ನೀರನ್ನು ಆವಿಯಾಗಿಸಿದರೆ ಸುಮಾರು 40 ದಶಲಕ್ಷ ಟನ್ ಅಷ್ಟು ಉಪ್ಪು ಹಿಂದುಳಿಯುತ್ತದೆ. ಈ ಉಪ್ಪಿನಲ್ಲಿ ಹೆಚ್ಚಿನ ಪಾಲು ಅಡಿಗೆ ಉಪ್ಪು (ಸೋಡಿಯಂ ಕ್ಲೋರೈಡ್), ಸ್ವಲ್ಪ ಭಾಗ ಪೊಟ್ಯಾಸಿಯಂ, ಮ್ಯಾಗ್ನೀಸಿಯಂ ಮತ್ತು ಕ್ಯಾಲ್ಸಿಯಂ ಲವಣಗಳು ಇರುತ್ತವೆ. ಸಮುದ್ರ ನೀರಿನಲ್ಲಿ ಸುಮಾರು ಒಂದು ನೂರು ವಿವಿಧ ಮೂಲ ವಸ್ತುಗಳು ಇರುತ್ತವೆ. ಇವೆಲ್ಲಾ ಬಹಳಷ್ಟು ಲವಣಗಳಾಗಿ ಅತೀ ಕಡಿಮೆ ಪ್ರಮಾಣದಲ್ಲಿರುತ್ತವೆ. ಕೆಲವೊಂದು ಮೂಲವಸ್ತುಗಳು ಎಷ್ಟು ಕಡಿಮೆ ಇರುತ್ತವೆಂದರೆ, ಅವನ್ನೇನು ಶೇಕಡಾವಾರು ಅಳೆಯಲೇ ಆಗುವುದಿಲ್ಲ, ಹಾಗಾಗಿ ಪ್ರತಿ ಕೆಜಿ ಸಮುದ್ರದ ನೀರಿನಲ್ಲಿ ಎಷ್ಟು ಗ್ರಾಂ ಅಂತಹ ಉಪ್ಪಿದೆ ಎಂದೇ ಅಳೆಯಲಾಗುವುದು. ಅದೂ ಅಲ್ಲದೆ ಇಡೀ ನೀರಿನ ಉಪ್ಪಿನಂಶವೇನೂ ಒಂದೇ ಸಮನಾಗಿರುವುದಿಲ್ಲ, ತೀರಕ್ಕಿರುವ ದೂರ, ಮುಂತಾದವುಗಳಿಂದಲೂ ವ್ಯತ್ಯಾಸಗಳಿರುತ್ತವೆ. ಬೇರೆ ಬೇರೆ ಸಮುದ್ರಗಳ ಕೆಲವು ಗೊತ್ತಾದ ಗುಣಗಳಿಂದ ಅದೂ ಸಮುದ್ರದ ಉಪ್ಪಿನಂಶ ನಿರ್ಧರಿತವಾಗುತ್ತದೆ.



ಈ ಉಪ್ಪು ಸಮುದ್ರದಲ್ಲಿ ಅದು ಹೇಗೆ ಮೊದಲ ಸ್ಥಾನ ಪಡೆದಿದೆ ಎಂದರೆ ನೀರು ಭೂಮಿಯ ಮೇಲೆ ಹಾಯ್ದಂತೆ, ಕಲ್ಲು-ಮಣ್ಣಿನಿಂದ ಕರಗಿದ ಲವಣಗಳನ್ನು ಹೊತ್ತು ತರುತ್ತದೆ. ಇವೇ ಸಾಗರಗಳಲ್ಲಿ ಸಂಗ್ರಹವಾಗುತ್ತವೆ. ಹಾಗಾದರೆ ಉಪ್ಪು ಹೆಚ್ಚಾಗುತ್ತಾ ಹೋಗಬಹುದಲ್ಲ! ಹಾಗಾಗುವುದಿಲ್ಲ ಏಕೆಂದರೆ ಒಂದಷ್ಟು ತಳ ಸೇರಿದರೆ, ಮತ್ತಷ್ಟು ಸಾಗರದ ಜೀವಿಗಳನ್ನು ಸೇರುತ್ತದೆ. ಜೊತೆಗೆ ಮಳೆಯಿಂದಲೂ ಸದಾ ಸಿಹಿ ನೀರು ಸಾಗರಕ್ಕೆ ಸೇರುತ್ತಲೇ ಇರುವುದಲ್ಲ, ಹಾಗಾಗಿ ಹೆಚ್ಚೂಕಡಿಮೆ ಒಂದೇ ಸಮನಾಗಿರುತ್ತದೆ.

ಸಾಗರದೊಳಗಿನ ಏರಿ ಮತ್ತು ಇಳಿಜಾರುಗಳು

ಸಾಗರದ ತಳವನ್ನು ಅಟೋಲ್ಸ್ ಅಥವಾ ಅತಲವೆಂದು ಕರೆಯಲಾಗುತ್ತದೆ. ಇದೊಂದು ಬೃಹತ್ ಮೈದಾನದ ಹಾಗಿರುತ್ತವೆ. ಆದರೂ ಸಾಗರದ ಅತಲದ ಮೈದಾನದಲ್ಲಿ ಅಲ್ಲಲ್ಲಿ ಅಂಡಾಕಾರದ ಉಬ್ಬುಗಳಿವೆ. ಇವನ್ನು ಅತಲದ ಬೆಟ್ಟಗಳೆಂದು ಕರೆಯುವರು. ಮೊದಲು ಇವು ಬಹಳ ದೊಡ್ಡವಾಗಿದ್ದವು. ಆದರೆ ಈಗ ಇವುಗಳ ಸುತ್ತಲೂ ಹೂಳು ತುಂಬಿಕೊಂಡಿದ್ದರಿಂದ ಇವುಗಳು ಚಿಕ್ಕದಾಗುತ್ತಾ ಬರುತ್ತಿವೆ. ಸಮುದ್ರದೊಳಗಣ ಮತ್ತಷ್ಟು ಗುಡ್ಡ ಬೆಟ್ಟಗಳಿವೆ ಸಮುದ್ರ ಪರ್ವತಗಳು (Sea Mounts) ಮತ್ತು ಗಾಯ್ಟ್ (Guyots) ಗಳೆಂದು ಇವನ್ನು ಕರೆಯುವರು. ಇವು ನೀರಿನಿಂದ ಮೇಲೆದ್ದು ಕಾಣುವುದಿಲ್ಲ, ಇವುಗಳು ಸಮುದ್ರದಾಳದ ಜ್ವಾಲಾಮುಖಿಗಳಿಂದಾದ ಪರ್ವತಗಳು. ಜ್ವಾಲಾಮುಖಿಯ ಚಟುವಟಿಕೆ ಅಲ್ಲಿ ನಿರಂತರವಾಗಿಯೇ ಇರುವುದು. ಸಮುದ್ರ ಬೆಟ್ಟಗಳ ಶಿಖರಗಳು ಚೂಪಾಗಿದ್ದರೆ, ಗಾಯ್ಟ್‌ಗಳ ಶಿಖರಗಳು ಚಪ್ಪಟೆಯಾದವುಗಳು. ಹಿಂದೊಮ್ಮೆ ಈ ಗಾಯ್ಟ್‌ಗಳು ನೀರಿನಿಂದ ಮೇಲಕ್ಕೆ ಚಾಚಿಕೊಂಡಿದ್ದು, ಈಗ ಅಲೆಗಳ ಹೊಡೆತಕ್ಕೆ ಸವೆದು ಚಪ್ಪಟೆಯಾಗಿವೆ ಎಂಬುದು ವಿಜ್ಞಾನಿಗಳ ಅನಿಸಿಕೆ. ನಂತರ ಭೂಕಂಪನದ ಚಟುವಟಿಕೆಗಳಿಂದ ಅವು ನೀರೊಳಗೆ ಮುಳುಗಿಹೋಗಿವೆ.

ನಮ್ಮ ಬಂಗಾಳ ಕೊಲ್ಲಿಯಲ್ಲಿ ಅಂತಹ ಅನೇಕ ಗಾಯ್ಟ್‌ಗಳನ್ನು ಪತ್ತೆ ಹಚ್ಚಲಾಗಿದೆ. ಭೂಕಂಪನಕ್ಕೊಳಗಾಗದ ಹಾಗೂ ಬೆಟ್ಟಗಳಿಂದ ಅತೀ ದೊಡ್ಡದಾದ ಉಬ್ಬುಗಳು ಅಲ್ಲಲ್ಲಿ ಕಾಣಬರುತ್ತವೆ. ಇವು ಸಾಗರದ ಏರಿಕೆಗಳ ಅಥವಾ ಉಬ್ಬುಗಳಾಗಿರದೆ ಇವೇ ದ್ವೀಪಗಳಾಗಿ ಮಾರ್ಪಾಡಾಗಿವೆ. ಸಾಗರದ ಅತಲದಲ್ಲಿನ ಎಲ್ಲಾ ಪರ್ವತಗಳ ಸಂಬಂಧಗೊಳಿಸಿದಂತಹ ಒಂದು ಬೃಹತ್ ಸಮುದ್ರ ಪರ್ವತ ಶ್ರೇಣಿಯೇ ಇದೆ. ಮಧ್ಯಂತರ ಸಮುದ್ರದ ಪರ್ವತ ಶ್ರೇಣಿಯಾದ ಇದರ ಮುಂದೆ ನಮ್ಮ ಹಿಮಾಲಯ ಏನೇನೂ ಅಲ್ಲ, ಹೆಚ್ಚುಕಡಿಮೆ ನಮ್ಮ ಹಿಮಾಲಯದ 15 ಪಟ್ಟು ದೊಡ್ಡದಾದ ಈ ಶ್ರೇಣಿ ಸುಮಾರು 75,000 ಕಿ.ಮೀ.ನಷ್ಟು ಒಟ್ಟು ಉದ್ದವನ್ನು ಹೊಂದಿದೆ. ಮೂರೂ ಮಹಾಸಾಗರಗಳಾದ ಫೆಸಿಫಿಕ್, ಅಟ್ಲಾಂಟಿಕ್ ಮತ್ತು ಹಿಂದೂ ಸಾಗರಗಳನ್ನು ಹಾಯುವ ಮಿಡ್-ಅಟ್ಲಾಂಟಿಕ್-ಉಬ್ಬು (Mid Atlantic Ridge) ಅತೀ ದೊಡ್ಡ ಉಬ್ಬು ಆಗಿದೆ. ಇಂತಹ ಪರ್ವತ ಶ್ರೇಣಿಯ ಕೆಲವು ಶಿಖರಗಳು ಸಾಕಷ್ಟು ಮೇಲೆ ಬಂದು ದ್ವೀಪಗಳಾಗಿ ಇಂದು ಜನವಸತಿಗೂ ಅನೂಕೂಲ ಮಾಡಿಕೊಟ್ಟವೆ.

ಇದರ ಮಧ್ಯೆ ಅತೀ ದೊಡ್ಡ ಬಿರುಕು ಚಾಚಿದೆ. ಅದರ ಅಗಲ ಸರಿಸುಮಾರು 12 ರಿಂದ 45 ಕಿ ಮೀ. ಇದು ಕೆಲ ಪ್ರದೇಶಗಳಲ್ಲಿ 2 ಕಿ.ಮೀ.ವರೆಗೂ ಆಳವಾಗಿದೆ. ಇದನ್ನೇ ಮಧ್ಯದ ಅಟ್ಲಾಂಟಿಕ್ ರಿಫ್ಟ್ ಎಂದು ಕರೆಯುವರು. ಇದು ರಿಡ್ಜ್ ಉದ್ದಕ್ಕೂ ಸೀಳಿಕೆಯಂತಿದೆ. ಇದರಿಂದ ಇಡೀ ಅಟ್ಲಾಂಟಿಕ್‌ನಲ್ಲಿ ಎಂತಹ ಇಬ್ಭಾಗವಾಗುವುದು ಎಂದರೆ ಎರಡೂ ಬದಿಯಲ್ಲೂ ಬೇರೆ-ಬೇರೆ ಬಗೆಯ ಜೀವಿಗಳನ್ನೇ ಕಾಣಬಹುದಾಗಿದೆ. ಅಷ್ಟರಮಟ್ಟಿಗೆ ಎರಡು ಬಗೆಯ ಸಾಗರದ ಪರಿಸರವನ್ನು ಅದು ಸೃಷ್ಟಿಸಿದೆ.

ಈ ಮಧ್ಯ ಸಾಗರದ ಉಬ್ಬು (Mid Oceanic Ridge)ನ ಒಂದು ಭಾಗ ಹಿಂದೂ ಮಹಾಸಾಗರದಲ್ಲೂ ಚಾಚಿದೆ. ಒಂದು ರೀತಿಯಲ್ಲಿ ತಲೆಕೆಳಕಾದ ಆಕಾರದಲ್ಲಿ ಹಬ್ಬಿದೆ. ಇದರ ಒಂದು ತೋಳು ದಕ್ಷಿಣ ಆಫ್ರಿಕಾದ ದಕ್ಷಿಣ ತುದಿಯಲ್ಲಿ ಆರಂಭಗೊಂಡು, ಉತ್ತರಕ್ಕೆ ಚಾಚಿ, 'ಮಧ್ಯ ಅಟ್ಲಾಂಟಿಕ್' ಉಬ್ಬು (Mid Atlantic Ridge)ನ್ನು ಸೇರಿದೆ. ಮತ್ತೊಂದು ಆಸ್ಟ್ರೇಲಿಯಾದ ಕಡೆಗೆ ಬಾಗಿದೆ. ಅರಬ್ಬೀ ಸಮುದ್ರದೊಳಕ್ಕೆ ಎರಡಾಗಿ ಸೀಳಿ ಚಾಚಿದೆ. ಮಧ್ಯದಲ್ಲಿ ಹಿಂದೂ ಮಹಾಸಾಗರದಲ್ಲಿ ಇದು ಕಾರ್ಲ್ಸ್ ಬರ್ಗ್ ಉಬ್ಬನ್ನುಂಟುಮಾಡಿದೆ. ಮುಂದೆ ಇದೂ ಭಾರತ ಮತ್ತು ಪಾಕಿಸ್ತಾನದ ತೀರದುದ್ದಕ್ಕೂ ಸಾಗಿ ಕೆಂಪು ಸಮುದ್ರದೆಡೆಗೆ ಸೇರಿದೆ. ಈ ಉಬ್ಬುಗಳಿಗೆ ಲಂಬವಾಗಿ ಕೆಲವೊಂದು ಕೊರಕಲುಗಳಿವೆ, ಇವು ಖಂಡಗಳ ಗುಂಟ ಖಂಡಗಳು ಚಲಿಸುತ್ತಿವೆ. ಈ ಕೊರಕಲುಗಳನ್ನೇ ಫ್ರಾಕ್ಚರ್ ವಲಯ ಅಥವಾ ಮುರಿತದ ವಲಯ (Fracture Zone) ಎಂದು ಕರೆಯಲಾಗುವುದು. ಅಂತಾರಾಷ್ಟ್ರೀಯ ಹಿಂದೂ ಮಹಾಸಾಗರದ ಯಾನವು ಸಾಗರದ ತಳವನ್ನು ಕುರಿತು ಕೆಲವೊಂದು ವಿಶೇಷ ಮಾಹಿತಿಯನ್ನು ಗಳಿಸಿಕೊಟ್ಟಿದೆ. ಬಂಗಾಳಕೊಲ್ಲಿಯಿಂದ ದಕ್ಷಿಣಕ್ಕೆ ಸುಮಾರು 1500 ಮೈಲು ಉದ್ದದ ಒಂದು ಉಬ್ಬು ಹಬ್ಬಿದೆ ಇದ ನೈಂಟಿ-ಈಸ್ಟ್ ಉಬ್ಬು (ಪೂರ್ವದ 90 ರ ಉಬ್ಬು) ಎನ್ನುವರು, ಕಾರಣ ಅದು ರೇಖಾಂಶಿಯ ಸ್ಥಳದಲ್ಲಿರುವುದ ಇದು ಜಗತ್ತಿನ ಅತಿ ದೊಡ್ಡ ಭೌತಿಕ ಆಕೃತಿಯೆಂದು ನಂಬಲಾಗಿದೆ.

ಭೂಮಿಯ ಮೇಲ್ಮೈಯಲ್ಲಿನ ಪರ್ವತಗಳಿಗೆ ಮೈದಾನಗಳಿಗೆ ಹೇಗೆ ಹೆಸರನ್ನಿಡಲಾಗಿದೆಯೋ ಹಾಗೆಯೆ ಸಮುದ್ರದೊಳಗಿನ ಪರ್ವತ, ಮೈದಾನಗಳಿಗೂ ಹೆಸರಿಡಲಾಗಿದೆ. ಅದನ್ನು ಕಂಡುಹಿಡಿದವರೇ ಅದಕ್ಕೆ ನಾಮಕರಣವನ್ನು ಮಾಡಿದ್ದಾರೆ. ಮೊನಾಕಾದ ಅಂತಾರಾಷ್ಟ್ರೀಯ ಹೈಡ್ರೋಗ್ರಾಫಿಕ್ ಸಂಸ್ಥೆಯು ಈ ಸಮುದ್ರ ಬೆಟ್ಟಗಳೂ ಮತ್ತೆ ಮೈದಾನಗಳಿಗೂ ಒಂದು ವ್ಯವಸ್ಥಿತವಾದ ನಾಮಕರಣ ಪದ್ಧತಿಯನ್ನೂ ರೂಪಿಸಿದೆ. ನಮ್ಮಲ್ಲಿನ ಕೆಲ ಹೆಸರುಗಳು ಹೀಗಿವೆ. ರಾಮನ್ ಸಮುದ್ರ ಬೆಟ್ಟ, ಫಣಿಕ್ಕರ್ ಸಮುದ್ರ ಬೆಟ್ಟ, ಸಾಗರಕನ್ಯ ವಾಡಿಯಾ ಗಾಮ್ಸ್ ಇವ ನಮ್ಮವರೇ ಆದ ವಿಜ್ಞಾನಿಗಳ ಹೆಸರುಗಳೇ ಅಲ್ಲವೆ.

ಸಾಗರದ ಅತೀ ವಿಶೇಷಗಳು


ನಮ್ಮ ಹಿಮಾಲಯ, ರುದ್ರ ರಮಣೀಯ ಎವರೆಸ್ಟ್ ಪರ್ವತ ಇವೆಲ್ಲಾ ನಮ್ಮ ಹೆಮ್ಮೆ ಎಂದೇ ನಮಗೆಲ್ಲಾ ಗೊತ್ತು ಆದರೆ ಸಾಗರದೊಳಗೂ ಕೆಲವು ಇವೆ ನೋಡಿ ಅವು ಅಚ್ಚರಿ ತರಿಸುವಷ್ಟು ದೊಡ್ಡವು. ಸುಮಾರು 8,84 ಮೀ ಎತ್ತರದ ಎವರೆಸ್ಟ್ ಶಿಖರವು ಭೂಮಿಯ ಮೇಲಿ ಅತ್ಯಂತ ಎತ್ತರವಾದ ಶಿಖರವೆಂದು ನಮಗೆಲ್ಲಾ ಗೊತ್ತು ಆದರೆ ಇಡೀ ಭೂಮಿಯಲ್ಲಿನ ಅತೀ ಎತ್ತರವಾದದ್ದು ಇನ್ನೊಂದಿದೆ ಎಂದು ಊಹಿಸಲಾಗಿದೆ. ಆ ಇನ್ನೊಂದು ಸಮುದ್ರದೊಳಗೆ ಮುಳುಗಿಹೋಗಿರುವ ಸಮೋಪ್ ಮತ್ತು ನ್ಯೂಜಿಲೆಂಡ್ ಮಧ್ಯದಲ್ಲಿ ಫೆಸಿಫಿಕ್ ಮಹಾಸಾಗರದಲ್ಲಿ ಕಂದಕದಲ್ಲಿದೆ. ಇಂತಹದ್ದೊಂದು ಪರ್ವತ ಶಿಖರದ ಎತ್ತರ ಎತ್ತರ 9,500 ಮೀ. ಆದರದು ನೀರಮೇಲೆ ಚಾಚಿ ಬಂದಿಲ್ಲ, ಹಾಗಾಗಿ ಕಾಣುವುದಿಲ್ಲ, ಫಿಲಿಪೈನ್ಸ್‌ನ 'ಮರೀನ ಕಂದಕವು ಜಗತ್ತಿನ ಅತ್ಯಂತ ಆಳವಾದ ಕಂದಕವಾಗಿದೆ ಸುಮಾರು 11 ಕಿ.ಮೀ. ಆಳದ ಈ ಕಂದಕದಲ್ಲಿ ಸುಲಭವಾಗಿ ಎವರೆಸ್ಟನ್ನು ಮುಳುಗಿಸಬಹುದು. ಹಾಗಾದರೂ ಕಂದಕವು ಇನ್ನೂ ಸಾಗರದ ಮೇಲ್ಮೈಯಿಂದ ಒಂದೂವರೆ ಕಿ.ಮೀ. ಆಳವಾಗಿ ಇರುತ್ತದೆ.

ನಮ್ಮ ಜೀವನದಲ್ಲಿ ಸಾಗರಗಳು

ಮಳೆ-ಗಾಳಿ, ಬರ-ನೆರೆ, ಇವುಗಳ ನಿಯಂತ್ರಿಸುತ್ತಾ ಸಾಗರಗಳು ನಿಜವಾಗಿಯೂ ಮಾನವನ ಎಲ್ಲಾ ಚಟುವಟಿಕೆಯ ನಿಯಂತ್ರಕರು. ಚಟುವಟಿಕೆಯ ಎಲ್ಲಾ ಬಗೆಯ ಬದಲಾವಣೆಯನ್ನೂ - ಎಲ್ಲಾ ಸ್ತರಗಳಲ್ಲಿಯೂ ಗುರುತಿಸಬಲ್ಲವು. ನಾವು ಅನೇಕ ಬಗೆಯ ತಂತ್ರಜ್ಞಾನಗಳೊಂದಿಗೆ 20 ನೇ ಶತಮಾನದ ಅಂತ್ಯವನ್ನು ತಲುಪಿದರೂ, ನಮ್ಮನ್ನು ಸುಮಾರು 7 ಬಗೆಯ ಪ್ರಶ್ನೆಗಳು ಕಾಡುತ್ತವೆ ಎಂಬುದು ವಿಜ್ಞಾನಿಗಳ ಅಭಿಮತ, ಇವುಗಳಿಗಾಗಿ ಅವನ ಹುಡುಕಾಟ ಅನಿವಾರ್ಯವಾಗಿರುತ್ತದೆ ಎನ್ನಲಾಗುತ್ತದೆ ಸ್ಥಳ, ನೀರು, ಆಹಾರ, ಹವಾಮಾನ, ಶಕ್ತಿ, ಖನಿಜಗಳು ಮತ್ತು ಜ್ಞಾನ ಆ ಏಳು ಬಗೆಯ ವಿಚಾರಗಳು. ಇವ ನಿರಂತರ ಹುಡುಕಾಟ ನಡೆದೇ ಇದೆ. ಗೊತ್ತಿರುವ, ಗೊತ್ತಿಲ್ಲದ ಎಲ್ಲೆಲ್ಲೂ ಹುಡುಕಾಟ ನಡೆಸಿದಾಗ್ಯೂ, ಒಂದು ಪ್ರಶ್ನೆ ಮಾತ್ರ ಉತ್ತರಿಸುವಲ್ಲಿ ಅದರ ಮೂಲ ಅನನ್ಯವಾಗಿ ಅದೇ ಸಾಗರಗಳು.

ಸಾಗರಗಳು ಮಾನವ ಜೀವನದಲ್ಲಿ ಅತ್ಯಂತ ಪ್ರಮುಖ ಪಾತ್ರವಹಿಸಿವೆ. ತೀರ ಅಪರಿಚಿತವಾದ ಪ್ರದೇಶಕ್ಕೂ ತವ ಲಗ್ಗೆ ಹಾಕಿ ಅವು ವರ್ತಿಸಿವೆ. ಇಂದಿಗೂ ಪರೋಕ್ಷವಾಗಿಯೋ, ಪ್ರತ್ಯಕ್ಷವಾಗಿಯೋ ತಮ್ಮ ಸಂಬಂಧವ ತೋರಿಸುತ್ತಲೇ ಇವೆ.

ನೆಲದಮೇಲಿನ ಹವಾಮಾನದ ಮೇಲೆ ಸಾಗರ ಪ್ರಭಾವ ಅಪಾರ. ಬೀಸುವ ಗಾಳಿ, ಸುರಿವ ಮಳೆ ಎಲ್ಲವೂ ಸಾಗರದಲ್ಲೇ ಜನನ ಪಡೆದವು. ಹಿಂದೂ ಮಹಾಸಾಗರದ ತನ್ನ ಇರುವಿಕೆಯನ್ನು ಪಡೆದ ಭಾರತ ಉಪಖಂಡ ಸಾಗರದ ನೈರುತ್ಯ ದಿಕ್ಕಿನಿಂದ ಬೀಸಿದ ಗಾಳಿಯಿಂದ, ತಿ ಅಪರೂಪದ ಹಾಗೂ ನಮ್ಮದೇ ಆದ ಹವಾಮಾನವನ್ನು ಪಡೆದಿದೆ. ಇದನ್ನೇ 'ಮಾನ್‌ಸೂನ್' ಎಂದು ಕರೆಯಲಾಗಿ ನೈರುತ್ಯ ದಿಕ್ಕಿನಿಂದ ಆರು ತಿಂಗಳು ಮತ್ತು ವಿರು ದಿಕ್ಕಿನಿಂದ ಆರು ತಿಂಗಳು ಬೀಸುವ ಗಾಳಿಗೆ ಹಿ ಹೆಸರಿಸಲಾಗಿದೆ. ಈ ಮಾನ್‌ಸೂನ್‌ದೇ ಒಂದು ವಿಶೇ ಕಥನ. ಅದನ್ನು ಮುಂದೊಮ್ಮೆ ಅನುರಣಿಸೋಣ.



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಸುಪಾರಿ ಸುಂದರಿ

ವಿಷಕನ್ಯೆಯರ ಬಗ್ಗೆ ಪುರಾಣ, ಇತಿಹಾಸ ಮತ್ತು ...ನಪದ ಕಥೆಗಳಲ್ಲಿ ಕೇಳುತ್ತೇವೆ. ವಿಷಕನ್ಯೆಯರ ಕೆಲಸವೇ ...ರ್ದಿಷ್ಟ ವ್ಯಕ್ತಿಗಳ (ತಮ್ಮನ್ನು ಕಳಿಸುವವರ ಶತ್ರುಗಳ) ...ಳಿಗೆ ಹೋಗಿ ಸರಸಸಲ್ಲಾಪಗಳಿಂದ ಆಕರ್ಷಿಸಿ, ಮಲಗಿ ...ಸುತ್ತಾರೆ. ಅವಳನ್ನು ಲೈಂಗಿಕವಾಗಿ ಕೂಡಿದ ವ್ಯಕ್ತಿ ...ಯುತ್ತಾನೆ.

ಇದನ್ನು ಒಪ್ಪುವುದಕ್ಕೆ ಅಥವಾ ಬಿಡುವುದಕ್ಕೆ ಬಹಳಷ್ಟು ...ವಿರೋಧಗಳ ವಿಚಾರಗಳು ಬರುತ್ತವೆ. ಅದೇನೇ ಆದರೂ ...ನ್ನು ಶತ್ರುಗಳೆಂದು ಗುರುತಿಸುವವರನ್ನು ಅಂತ್ಯಗೊಳಿಸಲು ...ಣ್ಣುಗಳನ್ನು ಅಸ್ತ್ರವನ್ನಾಗಿ ಬಳಸಿಕೊಳ್ಳುತ್ತಿದ್ದರು ...ಬುದಂತೂ ನಿಜ.

2009ರಲ್ಲಿ ಮರಾಠಿಯಲ್ಲಿ ವಿಭಾ ರಾಹಿ ಬರೆದಿರುವ ...ಷಕನ್ಯಾ: ಹೇಳದಿರುವ ರಹಸ್ಯಗಳು' ಎಂಬ ...ಚರಿತ್ರೆಯಲ್ಲಿ ಸಮಾಜದ ಮೇಲಿನ ಶ್ರೇಣಿಯಲ್ಲಿರುವ ...ಗಸರು ಅತ್ಯಂತ ಶಕ್ತಿಶಾಲಿಯಾಗಿ ಅಧಿಕಾರ ಹಿಡಿದಿರುವ ...ಸ್ತರದ (ಶೂದ್ರ, ದಲಿತ) ವರ್ಗ ಮತ್ತು ಜಾತಿಗಳ ...ಯಕರೊಂದಿಗೆ ಆತ್ಮೀಯವಾದ ಹುಸಿ ಸಂಬಂಧ ಬೆಳೆಸಿ ...ತರ ಅವರ ಕುಟುಂಬಗಳನ್ನು ಮತ್ತು ಸಾಮಾಜಿಕ ,



...ಸಂಬಂಧಗಳನ್ನು ಹಾಳುಗೆಡವುತ್ತಾರೆ ಎಂಬುದನ್ನು ...ರೂಪಿಸಲಾಗಿದೆ. ಈ ರಹಸ್ಯ ಕಾರ್ಯಾಚರಣೆಯ ಎಳೆಯು ...ಚಾಮುಂಡಿ ಮಹಿಷಾಸುರನ ಬಳಿಯವರೆಗೂ ಹೋಗುತ್ತದೆ. ...ಮಹಿಷಾಸುರ ಮರ್ಧಿನಿ ಹೇಗಾದಳು ಎಂಬ ಕಥೆ ...ಳಿಯುತ್ತದೆ.

ಇರಲಿ, ಈ ಬಗೆಯ ಕಾರ್ಯತಂತ್ರಗಳನ್ನು ...ಳಸಿರುವುದು ಪುರಾಣಗಳಾಗಿ ಹೋಗಿರುವ ಇತಿಹಾಸಗಳಲ್ಲಿ ...ಮಾತ್ರವಲ್ಲದೇ, ಮೌರ್ಯರ ಕಾಲದಲ್ಲಿ, ಅಷ್ಟೇಕೆ ಅಕ್ಬರನ ...ಕಾಲದಲ್ಲಿಯೂ ದಾಖಲೆಗಳು ಸಿಗುತ್ತವೆ.

ಸುಪಾರಿ ದೇವಿಯರು

ಭಾರತೀಯ ಪುರಾಣಗಳಲ್ಲಿ ಬಹಳಷ್ಟು ಅಸುರರನ್ನು ...ಶ ಮಾಡಿರುವುದೆಲ್ಲಾ ದೇವಿಯರು. ದೇವತೆಗಳು ಮತ್ತು ...ಋಷಿಗಳು ಅಸುರರ ಮೇಲೆ ದೂರು ಹೊತ್ತು ಹೋಗುತ್ತಾರೆ. ... ಅಸುರರಿಂದ ತನಗೇನೂ ಆಗಿರದಿದ್ದರೂ ದೇವಿ ಸುಪಾರಿ ...ಸ್ವೀಕರಿಸುತ್ತಾಳೆ. ಈ ದೇವಿಯರು ಕತ್ತಿ ಗುರಾಣಿ ಹಿಡಿದು ...ಬಲಾಢ್ಯ ರಕ್ಕಸರನ್ನು ಮತ್ತು ದೈತ್ಯರನ್ನು ಎದುರಿಸಿ ...ಹೋರಾಡಿರುವುದಕ್ಕಿಂತ ಆಕರ್ಷಿಸಿ ಸೆಳೆದು ಮುಗಿಸಿರುವ ...ಸಾಧ್ಯತೆಗಳೇ ಹೆಚ್ಚು. ಆದರೆ, ಅದನ್ನು ಆ ರೀತಿಯಲ್ಲಿ ...ಹೇಳುವುದು ತಪ್ಪಾದ್ದೇ ಅನೈತಿಕತೆಯ ...ರೂಪಣೆಯಾಗುವುದರಿಂದ ಕತ್ತಿ ಗುರಾಣಿಗಳನ್ನು ಕೊಟ್ಟು ...ನಸ್ಸಿನ ವೀರಾವೇಶದಿಂದ ಹೋರಾಡಿ ಕೊಂದರು ಎಂಬ ...ವೈಭವೀಕೃತವಾದ ಕಥೆಗಳನ್ನು ಕಾಲಾನುಸಾರ ಕಟ್ಟಿರುವ ...ಸಾಧ್ಯತೆಗಳು ಬಹಳ ಗಾಢವಾಗಿದೆ.

ವಿಷಕನ್ಯೆಯರ ಜಾತಕ

ಭಾರತದಲ್ಲಿಯೇ ಒಂದೊಂದು ಕಡೆ ಒಂದೊಂದು ...ಗೆಯ ಹೆಂಗಸರನ್ನು ವಿಷಕನ್ಯೆಯರನ್ನಾಗಿ ಬಳಸಿಕೊಳ್ಳು...ತ್ತಿದ್ದರು.

320 ಕ್ರಿಸ್ತಪೂರ್ವದಲ್ಲಿ ಸುಂದರವಾದಂತಹ ಕನ್ಯೆಯರನ್ನು ...ಳೆಯ ಬಾಲಕಿಯರನ್ನು) ಗುರುತಿಸಿ ಅವರು ...ದೊಡ್ಡವರಾಗುವವರೆಗೂ ಅತ್ಯಂತ ಸಣ್ಣ ಸಣ್ಣ ಪ್ರಮಾಣದಲ್ಲಿ ...ವಿಷವನ್ನು ನೀಡುತ್ತಾ ಅವರು ವಿಷಕ್ಕೆ ಅಸೂಕ್ಷ್ಮರಾಗುವಂತೆ ...ಮಾಡುತ್ತಿದ್ದರಂತೆ. ನಂತರ ಅವರು ವಿಷಪೂರ್ಣ ...ರಾಗಿದಾಗ ಅವರನ್ನು ತಾವು ನಾಶಗೊಳಿಸಬಯಸುವ

ಶತ್ರುವಿನ ಬಳಿಗೆ ಕಳುಹಿಸಿ ಅವರ ನಾಶ ಮಾಡುತ್ತಿದ್ದರಂತೆ.

ವೈಜ್ಞಾನಿಕವಾಗಿ ಇದನ್ನು ವಿಶ್ಲೇಷಿಸುವುದು ಮತ್ತು ಒಪ್ಪುವುದು ಬಹಳ ಕಷ್ಟದ ಕೆಲಸ. ಆದರೆ, ಇಂತಹ ಮಿಥ್‌ಗಳಲ್ಲೂ ಗತಕಾಲದ ಸತ್ಯದ ಅಂಶಗಳು ಅಡಗಿರುತ್ತವೆ ಎಂಬುದು ನಿಜ.

ಕೆಲವು ಕಡೆಗಳಲ್ಲಿ ವಿಷಕನ್ಯೆಯನ್ನಾಗಿ ಬುಡಕಟ್ಟಿನ ಹೆಂಗಸರನ್ನು ಉಪಯೋಗಿಸಿಕೊಂಡರೆ ಮತ್ತೆ ಕೆಲವು ಕಡೆ ದಾಸಿಯರ ಮಕ್ಕಳನ್ನು ಪ್ರಭುತ್ವದವರು ಉಪಯೋಗಿಸಿಕೊಳ್ಳುತ್ತಿದ್ದರು. ವೈದಿಕರಲ್ಲಿಯೂ ಶತ್ರುನಾಶಕ್ಕೆ ಈ ಪ್ರಯೋಗವನ್ನು ಹೆಚ್ಚಿನ ಪ್ರಮಾಣಗಳಲ್ಲಿ ಮಾಡಿದ್ದಾರೆ. ನವ ಭರತಖಂಡದ ಇತಿಹಾಸದ ಕುಟಿಲತೆಯ ಪಿತಾಮಹ ಕೌಟಿಲ್ಯನೂ ತನ್ನ ಅರ್ಥಶಾಸ್ತ್ರದಲ್ಲಿ ಇದನ್ನು ಉಲ್ಲೇಖಿಸುತ್ತಾನೆ.

ವೈದಿಕಾಗ್ರಣ್ಯರು ಇನ್ನೂ ಶಾಸ್ತ್ರೀಯವಾಗಿ ಹೆಣ್ಣುಗಳನ್ನು ವಿಷಕನ್ಯೆಯಾಗುವ ಪ್ರಾರಬ್ಧಕ್ಕೆ ತಳ್ಳುತ್ತಾರೆ. ಆ ಹೆಣ್ಣು ಮಕ್ಕಳು ಹುಟ್ಟುವುದೇ ವಿಷಕನ್ಯಾ ಯೋಗದಲ್ಲಂತೆ.

ಯಾವ ಹೆಣ್ಣು ಮಗುವು ಸೋಮವಾರ, ಮಂಗಳವಾರ ಬಾದ್ರತಿಥಿಯಲ್ಲಿ, ಕೃತಿಕಾ, ಆಶ್ಲೇಷಾ, ಮೂಲ ಮತ್ತು ಶತತಾರ್ಕ ನಕ್ಷತ್ರದಲ್ಲಿ ಜನಿಸಿದರೆ ವಿಷಕನ್ಯಾ ಯೋಗವನ್ನು ಹೊಂದಿರುತ್ತದೆ ಎಂದು ಒಂದು ಕಡೆ ಹೇಳಿದರೆ, ಮತ್ತೆ ಕೆಲವು ಕೃತಿಗಳಲ್ಲಿ ಭಾದ್ರ ತಿಥಿಗಳಲ್ಲಿ ಶನಿವಾರ, (ದ್ವಿತೀಯ) ಆಶ್ಲೇಷಾ - ಮಂಗಳವಾರ (ಸಪ್ತಮಿ) ಶತಭಿಷಾ - ಭಾನುವಾರ (ದ್ವಾದಶಿ) ಕೃತಿಕಾ ನಕ್ಷತ್ರಗಳಲ್ಲಿ ಹುಟ್ಟಿದ್ದು, ಶನಿಯು ಉಚ್ಚಸ್ಥಾನದಲ್ಲಿದ್ದು ಸೂರ್ಯ ಐದನೆಯ ಭಾವದಲ್ಲಿ ಮತ್ತು ಮಂಗಳ ಒಂಭತ್ತನೆಯ ಭಾವದಲ್ಲಿ ಜನಿಸಿದ್ದರೆ - ಅವಳದು ವಿಷಕನ್ಯಾ ಯೋಗ. ಗುಜರಾತ್ ಮತ್ತು ರಾಜಾಸ್ತಾನದಲ್ಲಿ ಇದರ ಕುರಿತಾದ ಬಹಳ ಪ್ರಾಚೀನ ಕಥೆಗಳಿವೆ.

ಇಂಥಾ ವಿಷಕನ್ಯಾ ಯೋಗದಲ್ಲಿ ಹುಟ್ಟಿದ ಹೆಣ್ಣು ಮಗುವು ಬದುಕುಳಿಯಲಾರದು. ಉಳಿದರೂ ಹೆಚ್ಚು ಕಾಲ ಬದುಕಲಾರದು. ಬದುಕಿದರೂ ಅವಳು ತನ್ನ ಕುಟುಂಬಕ್ಕೆ ಕೆಡಕನ್ನು ತರುತ್ತಾಳೆ. ಅವಳ ಮದುವೆಯ ಕಾಲದಲ್ಲಿ ಅವಳೆಷ್ಟು ದುರದೃಷ್ಟವಂತೆ ಎಂಬುದನ್ನು ಮದುಮಗನ ಮೇಲಾಗುವ ಪರಿಣಾಮಗಳನ್ನು ನೋಡಿ ಗ್ರಹಿಸಬಹುದಂತೆ.

ಹೆಣ್ಣುಮಗುವಿನ ಜಾತಕದಲ್ಲಿ ಏಳನೆಯ ಮನೆಯಲ್ಲಿ ಮಂಗಳ ಗ್ರಹವಿದ್ದರೆ ಆಕೆ ಸಣ್ಣ ವಯಸ್ಸಿಗೇ ವಿಧವೆಯಾಗುತ್ತಾಳಂತೆ. ಒಂದು ವೇಳೆ ಪಾಪಗ್ರಹವು ಚಂದ್ರನಿಂದ ಏಳು ಮತ್ತು ಎಂಟನೆಯ ಮನೆಗೆ ಬಂದು, ರಾಹುವು ಎಂಟು ಮತ್ತು ಹನ್ನೆರಡನೆಯ ಮನೆಯಲ್ಲಿದ್ದು, ಮೇಷ ಮತ್ತು ವೃಶ್ಚಿಕರಾಶಿಯಲ್ಲಿದ್ದರೆ ಆಕೆಯೂ ವಿಧವೆಯಾಗುವಳು. ಹೀಗೆ ಒಂದು ಹೆಣ್ಣು ಮಗುವಿನ ಪ್ರಾರಬ್ಧಗಳನ್ನು ನಿರ್ಧರಿಸುವಂತಹ ಜಾತಕಗಳನ್ನು ನೋಡಿ ಅವರನ್ನು ಕೂಡ (ಶತ್ರು ಸಂಹಾರದ) ವಿಷಕನ್ಯೆಯರ ಪ್ರಯೋಗಕ್ಕೆ ತೆಗೆದುಕೊಳ್ಳುವುದೂ ಉಂಟಂತೆ.

ಬಹುಶಃ ಕೊಂಚ ಕೊಂಚವಾಗಿ ವಿಷವುಣ್ಣಿಸುವ ಪ್ರಯೋಗವಾಗಲಿ ಅಥವಾ ವಿಷಕನ್ಯಾ ಜಾತಕದವರನ್ನು ಪ್ರಾಯೋಗಿಕ ವಿಷಕನ್ಯೆಯರನ್ನಾಗಿಸುವ ಭ್ರಮೆಯ ಅಥವಾ ಅವಿವೇಕದ ಪ್ರಯೋಗಗಳಾಗಲಿ ವಿಫಲವಾಗಿರಬೇಕು. ಆದರೆ, ಆ ಭಯವನ್ನು ಅಥವಾ ಆ ಬಗೆಯ ಜನರ ಬಗ್ಗೆ ವಿಶ್ವಾಸಾರ್ಹವಾದ ಆತಂಕ ಮತ್ತು ನಂಬಿಕೆಯನ್ನು ಉಳಿಸಿರಲು ವಿಷಕನ್ಯೆಯ ಬಗ್ಗೆ ವಿಚಾರಗಳನ್ನು ಜೀವಂತವಾಗಿರಿಸಿರಬೇಕು. ಆದರೆ ಈ ವಿಷಕನ್ಯೆಯರು ವಿಷವುಣಿಸುವುದರಲ್ಲಿ ನಿಷ್ಣಾತರಾಗಿರಬೇಕು.

ಕೆಲವು ಐತಿಹ್ಯಗಳ ಪ್ರಕಾರ ಅರಿಸ್ಟಾಟಲ್ ಅಲೆಕ್ಸಾಂಡರ್‌ನಿಗೆ ಇಂತಹ ವಿಷಕನ್ಯೆಯರ ಬಗ್ಗೆ ಎಚ್ಚರಿಕೆಯಿಂದ ಇರಬೇಕೆಂದು ಸಲಹೆ ನೀಡಿದ್ದನಂತೆ. ಹಾಗೆಯೇ ಅಲೆಕ್ಸಾಂಡರ್ ಭಾರತದಲ್ಲಿ ಸೋಲಿಸಿದ್ದ ಪೋರಸ್ ಅವನಿಗೆ , ಓರ್ವ ವಿಷಕನ್ಯೆಯನ್ನು ಕೊಡುಗೆಯಾಗಿ ನೀಡಿದ್ದನಂತೆ. ಅದನ್ನು ತಿಳಿಯದ ಅಲೆಕ್ಸಾಂಡರ್ ಅವಳನ್ನು ಕೂಡಿ ಸತ್ತನೆಂದು ಹೇಳುತ್ತಾರೆ. ಇತಿಹಾಸದ ದಾಖಲೆಗಳು ಬೇರೆ ಹೇಳುತ್ತವೆಯಾದರೂ ಶತ್ರುಗಳ ನಾಶಕ್ಕೆ ಹೆಣ್ಣುಗಳನ್ನು ಬಳಸುವ ಪಂಡಿತರೂ ಮತ್ತು ಪ್ರಭುತ್ವಗಳೂ ಇದ್ದವು ಎಂಬುದು ನಿಜ.


ಕಲ್ಕಿ ಪುರಾಣದಲ್ಲಿ ವಿಷಕನ್ಯೆಯರು ಗಮನವಿಟ್ಟು ನೋಡಿದರೆ ಸಾಕು ಮರಣ ಹೊಂದುವುದರ ಬಗ್ಗೆ ಉಲ್ಲೇಖಿಸುತ್ತದೆ. ಸುಲೋಚನ ಎಂಬ ವಿಷಕನ್ಯೆಯ ಪ್ರಸ್ತಾಪವು ಇಲ್ಲಿ ಬರುತ್ತದೆ. ಅವಳು ಚಿತ್ರಗ್ರೀವನೆಂಬ ಗಂಧರ್ವನ ಹೆಂಡತಿ. ಅವನು ಗಂಧರ್ವನಾದ್ದರಿಂದ ಗಂಡನಾದರೂ ಸಾಯಲಾರ.

ಇನ್ನು ಮೌರ್ಯರ ಕಾಲದಲ್ಲಿ ನಂದರ ಮಂತ್ರಿ ಅಮಾತ್ಯ ರಾಕ್ಷಸ ಚಂದ್ರಗುಪ್ತನನ್ನು ಕೊಲ್ಲಲು ವಿಷಕನ್ಯೆಯೊಬ್ಬಳನ್ನು ಕಳುಹಿಸುತ್ತಾನೆ. ಚಾಣಾಕ್ಷ ಚಾಣಕ್ಯ ಅದನ್ನು ಕಂಡುಕೊಂಡು ಅದೇ ಕನ್ಯೆಯನ್ನು ಪರ್ವತಕನ ಬಳಿಗೆ ಕಳುಹಿಸಿ ಅವನನ್ನು ಕೊಲ್ಲಿಸುತ್ತಾನೆ.

ವಿಷಕನ್ಯೆ ಎಂಬ ಮಿಥ್?

ಸಣ್ಣ ಪ್ರಮಾಣದಲ್ಲಿ ವಿಷವನ್ನು ನೀಡುತ್ತಾ ಅವರು ದೊಡ್ಡವರಾಗುವ ಹೊತ್ತಿಗೆ ಸಂಪೂರ್ಣ ವಿಷದ ಕನ್ಯೆಯರಾಗಿದ್ದು, ಅವರನ್ನು ಕೂಡಿದಂತಹ ವ್ಯಕ್ತಿಯು ವಿಷದಿಂದಾಗಿ ಸಾಯುತ್ತಾನೆಂಬುದು ಸತ್ಯವಿರಲಾರದು. ಬದಲಾಗಿ ಸುಂದರ ಹುಡುಗಿಯರನ್ನು ಸಮ್ಮೋಹನಗೊಳಿಸಲು ಮತ್ತು ಅವರು ಕೂಡಿದ ವ್ಯಕ್ತಿಯನ್ನು ಅಷ್ಟೇ ನಾಜೂಕಾಗಿ ವಿಷಪ್ರಯೋಗ ಮಾಡಿ ಕೊಲ್ಲಿಸುವ ಸಾಧ್ಯತೆಗಳನ್ನು ಅಲ್ಲಗಳೆಯುವಂತಿಲ್ಲ. ಅವರಿಗೆ ಅಷ್ಟು ನಾಜೂಕಾಗಿ ವಿಷವುಣಿಸುವ ವಿಶೇಷವಾದ ತರಬೇತಿಯನ್ನು ನೀಡಬಹುದು. ಆ ವೇಶ್ಯೆಯರು ಅಥವಾ ಆ ಬಗೆಯ ಹೆಂಗಸರು ಆ ಕೆಲಸದಲ್ಲಿ ನಿಷ್ಣಾತರಾಗಿದ್ದು ಅತ್ಯಂತ ಸಮರ್ಪಕವಾಗಿ ವಿಷವನ್ನು ನೀಡಿ ಕೊಲ್ಲಬಹುದು. ಹಾಗೆಯೇ ಇದು ಬಹಳ ವ್ಯಾಪಕದಲ್ಲಿದ್ದ ರೂಢಿಯೂ ಆಗಿತ್ತು. ಹಾಗಾಗಿ ಚಾಣಕ್ಯನ ಅರ್ಥಶಾಸ್ತ್ರದಲ್ಲಿ ವಿಷಪ್ರಯೋಗಗಳನ್ನು ಗುರುತಿಸುವುದು, ವಿಷಪೂರಿತ ಆಹಾರಗಳನ್ನು ಪ್ರಯೋಗಗಳಿಂದ ಕಂಡುಹಿಡಿಯುವುದು, ವಿಷವುಣಿಸಲು ಬಂದಿರುವ ವ್ಯಕ್ತಿಯ ವರ್ತನೆ ಮತ್ತು ಆತನ ಪತ್ತೆ ಹಚ್ಚುವುದು; ಇತ್ಯಾದಿಗಳ ವಿವರಣೆ ಇದೆ.

ಭೋಗ ಜೀವನದಲ್ಲಿ ಮತ್ತು ವಿಲಾಸಗಳಲ್ಲಿ ಆಸಕ್ತರಾಗಿರುವಂತಹ ತಮ್ಮ ವಿರೋಧಿಗಳ ಸ್ತ್ರೀ ದೌರ್ಬಲ್ಯವನ್ನು ತಿಳಿದುಕೊಂಡು, ಅಂತವರ ಬಳಿ ಈ ವಿಷಕನ್ಯೆಯನ್ನು ಕಳುಹಿಸುವ ಪದ್ಧತಿಯೇನೋ ಸೈ. ಆದರೆ ನೈತಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಜೀವನ ನಡೆಸುತ್ತಿರುವ ಬುದ್ಧನ ನಾಶ ಮಾಡಲು ಇಂತಹ ವಿಷಕನ್ಯೆಯರು ಕೆಲಸಕ್ಕೆ ಬರುವುದಿಲ್ಲ. ಮಿಗಿಲಾಗಿ ಬುದ್ಧನು ಸತ್ತರೆ ಪ್ರಯೋಜನವಿಲ್ಲ. ಅವನು ಬದುಕಿದ್ದು ಅವನ ಚಾರಿತ್ರ್ಯಹೀನನೆಂದು ಕರೆಸಿಕೊಳ್ಳಲ್ಪಟ್ಟು ಅವನಿಗೆ ದಕ್ಕಿರುವ ಖ್ಯಾತಿ ಮತ್ತು ಗೌರವ ಸ್ಥಾನವು ಪತನವಾಗಬೇಕಿತ್ತು, ಹಾಗಾಗಿ ಸುಪಾರಿಯನ್ನು ಸುಂದರಿಗೆ ನೀಡಿದ್ದು.



ಕೀರ್ತಿಗೆ ಅಪಕೀರ್ತಿಯನ್ನು ಬಳಿಯುವ ಬಗೆ

ಬುದ್ಧನ ಆಧ್ಯಾತ್ಮಿಕ ಪ್ರಚಾರ ಜೀವನದ ಇಪ್ಪತ್ತನೆಯ ವರ್ಷದಲ್ಲಿ ಎರಡು ಬಹಳ ಮುಖ್ಯವಾದ ಘಟನೆಗಳು ನಡೆದವು. ಮೊದಲನೆಯದು ಅಂಗುಲಿ ಮಾಲನೆಂಬ ಕುಖ್ಯಾತ ದರೋಡೆಕೋರನೊಬ್ಬ ಬದಲಾದದ್ದು, ಮತ್ತೊಂದು, ಆ ಖ್ಯಾತಿಯನ್ನು ಸಹಿಸದ ಸನಾತನಿಗಳು ಬುದ್ಧನನ್ನು ಮುಗಿಸಲು ಸಂಚು ಹೂಡಿದ್ದು.

ಅಂಗುಲಿಮಾಲನ ಪರಿವರ್ತನೆಯ ವಿಷಯವು



ಬುದ್ಧನಿಗೆ ಖ್ಯಾತಿಯನ್ನು ತರುವುದು ಮಾತ್ರವಲ್ಲದೇ ನೆರೆಹೊರೆಯ ಪ್ರದೇಶದವರು ನೆಮ್ಮದಿಯ ನಿಟ್ಟುಸಿರು ಬಿಟ್ಟರು. ಬುದ್ಧನ ಸಂಘದ ಬಗ್ಗೆ ಗೌರವ ಮತ್ತು ಆದರಗಳು ಹೆಚ್ಚಿದ್ದಲ್ಲದೇ ಸಂಘಕ್ಕೆ ಸೇರುವವರ ಮತ್ತು ಶ್ರಮಣರಾಗಿ ಬರುವವರ ಸಂಖ್ಯೆಯೂ ಹೆಚ್ಚತೊಡಗಿತ್ತು, ಅದರಲ್ಲೂ ಯುವಕರ ಸಂಖ್ಯೆಯು ಹೆಚ್ಚಿತ್ತು.

ಉತ್ತರ ಮಗಧದಲ್ಲಿ ಉಪಾಲಿಯೆಂಬ ಶ್ರೀಮಂತ ಮತ್ತು ಜ್ಞಾನಾಸಕ್ತ ತರುಣನಿದ್ದನು. ನಿಂಗಂತವೆಂಬ ಜ್ಞಾನಕೂಟದ (ಸಂಘದ) ಪ್ರಮುಖ ಪೋಷಕನಾಗಿದ್ದನು. ಅದರ ಮುಖ್ಯ ಗುರು ನಿತಪುತ್ತ ನಿಗಂತದ ಗುರುಪ್ರಮುಖರು ತಮ್ಮ ವಿಶೇಷವಾದ ಪೋಷಾಕುಗಳಿಂದಲೂ ಮತ್ತು ವಿದ್ವತ್ತಿನಿಂದಲೂ ಜನರ ನಡುವೆ ಬಹಳ ಪ್ರಭಾವಶಾಲಿಯಾಗಿದ್ದರು.

ಆ ವಸಂತದಲ್ಲಿ ಬುದ್ಧ ನಳಂದದ ಪಾವರಿಕ ಮಾವಿನ ತೋಟದಲ್ಲಿದ್ದ. ನಿತಪುತ್ತನ ಕೆಲವು ಹಿರಿಯ ಶಿಷ್ಯರಲ್ಲಿ ಒಬ್ಬನಾದ ದಿಗ ತಪಸ್ಸಿಯು ಬುದ್ಧನನ್ನು ಕಂಡ. ಹಾಗೆ ಸಂಭಾಷಿಸುವಾಗ ನಿಗಂತದ ಅನುಯಾಯಿಗಳು ಕರ್ಮ (ಕರ್ಮಣಿ) ಕುರಿತಾಗಿ ಏನೂ ಮಾತಾಡದೇ ಪಾಪಗಳು ಮತ್ತು ದೋಷಗಳು (ದಂಡಣಿ) ಬಗ್ಗೆ ಮಾತ್ರ ಮಾತಾಡುತ್ತಿದ್ದರು. ತಪಸ್ಸಿಯು ಪಾಪಗಳ ವಿಧಗಳ ಬಗ್ಗೆ ಮಾತಾಡುತ್ತಿದ್ದರೆ ಬುದ್ಧನು ಪೂರ್ಣ ಮತ್ತು ಅಪೂರ್ಣವಾದ ಕರ್ಮಗಳ ಬಗ್ಗೆ ಅವರಿಗೆ ಅರಿವು ಮೂಡಿಸಿದ. ಆದರೆ ಅದನ್ನು ಕೇಳಿದ ನಿತಪುತ್ತ ಬಿದ್ದೂ ಬಿದ್ದೂ ನಕ್ಕ. ಅವನು ಗೌತಮನು ಕರ್ಮದ ಬಗ್ಗೆ ಮತ್ತು ಮನಸ್ಸಿನ ಬಗ್ಗೆ ಮಾತಾಡುತ್ತಾ ಎಂತಹ ಅವಿವೇಕದ ತಪ್ಪು ಮಾಡುತ್ತಿದ್ದಾನೆಂದು ಆಡಿಕೊಂಡ. ಆಗ ಅಲ್ಲಿ ಬಲಕ ಎಂಬ ಸ್ಥಳದಿಂದಲೂ ಬಂದಿರುವಂತಹ ಶಿಷ್ಯರೂ ಸೇರಿದಂತೆ ಅವರ ಪ್ರಧಾನ ಪೋಷಕ ಉಪಾಲಿಯೂ ಇದ್ದ. ಉಪಾಲಿಯು ತಾನು ಕೂಡ ಬುದ್ಧನನ್ನು ಕಂಡು ಮಾತಾಡಿ ಬರುತ್ತೇನೆಂದು ಹೇಳಿದ. ತಪಸ್ಸಿ ಬೇಡವೆಂದ. ಏಕೆಂದರೆ ಬುದ್ಧ ಉಪಾಲಿಯನ್ನು ಪರಿವರ್ತಿಸಿಬಿಡಬಹುದು ಎಂದು. ಆದರೆ, ನಿತಪುತ್ತನಿಗೆ ಬುದ್ಧನ ಮೇಲೆ ಅವಿಶ್ವಾಸವೂ ಮತ್ತು ಉಪಾಲಿಯ ಮೇಲೆ ಪರಮ ವಿಶ್ವಾಸವೂ ಇದ್ದು "ಉಪಾಲಿ ಬುದ್ಧನ ಅನುಯಾಯಿ ಆಗುವುದಿಲ್ಲ, ಬದಲಾಗಿ ಬುದ್ಧನೇ ಉಪಾಲಿಯ ಅನುಯಾಯಿಯಾಗಿಬಿಡುತ್ತಾನೆ" ಎಂದು ಹೇಳಿ ಉಪಾಲಿಯನ್ನು ಬುದ್ಧನಲ್ಲಿಗೆ ಕಳುಹಿಸಿದ.


ಉಪಾಲಿಯು ಬುದ್ಧನ ವಚನ, ವರ್ಚಸ್ಸು ಮತ್ತು ಅಪೂರ್ಣವಾದ ಕಾರ್ಯದ ಬಗ್ಗೆ ಉದಾಹರಣೆಗಳೊಂದಿಗೆ ವಿವರಿಸಿದ ರೀತಿಯನ್ನು ನೋಡಿ ಪ್ರಭಾವಿತನಾದ. ಬುದ್ಧನ ಸ್ಪಷ್ಟತೆ ಮತ್ತು ಜ್ಞಾನಗಳೆರಡೂ ಉಪಾಲಿಯನ್ನು ಬಾಗುವಂತೆ ಮಾಡಿತು. ಅವನೂ ಬುದ್ಧನ ಅನುಯಾಯಿಯಾಗುವ ಇಚ್ಛೆ ವ್ಯಕ್ತಪಡಿಸಿದ. ಆದರೆ ಬುದ್ಧ ಅವನ ಕೋರಿಕೆಯನ್ನು ಎಚ್ಚರಿಕೆಯಿಂದ ಪರಿಶೀಲಿಸುವಂತೆ ಹೇಳಿದ. ಆ ಕ್ಷಣದ ಪ್ರಭಾವಕ್ಕೆ ಒಳಗಾಗಿ ಅನುಯಾಯಿಯಾಗುವುದು ಸೂಕ್ತವಲ್ಲವೆಂದೂ, ತನ್ನ ಮೇಲಾಗಿರುವ ಪ್ರಭಾವವು ಎಷ್ಟರಮಟ್ಟಿಗೆ ನಿಲ್ಲುವುದೆಂದೂ, ಅದು ಮುಂದಕ್ಕೆ ಬದಲಾಗಬಹುದೆಂದೂ; ಇವೆಲ್ಲವನ್ನೂ ಪರಿಶೀಲಿಸಿ ನಂತರ ನಿಧಾನವಾಗಿ ಆಲೋಚಿಸಿ, ವಿಚಾರಿಸಿ ಬರಲು ಹೇಳಿದ. ಇದು ಉಪಾಲಿಯನ್ನು ಇನ್ನೂ ಮಣಿಸಿತು. ತನ್ನ ಅನುಯಾಯಿಗಳ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳಲು ಹಾತೊರೆಯುವ ಗುರುಪ್ರಮುಖರನ್ನು ನೋಡಿದ್ದ ಆದರೆ ಬುದ್ಧ ಮತ್ತೆ ಮತ್ತೆ ವಿಚಾರ ಮಾಡಿ ಬರಲು ಹೇಳುತ್ತಿದ್ದಾನೆ. ಉಪಾಲಿ ಅನುಯಾಯಿಯಾಗುವ ತನ್ನ ಬದ್ಧತೆಯನ್ನು ಮತ್ತೆ ದೃಢವಾಗಿ ಪ್ರಕಟಿಸಿದ.

ಆಗ ಬುದ್ಧ "ನೀನು ಬಹುಕಾಲದಿಂದ ನಿಗಂತಕ್ಕೆ ಪ್ರಧಾನ ಪೋಷಕನಾಗಿರುವೆ. ನನ್ನ ಸಂಘಕ್ಕೆ ಬಂದರೂ ನೀನು ಆ ಸಂಘಕ್ಕೆ ನೀಡುತ್ತಿರುವ ಪೋಷಣೆಯನ್ನು ನಿಲ್ಲಿಸಕೂಡದು" ಎಂದು ತಿಳಿಹೇಳಿದ.


ಈ ಸುದ್ದಿ ತಿಳಿದ ನಿತಪುತ್ತ ಆಘಾತಗೊಂಡ. ಅವನು ತಪಸ್ಸಿಯ ಮನೆಗೆ ಹೋಗಲು ಅದು ನಿಜವೆಂದು ತಿಳಿಯಿತು. ಮಗಧ ಮತ್ತು ಕೋಸಲಗಳಿಂದ ಹೆಚ್ಚು

▶▶ 19

ಭಾರತದ ಮೌಢ್ಯಗಳನ್ನು ವಿದೇಶದಲ್ಲೂ ವೈಭವೀಕರಿಸುವುದನ್ನು ನಿಲ್ಲಿಸಬೇಕು



ಜಗತ್ತಿನ ಎಲ್ಲಾ ಸಮಸ್ಯೆಗಳಿಗೂ ಹಿಂದೂ ಧರ್ಮದಲ್ಲಿ ಪರಿಹಾರವಿದೆ ಎಂದು ಬಿಜೆಪಿ ಅಧ್ಯಕ್ಷ ಅಮಿತ್ ಶಾ ಮೊನ್ನೆ ಗುಜರಾತ್ ವಿಶ್ವವಿದ್ಯಾಲಯದ ಒಂದು ಸಮಾರಂಭದಲ್ಲಿ ಹೇಳಿದನು. ತಾನು ಹಿಂದೂವಾಗಿರುವುದಕ್ಕೆ



ಹೀಗೆ ಹೇಳುತ್ತಿಲ್ಲ ಎಂದೂ ಅವನು ಕೊನೆಗೆ ಸೇರಿಸಿದನು. ಈ ಅಮಿತ್ ಷಾ ಹಿಂದೂ ಯಾವಾಗಿನಿಂದ ಆಗಿದ್ದು? ಈತ ಜೈನ ಧರ್ಮೀಯನಾಗಿದ್ದು ಮೂಲತಃ ಜೈನ ಧರ್ಮವು ಹಿಂದೂ ಧರ್ಮದ ಕೊಳಕಿನ ವಿರುದ್ಧ ಬಂಡಾಯವೆದ್ದು ಪ್ರತ್ಯೇಕವಾದ ಧರ್ಮವಾಗಿದೆ. ಬೌದ್ಧ ಧರ್ಮದಂತೆ ಜೈನ ಧರ್ಮವೂ ಹಿಂದೂ ದೇವರನ್ನು ನಂಬುವುದಿಲ್ಲ, ಕೆಲವು ಹಿಂದೂ ದೇವಸ್ಥಾನಗಳು ಜೈನರ ಆಡಳಿತದಲ್ಲಿ ಇದ್ದರೂ ಅಲ್ಲಿ ಅವರು ಪೂಜಿಸುವುದು ಪದ್ಮಾವತಿ ಅಥವಾ ಧರಣೇಂದ್ರ ಎಂಬ ಜೈನ ಯಕ್ಷ-ಯಕ್ಷಿಯರನ್ನು ಮಾತ್ರ. ಅಮಿತ್ ಶಾ ನೈಜ ಹಿಂದೂ ಆಗಿದ್ದರೆ ಆತನು ತಾನು ಜೈನ ಅಲ್ಪಸಂಖ್ಯಾತ ಎಂದು ಹೇಳಿಕೊಂಡು ಅಲ್ಪಸಂಖ್ಯಾತರಿಗಿರುವ ಸರಕಾರದ ಸೌಲಭ್ಯಗಳನ್ನು ಅನುಭವಿಸುತ್ತಿರುವುದೇಕೆ?

ಇನ್ನು ಜಗತ್ತಿನ ಎಲ್ಲಾ ಸಮಸ್ಯೆಗಳಿಗೆ ಹಿಂದೂ ಧರ್ಮದಲ್ಲಿ ಪರಿಹಾರವಿದೆ ಎಂದು ಅಮಿತ್ ಶಾ ಬಡಾಯಿ ಕೊಚ್ಚಿರುವನು. ಆದರೆ ಜಗತ್ತಿನ ಎಲ್ಲ ಧರ್ಮಗಳಿಗಿಂತ ಹೆಚ್ಚು ಆಂತರಿಕ ಸಮಸ್ಯೆಗಳಿರುವುದು ಹಿಂದೂ ಧರ್ಮದ ಒಳಗೆಯೇ. ತಾಯಿಯ ಹೊಟ್ಟೆಯಲ್ಲಿಯೇ ಹೆಣ್ಣು ಭ್ರೂಣಹತ್ಯೆ, ಮರ್ಯಾದಾ ಹತ್ಯೆ, ವಿಕಾರ ಜಾತಿವಾದದಿಂದ ತಾನೇ ಕೊಳೆತುಹೋಗಿರುವ ಹಿಂದೂ ಧರ್ಮ ಅದು ಹೇಗೆ ಇಡೀ ಜಗತ್ತಿನ ಕೊಳೆಯೇನು ತೊಳೆಯಬಲ್ಲದು? ಸಣ್ಣ ದಲಿತ ಮಗುವಿನ ನೆರಳು ಮೇಲ್ಜಾತಿಯವನ ಮೇಲೆ ಬಿದ್ದಿದ್ದಕ್ಕೆ ಆ ಮಗುವಿಗೆ ಭಯಂಕರವಾಗಿ ಹೊಡೆಯುವಂತಹ ಜನರಿರುವ ಧರ್ಮದಿಂದ ಜಗತ್ತಿನ ಸಮಸ್ಯೆ ಪರಿಹಾರವಾಗಲು ಸಾಧ್ಯವೇ?


ಬ್ಯಾಂಕಾಕ್‌ನಲ್ಲಿ 16ನೇ ಜಾಗತಿಕ ಸಂಸ್ಕೃತ ಭಾಷಾ ಸಮಾವೇಶ ಉದ್ಘಾಟಿಸುತ್ತ ವಿದೇಶಾಂಗ ಸಚಿವೆ ಸುಷ್ಮಾ ಸ್ವರಾಜ್ ಸಂಸ್ಕೃತ ಭಾಷೆಗೆ ಇಡೀ ಜಗತ್ತಿನ ಜನರ ಮನಸ್ಸು ಶುದ್ಧೀಕರಿಸುವ ಸಾಮರ್ಥ್ಯವಿದೆ ಎಂದು ಹೇಳಿದರು. ಆದರೆ ಸಂಸ್ಕೃತ ಎಂದೂ ಮಣ್ಣಿನ ಭಾಷೆಯಾಗಿರಲಿಲ್ಲ, ಅದಕ್ಕೆ ಉಪಭಾಷೆಗಳು ಅಥವಾ ಗ್ರಾಮ್ಯ ಭಾಷೆಯಿಲ್ಲ. ಹಿಂದಿನ ಕಾಲದಲ್ಲಿ ಸಂಸ್ಕೃತ ಕೇವಲ ಮೇಲ್ಜಾತಿಯ ಜನರು ತಮ್ಮ ತಮ್ಮ ನಡುವೆ ಸಂವಹನಕ್ಕೆ ಬಳಸುತ್ತಿದ್ದ ಒಂದು ಗುಪ್ತ ಕೋಡ್ ಭಾಷೆಯಾಗಿತ್ತು, ಸಾಮಾನ್ಯ ಜನರನ್ನು ಜ್ಞಾನದಿಂದ ದೂರವಿಡುವ ಸ್ವಾರ್ಥಕ್ಕಾಗಿ ಸೀಮಿತ ಜನರು ಬಳಸುತ್ತಿದ್ದ ಸಂಸ್ಕೃತ ಭಾಷೆಯು ಇಡೀ ಜಗತ್ತಿನ ಜನರ ಮನಸ್ಸು ಹೇಗೆ ಶುದ್ಧೀಕರಿಸಬಲ್ಲದು ಸುಷ್ಮಾರವರೇ? ಹಾಗಾದರೆ ತಮ್ಮದೇ ಶಿಷ್ಯರಾದ ಬಳ್ಳಾರಿ ರೆಡ್ಡಿ ಗ್ಯಾಂಗ್ ಹಾಗೂ ಲಲಿತ್ ಮೋದಿಗಳಂತವರ ಕ್ರಿಮಿನಲ್ ಮನಸ್ಸನ್ನು ಸಂಸ್ಕೃತ ಭಾಷೆಯಿಂದ ಶುದ್ಧೀಕರಿಸಲು ಸುಷ್ಮಾರಿಗೆ ಯಾಕೆ ಸಾಧ್ಯವಾಗಲಿಲ್ಲ? ಲಲಿತ್ ಮೋದಿಗೆ ತಾವೇ ಸಹಾಯ ಮಾಡಿದ್ದನ್ನು ನೆನಪಿಸಿಕೊಳ್ಳುತ್ತಾ ತಮ್ಮ ಸ್ವಂತ ಮನಸ್ಸು ಎಷ್ಟು ಶುದ್ಧವಾಗಿದೆ ಎಂದು ಸ್ವರಾಜ್ ಒಮ್ಮೆ ಆತ್ಮ ವಿಮರ್ಶೆ ಮಾಡಿಕೊಳ್ಳುವುದು ಒಳಿತು.

ವಿದೇಶಿ ನೆಲ ಬ್ಯಾಂಕಾಕ್‌ನಲ್ಲೂ ತಮ್ಮ ಮೌಢ್ಯ ಪ್ರದರ್ಶಿಸುತ್ತಾ ಸುಷ್ಮಾ ಹೇಳಿದ ಇನ್ನೊಂದು ಮಾತೆಂದರೆ- ಜಗತ್ತಿನವರೆಲ್ಲ ಗಂಗೆಯಲ್ಲಿ ಮಿಂದರೆ ಇಡೀ ಜಗತ್ತೇ ಪಾವನವಾಗುತ್ತದೆಯಂತೆ. ಬೇರೆ ದೇಶದವರು ಬಿಡಿ ಭಾರತೀಯರೇ ಗಂಗೆಯಲ್ಲಿ ಮಿಂದರೆ ಎಲ್ಲ ತರದ ಚರ್ಮರೋಗಗಳು ಬರುತ್ತವೆ ಎಂದು ಸ್ವಂತ ಅನುಭವದಿಂದ ಭಾರತೀಯರೇ ಹೇಳುತ್ತಾರೆ, ಭಾರತದ ಮೌಢ್ಯಗಳನ್ನು ವಿದೇಶದಲ್ಲೂ ವೈಭವೀಕರಿಸಿ ತಾವೇ ಅಪಹಾಸ್ಯಕ್ಕೊಳಗಾಗುವ ಪರಿಪಾಠವನ್ನು ನಮ್ಮ ಈಗಿನ ಬಿಜೆಪಿ ಸಚಿವರು ನಿಲ್ಲಿಸಬೇಕು.

- ವೀರಪ್ಪ ದಿ.ಎನ್. ಮಡಿಕೇರಿ

ಅಪರೂಪದ ಅಧಿಕಾರಿ ಶೇಖರಪ್ಪ

ನಮ್ಮ ಅಮೃತ್ ಮಹಲ್ ತಳಿ ಸಂವರ್ಧನಾ ಕ್ಷೇತ್ರ ಸೂಕ್ತ ನಿರ್ವಹಣೆ ಇಲ್ಲದೆ ಸಂಪೂರ್ಣ ಹಾಳಾಗಿತ್ತು, ನಮ್ಮ ಆರಗ ರವಿ ಬರೆದ ಸುದ್ದಿಯನ್ನೋದಿ ತಕ್ಷಣವೇ ದೀಸಿ ಶೇಖರಪ್ಪನವರು ಅಜ್ಜಂಪುರಕ್ಕೆ ಬಂದು ಅಧಿಕಾರಿಗಳಿಗೆ ಚೆನ್ನಾಗಿ ನೀರಿಳಿಸಿದ್ದರು. ಹಾಳಾಗಲಿಕ್ಕೆ ಕಾರಣ ಹುಡುಕಿದರೆ ಅಲ್ಲಿನ ಭ್ರಷ್ಟ ಅಧಿಕಾರಿಗಳೇ ಕಾರಣರಾಗಿದ್ದರು. ಜೊತೆಗೆ ಅವರಿಗೆ ಇಚ್ಛಾಶಕ್ತಿಯ ಕೊರತೆಯಿತ್ತು, ಶೇಖರಪ್ಪನವರು ಸರಕಾರದ ಗಮನ ಸೆಳೆದ ಪರಿಣಾಮ ಇಡೀ ಸರಕಾರವೇ ಅಮೃತ್ ಮಹಲ್ ಕೇಂದ್ರಕ್ಕೆ ನುಗ್ಗಿತು. ಮೊಳಕಾಲುದ್ದದ ಸಗಣಿಯಲ್ಲಿ ರಾತ್ರಿಯೆಲ್ಲಾ ನಿಂತುಕೊಂಡೇ ಇರಬೇಕಾದ,



ಹೊಟ್ಟೆಗಿಲ್ಲದೆ ಹಸಿವಿನಿಂದ ಒದ್ದಾಡುವ ದುಸ್ಥಿತಿ ಮೂಕ ರಾಸುಗಳ ಪಾಲಿಗೆ ಬಂದಿತ್ತು, ಸುಮಾರು 10 ಸಲ ಬಂದು ಕೇಂದ್ರಕ್ಕೆ ಹೊಸ ಕಾಯಕಲ್ಪ ನೀಡಲು ಮುಂದಾದರು. ಅದರಂತೆ ಕೇಂದ್ರಕ್ಕೆ ಕೋಟಿ ಅನುದಾನ ಬಂತು. ಸರಕಾರ ಇಲಾಖೆಗೆ ಅಗತ್ಯವಿರುವ ಡಿ ಗ್ರೂಪ್ ನೌಕರರನ್ನು ನೇಮಿಸಲು ಕ್ರಮಕೈಗೊಂಡಿತು.

ಶೇಖರಪ್ಪನವರ ಕ್ಷಿಪ್ರ ಕಾರ್ಯಾಚರಣೆಗೆ ಅಲ್ಲಿದ್ದ ನೌಕರರು ಕೊಂಚ ಎಚ್ಚೆತ್ತುಕೊಂಡರೆ ಅನಿವಾರ್ಯವಾಗಿ ಉಳಿದವರು ಸಸ್ಪೆಂಡ್ ಆದರು. ಒಂದು ದಿನವೂ ಕಚೇರಿಯಲ್ಲಿರದೆ ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ ಇಡೀ ಜಿಲ್ಲೆಯನ್ನು ಸುತ್ತಿದರು. ಹಲವು ರೀತಿಯ ಸಮಸ್ಯೆಗಳನ್ನು ಲೀಲಾಜಾಲವಾಗಿ ಬಗೆಹರಿಸಿದರು. ಅತ್ಯಂತ ಸಾಮಾನ್ಯನ ಹೆಗಲ ಮೇಲೆ ಕೈಇಟ್ಟುಕೊಂಡೇ ಮಾತನಾಡಿದ್ದು, ನೋಡಿದ್ದು, ಕಂಡಿದ್ದು ನಾನು ಈ ದೀಸಿಯಲ್ಲಿ.

ಅಷ್ಟು ಸ್ನೂಹಾರಿ ಆದ ಶೇಖರಪ್ಪ ಮನೆಯ ಟೇಬಲ್ ಮೇಲೆ ನೂರಾರು ಫೈಲ್‌ಗಳನ್ನು ಇಟ್ಟುಕೊಂಡು ಸರಿಹೊತ್ತಿನವರೆಗೂ ನೋಡಿ ಸೈನ್ ಹಾಕುತ್ತಿದ್ದರು. ವೈಯಕ್ತಿಕ ಕಾರಣಕ್ಕೆ ಬೆಂಗಳೂರಿಗೆ ವರ್ಗ ಮಾಡಿಸಿಕೊಂಡ ಶೇಖರಪ್ಪ ಚಿಕ್ಕಮಗಳೂರು ಜಿಲ್ಲೆಯನ್ನು ಆರೋಗ್ಯವಾಗಿಟ್ಟುಕೊಳ್ಳುವಲ್ಲಿ ಶ್ರಮಿಸಿದ್ದರು.

- ಶೂದ್ರ ಸಂತೋಷ್, ಅಜ್ಜಂಪುರ

ನೈಜ ರೈತಸಂಘ ಬೇಕಿದೆ


ಕಬ್ಬಿಗೆ ಬೆಲೆ ಇಲ್ಲ-ಕಬ್ಬನ್ನು ಕೇಳುವವರಿಲ್ಲ, ಹಿಂದಿನ ವರ್ಷ ರೈತರು ಬೆಳೆದ ಕಬ್ಬನ್ನು ಕಾರ್ಖಾನೆಗಳಿಗೆ ಮಾರಿದ್ದರೂ ಹಣ ಮಾತ್ರ ರೈತರ ಕೈಸೇರಿಲ್ಲ, ಸಾಲದ ಬಾಧೆ ತಾಳಲಾರದೆ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇದರ ಅರ್ಥ ಕಬ್ಬಿಗೆ ಬೆಲೆ ಇಲ್ಲದ ಕಾರಣ ರೈತರು ಆತ್ಮಹತ್ಯೆಗೆ ತುತ್ತಾಗುತ್ತಿದ್ದಾರೆ.

ರೈತರ ಪರಿಸ್ಥಿತಿ ಹೀಗಿರುವಾಗ ಬೆಲೆ ನಿಯಂತ್ರಿಸಲು ಸರ್ಕಾರ ಈರುಳ್ಳಿ, ಬೇಳೆಕಾಳು ಮುಂತಾದುವನ್ನು ಆಮದು ಮಾಡಿಕೊಳ್ಳಲು ಹೊರಟಿದೆ. ಇದರ ಅರ್ಥ ಈರುಳ್ಳಿ, ಬೇಳೆಕಾಳು ಬೆಲೆ ಹೆಚ್ಚಾದರೆ ರೈತನಿಗೆ ಸ್ವಲ್ಪ ಅನುಕೂಲವಾಗುತ್ತದೆ. ಸರ್ಕಾರ ಅದನ್ನು ಸಹಿಸದೆ ಆಮದು ಮೂಲಕ ರೈತನಿಗೆ ಆಗಬಹುದಾದ ಲಾಭವನ್ನು ತಪ್ಪಿಸುತ್ತದೆ. ಬೆಲೆ ಹೆಚ್ಚದಂತೆ ತಡೆಯುವ ಸರ್ಕಾರ ಕಬ್ಬಿನ ಬೆಲೆ ಕುಸಿತವನ್ನು ಏಕೆ ತಡೆಯುವುದಿಲ್ಲ?

ಸರ್ಕಾರ ಎಲ್ಲಾದರೂ ಹಾಳಾಗಲಿ, ವಿರೋಧ ಪಕ್ಷಗಳು ಏನು ಮಾಡುತ್ತಿವೆ? ಅವೂ ಹಾಳಾಗಿಹೋಗಲಿ; ರೈತ ಸಂಘಗಳು ಏನು ಮಾಡುತ್ತಿವೆ? ಆಹಾರ ಧಾನ್ಯಗಳ ಆಮದು ತಡೆಯಲು ರೈತ ಸಂಘಗಳು ಧ್ವನಿ ಎತ್ತಿದ್ದನ್ನು ಎಂದೂ ಕಂಡಿಲ್ಲ.

ಅರ್ಥಪೂರ್ಣ ಹೋರಾಟವನ್ನು ಬಿಟ್ಟು ಬರೀ ಬೀದಿ ನಾಟಕ ಮಾಡುವ ರೈತಸಂಘಗಳಿರುವವರೆಗೂ ರೈತರಿಗೆ ಶೋಷಣೆ ತಪ್ಪಿದ್ದಲ್ಲ. ನಿಜವಾದ ರೈತ ಸಂಘ ರೂಪಗೊಳ್ಳಬೇಕಿದೆ.

- ವೀರಬ್ಯಾತಯ್ಯ, ಬೆಂಗಳೂರು



ಗೋಕರ್ಣ ದೇವಸ್ಥಾನಕ್ಕೆ ಬಿಡುಗಡೆ ಎಂದು?

ಪ್ರಜಾಪ್ರಭುತ್ವದಲ್ಲಿ ಸಾಮಾನ್ಯ ಜನರನ್ನು ರಕ್ಷಿಸುವ ನ್ಯಾಯವಾದಿಗಳು, ನ್ಯಾಯಾಧೀಶರು, ಇಂದಿನ ದಿನಗಳಲ್ಲಿ ಬಳಿತಪ್ಪುತ್ತಲಿರುವುದನ್ನು ನೋಡಿದರೆ ನಮ್ಮ ದೇಶದಲ್ಲಿ ಸಾಮಾನ್ಯ ಜನರು ಬದುಕುವುದೇ ಕಷ್ಟ ಎಂಬಂತೆ ಕಾಣುತ್ತಿದೆ.

ಅದಕ್ಕೆ ಉದಾಹರಣೆ ಗೋಕರ್ಣ ದೇವಸ್ಥಾನದ ಪ್ರಕರಣ ಹಾಗೂ ರಾಮಚಂದ್ರಾಪುರಮಠದ ಸ್ವಾಮಿಯ ರೇಪ್ ಕೇಸ್. ಮೊನ್ನೆ ದಿನಾಂಕ 18.6.2015 ಕ್ಕೆ ಗೋಕರ್ಣ ದೇವಸ್ಥಾನದ ಪ್ರಕರಣ ವಿಚಾರಣೆ ಬಂದಿತ್ತು, ಆಗ ಬಿ.ವಿ. ಆಚಾರ್ಯರು ತಮ್ಮ ಹತ್ತಿರದ ಸಂಬಂಧಿಗಳು ಮೃತಪಟ್ಟಿದ್ದಾರೆ; ಆದ್ದರಿಂದ ತನಗೆ ಕಾಲಾವಕಾಶಬೇಕೆಂದು ಪ್ರಕರಣ ಮುಂದೆ ಹೋಗುವಂತೆ ಮಾಡಿದರು. ಇದೇರೀತಿ ಕಳೆದ 5 ವರ್ಷದಿಂದ ಗೋಕರ್ಣ ದೇವಸ್ಥಾನದ ಪ್ರಕರಣ ಎಳೆದಾಡುತ್ತ ಸಾಗಿದೆ. ಇದರಿಂದ ರಾಮಚಂದ್ರಾಪುರ ಮಠದವರಿಗೆ ದೇವರ ಹುಂಡಿಯ ಆದಾಯದಿಂದ ಗೂಂಡಾಗಳನ್ನು ಬೆಳೆಸುವುದಕ್ಕೆ ಆಸ್ಪದವಾಗಿದೆ.


ಜನರ ಬೇಡಿಕೆ ಇಷ್ಟೇ. ಸರ್ಕಾರದ ಮುಖ್ಯ ವಕೀಲರಾದ ರವಿವರ್ಮಕುಮಾರರು ಸ್ವತಃ ಕೇಸನ್ನು ಕೈಗೆ ತೆಗೆದುಕೊಂಡು ಬಿ.ವಿ. ಆಚಾರ್ಯರಂತಹ ವಕೀಲರನ್ನು ದೂರವಿಟ್ಟು ಗೋಕರ್ಣ ದೇವಸ್ಥಾನಕ್ಕೆ ಕೂಡಲೇ ಈ ಕೋರ್ಟಿನಿಂದ ರಿಸೀವರ್ ನೇಮಕಾತಿ ಆಗುವಂತೆ ನೋಡಿಕೊಳ್ಳಬೇಕು. ಈ ಅಧಿಕ ಆಷಾಢ ಮಾಸ ಮುಗಿಯುವುದರೊಳಗೆ ರಾಮಚಂದ್ರಾಪುರಮಠದ ಹಿಡಿತದಿಂದ ದೇವಸ್ಥಾನದ ಆಡಳಿತ ತಪ್ಪುವಂತೆ ಮಾಡಲೇಬೇಕು.

ಇದರಿಂದ ಸರ್ಕಾರಕ್ಕೂ ಗೌರವ ಬರುತ್ತದೆ. ಜನರಿಗೂ ಸಂತೋಷವಾಗುತ್ತದೆ. ಸಂಪೂರ್ಣ ಸಿಬ್ಬಂದಿಗಳನ್ನು ಬದಲಾವಣೆ ಮಾಡಬೇಕು. ಮಠದ ಸಿಬ್ಬಂದಿ ಒಂದು ಒಂದು ಹುಳವೂ ಇರಕೂಡದು.

- ಉಮಾಕಾಂತ ಮಾ. ಗೋ

ಕೆಳಜಾತಿಯ ಹುಡುಗನಿಗೆ ವಾರಾನ್ನ ಸಿಗುತ್ತಿತ್ತೆ?

ಬಡವರಿಗೆ ಸರಕಾರದ ಅನ್ನಭಾಗ್ಯ ಯೋಜನೆಯನ್ನು ವಿರೋಧಿಸುತ್ತಿರುವ ಭೈರಪ್ಪನವರಿಗೆ ಕೇಂದ್ರ ಸರಕಾರದಿಂದ ಪ್ರತಿ ತಿಂಗಳು ಸಿಗುತ್ತಿರುವ ಒಂದು ಲಕ್ಷ ರೂಪಾಯಿ ಪೆನ್ಶನ್ ಭಾಗ್ಯ ಯಾವ ಘನ ಸಾಧನೆಗಾಗಿ? ಬ



ಕಾರ್ಮಿಕನಿಗೆ ಸರಿಯಾಗಿ ಪೌಷ್ಟಿಕ ಆಹಾರ ಸಿಕ್ಕರೆ ಅವ ತನ್ನ ಕ್ಷಮತೆ ಹೆಚ್ಚಿಸಿ, ಹೆಚ್ಚಿನ ಉತ್ಪಾದಕತೆ ಕೊಟ್ಟು ದೇಶದ ಅಭಿವೃದ್ಧಿಗೆ ತನ್ನ ನೈಜ ಕಾಣಿಕೆ ಕೊಡಬ ಭೈರಪ್ಪನವರ ಹಿರಿಯರಲ್ಲಿ ಯಾರೂ ನೇಗಿಲು ಮುಟ್ಟಿರ ಇದ್ದರೂ ಅವರಿಗೆ ಸರಕಾರ ನಾಲ್ಕು ಎಕರೆ ಭೂ ಕೊಟ್ಟಿದ್ದು ಯಾವ ಕಾರಣಕ್ಕಾಗಿ? ಹೀಗೆ ಸರಕಾರದಿ ಉಚಿತವಾಗಿ ಸಿಕ್ಕ ಭೂಮಿ ಯಾರೂ ಮಾರಿಕೊಳ್ಳುವಂತಿ



'ಡಿಜಿಟಲ್ ಇಂಡಿಯಾ'ದಲ್ಲೊಂದು ಶೌಚಾಲಯ ಕೊರತೆ...

ಮೊನ್ನೆಮೊನ್ನೆಯಷ್ಟೇ 'ಡಿಜಿಟಲ್ ಇಂಡಿಯಾ' ಎಂಬ ಕಲರ್‌ಫುಲ್ ಯೋಜನೆಯನ್ನು ಮೋದಿ ಘೋಷಿಸಿದ ಬೆನ್ನಿಗೇ ಮನೆಯಲ್ಲಿ ಶೌಚಾಲಯ ಇಲ್ಲ ಎನ್ನುವ ಕಾರಣಕ್ಕಾಗಿ ಜಾರ್ಖಂಡ್‌ನ ಅಪ್ರಾಪ್ತ ಯುವತಿಯೊಬ್ಬಳು ಆತ್ಮಹತ್ಯೆಗೆ ಶರಣಾಗಿದ್ದಾಳೆ. ಬಹುಶಃ 'ಡಿಜಿಟಲ್ ಇಂಡಿಯಾ'ದ ಮಧ್ಯೆ ಈ ಶೌಚಾಲಯದ ಕೊರತೆ ಬಗ್ಗೆ ಮಾತನಾಡುವುದೇ ಅಪರಾಧವೆನಿಸಬಹುದು.

ಪ್ರಧಾನಿ ಮೋದಿಯವರು ಬರೋಬ್ಬರಿ 2.4 ಲಕ್ಷ ಹಳ್ಳಿಗಳಿಗೆ ಬ್ರಾಡ್ ಬ್ಯಾಂಡ್ ಸೌಲಭ್ಯ ಕಲ್ಪಿಸಲು ಮುಂದಾಗಿದ್ದಾರೆ. ಇನ್ನೊಂದು ಕಡೆಯಲ್ಲಿ 'ಸ್ವಚ್ಛ ಭಾರತ' ಕೇವಲ ಒಂದು ದಿನದ ಕಸ ಗುಡಿಸಲು ಸೀಮಿತವಾದಂತಿದೆ. ಈ ಯೋಜನೆಯಡಿ ಶೌಚಾಲಯ ನಿರ್ಮಿಸುವ ಉದ್ದೇಶವಿದ್ದರೂ ಅದು ಯಾರಿಗೆಲ್ಲಾ ತಲುಪಿದೆ ಎನ್ನುವುದೇ ಪ್ರಶ್ನೆ.

ಹಸಿವಿನಿಂದ ಸಾಯುವವರ ಹಾಗೂ ಬಯಲು ಶೌಚವನ್ನೇ ಅವಲಂಬಿಸಿರುವವರ ಮಧ್ಯೆ ಈ 'ಡಿಜಿಟಲ್ ಇಂಡಿಯಾ'ಗಳು ತನ್ನ ಕಾರ್ಯವ್ಯಾಪ್ತಿಯಲ್ಲಿ ಇದನ್ನೆಲ್ಲಾ ಮರೆಮಾಚಿದೆ ಎಂದರೆ ತಪ್ಪಾಗಲಾರದು.

- ಇರ್ಷಾದ್ ಮೊಹಮದ್, ಕಿನ್ನಿಗೋಳಿ

ಆದರೂ ಭೈರಪ್ಪ ಆ ಭೂಮಿಯನ್ನು ಲಕ್ಷಾಂತರ ರೂಪಾಯಿಗೆ ಮಾರಿಕೊಂಡಿದ್ದು ನೈತಿಕವಾಗಿ ತಪ್ಪಲ್ಲವೇ?


ಭೈರಪ್ಪ ಬ್ರಾಹ್ಮಣರಾಗಿದುದರಿಂದ ಆ ಕಾಲದಲ್ಲಿ ಅವರಿಗೆ ಜನರು ಕರೆ-ಕರೆದು ವಾರಾನ್ನ ಕೊಡುತ್ತಿದ್ದರು. ಅವರ ಜಾಗದಲ್ಲಿ ಒಬ್ಬ ಕೆಳಜಾತಿಯವನು ಇರುತ್ತಿದ್ದರೆ ಅವನಿಗೂ ಭೈರಪ್ಪನವರಿಗೆ ಸುಲಭವಾಗಿ ಸಿಕ್ಕಂತೆ ಮೇಲ್ಜಾತಿಯವರಿಂದ ವಾರಾನ್ನ ಸಿಗುತ್ತಿತ್ತೆ? ಭೈರಪ್ಪನವರ ಓರಗೆಯ ಎಷ್ಟೋ ಹಿಂದುಳಿದ ಜಾತಿಗಳ ಹುಡುಗರು ಹೀಗೆ ವಾರಾನ್ನ ಸಿಗದೇ ವಿದ್ಯೆ ಮುಂದುವರಿಸಲಾಗದೇ ಶಾಲೆ ಬಿಟ್ಟು ಕೂಲಿಗಳಾಗಿದ್ದಾರೋ ಏನೋ! ಒಂದು ವೇಳೆ ಅವರೆಲ್ಲರಿಗೂ ವಾರಾನ್ನ ಸಿಕ್ಕಿದ್ದರೆ ಅವರೊಳಗೂ ಭೈರಪ್ಪನನ್ನು ಮೀರಿಸುವ ಹಲವು ಲೇಖಕರು ಸೃಷ್ಟಿಯಾಗದೇ ಇರುತ್ತಿರಲಿಲ್ಲ.

ಅನ್ನಭಾಗ್ಯದ ಬಗ್ಗೆ ಭೈರಪ್ಪನವರ ಮುಖ್ಯ ಆಕ್ಷೇಪಣೆಯೆಂದರೆ ಬಡವರಿಗೆ ಉಚಿತವಾಗಿ ಸರಕಾರದಿಂದ ಆಹಾರ ಸಿಕ್ಕರೆ ತಮ್ಮಂತಹ ಮೇಲ್ಜಾತಿಯವರಿಗೆ ಕಕ್ಕಸು ತೊಳೆಯಲು ಕೂಲಿಗಳು ಸಿಗುವುದಿಲ್ಲ ಎಂಬುದೇ ಆಗಿದೆ ಅಷ್ಟೇ.

- ಜೆ. ರವಿಕಿರಣ, ಮೈಸೂರು

ಬಿಜೆಪಿಗಳದ್ದು ಬರೀ ತೌಡು ಕುಟ್ಟುವುದೇ ಆಗಿದೆ

ಪಂಕಜಾ ಮುಂಡೆ ತೌಡು ಮಿಶ್ರಿತ ಚಿಕ್ಕಿ ಬಡ ಶಾಲಾಮಕ್ಕಳಿಗೆ ತಿನ್ನಿಸಿ ತಾನು ಕೋಟಿಗಟ್ಟಲೆ ಹಣ ಮುಕ್ಕಿದ್ದಾಳೆ. ವಿನೋದ್ ತೌಡೆ ಸರಕಾರಿ ಶಾಲೆಗಳಿಗೆ ಅಗ್ನಿಶಾಮಕ ಒದಗಿಸುವ ನೆಪದಲ್ಲಿ ಮಹಾರಾಷ್ಟ್ರ ಸರಕಾರಕ್ಕೆ ಕೋಟ್ಯಾಂತರದ ತೌಡು ತಿನ್ನಿಸಿ ಶಾಲೆಗಳಿಗೆ ಬೆಂಕಿ ಇಕ್ಕಿದನು. ಒಟ್ಟಾರೆ ಈ ಬಿಜೆಪಿಯವರು ಇಡೀ ದೇಶಕ್ಕೆಲ್ಲ ತೌಡು ತಿನ್ನಿಸಿ ತಾವು ಮಾತ್ರ ಲಾಡು ಮೆಲ್ಲುತ್ತಿದ್ದಾರೆ.



ವಸುಂಧರಾ ರಾಜೆ ಪಂಕಜಾ ಮುಂಡೆ

ರಾಜೇ ಮತ್ತು ಸ್ವರಾಜೇ ಲಲಿತ್ ಮೋದಿಯ ಎಂಜಲಲ್ಲಿ ಬಿದ್ದು ಹೊರಳಾಡುತ್ತಿದ್ದಾರೆ. ಮಧ್ಯಪ್ರದೇಶದ ಬಿಜೆಪಿಗಳ ವ್ಯಾಪಮ್ ಹಗರಣ ಎಷ್ಟು ವ್ಯಾಪಕವೆಂದರೆ ಅದರಿಂದ ಲಕ್ಷಾಂತರ ಪ್ರತಿಭಾವಂತ ವಿದ್ಯಾರ್ಥಿಗಳ ಬಾಳು ಹಾಳಾಯಿತು, ಜತೆಗೆ ಹಗರಣದಲ್ಲಿ ಶಾಮೀಲಾಗಿದ್ದ ನಲ್ವತ್ತೈದು ಜನ ಸಾಕ್ಷಿಗಳು/ಆರೋಪಿಗಳು ಕೊಲೆಗೀಡಾಗಿದ್ದಾರೆ. ಛತ್ತೀಸ್‌ಗಢದ ಸರಕಾರ ಮುವ್ವತ್ತಾರು ಸಾವಿರ ಕೋಟಿ ರೂಪಾಯಿಯ ಪಡಿತರ ಧಾನ್ಯ ಹಗರಣ ಮಾಡಿ ರಾಜ್ಯದ ಎಲ್ಲಾ ಬಡಜನರ ಹೊಟ್ಟೆಗೆ ಒದೆಯಿತು. ಉತ್ತರ ಪ್ರದೇಶದ ಒಬ್ಬ ಬಿಜೆಪಿ ಶಾಸಕ ತನ್ನದೇ ಪಾರ್ಟಿಯ ಒಬ್ಬ ಮಹಿಳೆಗೆ ಲೈಂಗಿಕ ಕಿರುಕುಳ ಕೊಟ್ಟರೆ ಅಲ್ಲಿಯ ಬಿಜೆಪಿ ನೇತಾರರು ಅದು ತಮ್ಮ ಪಾರ್ಟಿಯ ಒಳಗಿನ ಅತ್ಯಾಚಾರ (ವಿಚಾರ) ಎನ್ನುತ್ತಿದ್ದಾರೆ. ಮಧ್ಯಪ್ರದೇಶದ ಗೃಹಮಂತ್ರಿ ಬಾಬುಲಾಲ್ ಗೌಡ್ ಶರಾಬು ಕುಡಿಯುವುದು ಭಾರತೀಯರ ಸಂವಿಧಾತ್ಮಕ ಹಕ್ಕು ಹಾಗೂ ಪ್ರತಿಷ್ಠೆಯ ಸಂಕೇತ (ಸ್ಟೇಟಸ್ ಸಿಂಬಾಲ್) ಎಂದು ಹೇಳಿದ್ದಾನೆ. ಬಿಜೆಪಿಯ ಪಾರ್ಟ್ನರ್ ಚಂದ್ರಬಾಬು ನಾಯ್ಡು ಶರಾಬು ಅಂಗಡಿಗಳಿಗೆ ಮತ್ತು ಮಾಂಸದ ಅಂಗಡಿಗಳಿಗೆ ದೇವರ ಹೆಸರು ಇಡಬಾರದೆಂದು ಆಂಧ್ರದಲ್ಲಿ ಅಂಥಾ ಕಾನೂನು ತಂದಿದ್ದಾನೆ. ಕರ್ನಾಟಕದಲ್ಲೂ ಈ ಆಂಧ್ರದ ಅಂಥಾ ಕಾನೂನು ತರಬೇಕೆಂದು ಸಂಘ ಪರಿವಾರದವರು ಹೇಳುತ್ತಿದ್ದಾರೆ. ತಮ್ಮ ಪಕ್ಷಕ್ಕೆ ಅತಿಹೆಚ್ಚು ದೇಣಿಗೆ ಕೊಡುವವರು ಶರಾಬು ದೊರೆಗಳು ಎಂಬುದನ್ನು ಈ ಸಂಘಿಗಳು ಗುಟ್ಟಾಗಿ ಇಟ್ಟಿದ್ದಾರೆ. ಹೊಸದಾಗಿ ಅಧಿಕಾರ ಸಿಕ್ಕ ಮೇಲೆ ಬಿಜೆಪಿ ಮತ್ತು ಅವರ ಸಹವರ್ತಿಗಳೆಲ್ಲಾ ಗಾಂಜಾ ತಿಂದ ಮಂಗನಂತಾಗಿದ್ದಾರೆ. ತುಂಬಾ ದಿನಗಳಿಂದ ಆಹಾರ ಸಿಗದೇ ಭಯಂಕರ ಹಸಿದಿರುವ ನರಿಯಂತೆ ಸಿಕ್ಕಿದ್ದಕ್ಕೆಲ್ಲ ಬಾಯಿ ಹಾಕಿ ಮಲವನ್ನೂ ಮೆಲ್ಲುವ ಕೇಸರಿ ಪಡೆಯವರು ತಮ್ಮದು ರಾಷ್ಟ್ರಪ್ರೇಮಿ ಸಂಘಟನೆ ಎಂದು ಬಡಾಯಿ ಕೊಚ್ಚುವುದನ್ನು ಮಾತ್ರ ಬಿಟ್ಟಿಲ್ಲ. ಸೆಲ್ಫೀ ಹುಚ್ಚಿನ ಆತ್ಮ-ವ್ಯಾಮೋಹಿ ಮೋದಿಯ ಮೋಡಿ-ಮಾತು ಈಗ ನಿಂತುಹೋಗಿದ್ದು ಮೌನ-ಮೂಕ ಪಲಾಯನವಾದಿ ಮೋದಿ ಈ ಎಲ್ಲ ಹಗರಣಗಳಿಂದ ತಪ್ಪಿಸಿಕೊಳ್ಳಲು ಆರು ದೇಶಗಳ ಭೇಟಿಗೆ ಹಾರಿದ್ದಾರೆ.

- ಅಭಿಷೇಕ್ ಪಡಿವಾಳ್ ಜೈನ್, ಸುಳ್ಯ

ಪಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಟಿಪ್ಪಣಿಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕವಾಗಿ SMS ಕಳುಹಿಸಬಹುದು.

ಆಲಿಯಾಗಾಗಿ ಕಾಯುತ್ತಿದ್ದೇನೆ...

ಇಂದ್ರಜಿತ್ ಲಂಕೇಶ್ ನಿರ್ದೇಶನದ 'ಲವ್ ಯೂ ಆಲಿಯಾ' ಚಿತ್ರದ ಮೂಲಕ ಪೂರ್ಣ ಪ್ರಮಾಣದ ನಾಯಕಿಯಾಗಿ ಸ್ಯಾಂಡಲ್‌ವುಡ್‌ಗೆ ಪ್ರವೇಶ ಮಾಡಿದ್ದಾರೆ ಭೂಮಿಕಾ ಚಾವ್ಲಾ. ಈ ಪಾತ್ರದ ಕುರಿತು ಅವರಿಗೆ ಸಾಕಷ್ಟು ನಿರೀಕ್ಷೆ ಇದೆಯಂತೆ.



ದಕ್ಷಿಣ ಭಾರತದ ಖ್ಯಾತ ನಟಿ ಭೂಮಿಕಾ ಚಾವ್ಲಾ ಕನ್ನಡ ಸಿನಿಮಾದಲ್ಲಿ ನಟಿಸುತ್ತಾರೆ ಎಂಬ ಸುದ್ದಿ ಹಲವು ವರ್ಷಗಳಿಂದ ಹರಿದಾಡುತ್ತಲೇ ಇತ್ತು. ಉಪೇಂದ್ರ ಅಭಿನಯದ 'ಗಾಡ್ ಫಾದರ್' ಚಿತ್ರದಲ್ಲಿ ಇವರು ನಟಿಸಿದ್ದರೂ ಅದು ಅತಿಥಿ ಪಾತ್ರವಾಗಿತ್ತು. ಈಗ ಇಂದ್ರಜಿತ್ ಲಂಕೇಶ್ ನಿರ್ದೇಶನದ 'ಲವ್ ಯೂ ಆಲಿಯಾ' ಚಿತ್ರದಲ್ಲಿ ಪೂರ್ಣ ಪ್ರಮಾಣದ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಇದೇ ಮೊದಲ ಬಾರಿಗೆ ಇವರು ನೃತ್ಯಗಾರ್ತಿಯ ಪಾತ್ರ ಪೋಷಿಸಿದ್ದಾರೆ. ಈ ಕುರಿತಾದ ಅವರ ಸಂದರ್ಶನವಿದು.

** ಮೊದಲ ಕನ್ನಡದ ಸಿನಿಮಾ ಬಗ್ಗೆ ಏನನಿಸುತ್ತದೆ?*

ಪೂರ್ಣ ಪ್ರಮಾಣದ ನಾಯಕಿಯಾಗಿ ಇದು ನನ್ನ ಮೊದಲ ಚಿತ್ರ. ಆದರೆ, ಈಗಾಗಲೇ ನಾನು ಅತಿಥಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಉಪೇಂದ್ರ ಜತೆ ತೆರೆ ಹಂಚಿಕೊಂಡ ನಂತರ, ಈಗ ರವಿಚಂದ್ರನ್ ಜತೆ ನಟಿಸುತ್ತಿದ್ದೇನೆ. ಈ ಮೊದಲು ಕನ್ನಡದಲ್ಲಿ ನಟಿಸುವಂತೆ ಸಾಕಷ್ಟು ಆಫರ್ಸ್ ಬಂದಿದ್ದವು. ನಾನೇ ಒಪ್ಪಿಕೊಂಡಿರಲಿಲ್ಲ. ತೆಲುಗು ಮತ್ತು ತಮಿಳಿನಲ್ಲೇ ಬಿಜಿ ಆಗಿದ್ದರಿಂದ, ಈ ಕಡೆ ಬರಲಾಗಲಿಲ್ಲ. ಈಗ ಒಳ್ಳೆಯ ಕತೆ ಸಿಕ್ಕಿದೆ. ಅಷ್ಟೇ ಮಹತ್ವದ ಪಾತ್ರ ಸಿಕ್ಕಿದೆ.

** ಈವರೆಗೂ ನೀವು ನೃತ್ಯಗಾರ್ತಿಯ ಪಾತ್ರ ಮಾಡಿರಲಿಲ್ಲವಾ?*

ಹಲವು ಚಿತ್ರಗಳಲ್ಲಿ ಡ್ಯಾನ್ಸ್ ಮಾಡಿದ್ದೇನೆ. ಆದರೆ, ಪಾತ್ರ ಮಾಡಿರಲಿಲ್ಲ. ಇಲ್ಲಿ ನನ್ನದು ನೃತ್ಯ ಶಿಕ್ಷಕಿಯ ಪಾತ್ರ. ಅಲ್ಲದೇ ಇಡೀ ಸಿನಿಮಾದಲ್ಲಿ ನನ್ನನ್ನು ತೋರಿಸಿದ ರೀತಿ ಚೆನ್ನಾಗಿದೆ. ತುಂಬಾ ಖುಷಿಯಿಂದ ಈ ಪಾತ್ರ ಮಾಡಿದ್ದೇನೆ. ಅಲ್ಲದೇ ರವಿಚಂದ್ರನ್ ಅವರ ಜತೆ ನಟಿಸುತ್ತಿರುವುದಕ್ಕೆ ಖುಷಿ ಆಗುತ್ತಿದೆ.

** ಕನ್ನಡ ಇಂಡಸ್ಟ್ರಿ ಬಗ್ಗೆ ಏನೆಲ್ಲ ತಿಳಿದುಕೊಂಡಿದ್ದೀರಿ?*

ಇಲ್ಲಿ ಆಗುತ್ತಿರುವ ಅನೇಕ ಪ್ರಯೋಗಗಳನ್ನು ನಾನು ಕೇಳಿದ್ದೇನೆ. ಅಲ್ಲದೇ ಹಲವು ನಟರ ಬಗ್ಗೆಯೂ ತಿಳಿದುಕೊಂಡಿದ್ದೇನೆ. ಸುದೀಪ್, ರವಿಚಂದ್ರನ್ ಸೇರಿದಂತೆ ಹಲವು ನಾಯಕರ ಚಿತ್ರಗಳನ್ನು ನೋಡಿದ್ದೇನೆ. ಇನ್ನಷ್ಟು ತಿಳಿದುಕೊಳ್ಳುವ ಬಯಕೆ ಇದೆ. ಈ ಸಿನಿಮಾದ ಮೂಲಕ ಅದು ಸಾಧ್ಯವಾಗುತ್ತಿದೆ.

** 'ಲವ್ ಯೂ ಆಲಿಯಾ'ದ ಕತೆ ಏನು?*


ಈ ಚಿತ್ರದಲ್ಲಿ ಗಂಡಹೆಂಡತಿಯ ಸಂಬಂಧ, ಹೆತ್ತವರ ಮತ್ತು ಮಕ್ಕಳ ಬಗೆಗಿನ ವಾತ್ಸಲ್ಯ ಹೇಳುವ ಅಪರೂಪದ ಕತೆ ಇದೆ. ಈ ಸಂಬಂಧಗಳ ನಡುವಿನ ಘರ್ಷಣೆಯನ್ನು ಅನುಭವಿಸುವ ಪಾತ್ರ ನನ್ನದು.

** ನಿಮ್ಮ ಫ್ಯಾಮಿಲಿ ಪರಿಚಯಿಸುವುದಾದರೆ?*

ಪತಿ ಭರತ್. ಹೆಸರಾಂತ ಯೋಗ ಟೀಚರ್. ದುಬೈ, ಯುಎಇ, ಮುಂಬೈ, ಬೆಂಗಳೂರು ಅಂತ ಸುತ್ತುತ್ತಾನೇ ಇರುತ್ತಾರೆ. ವರ್ಷದ ಮಗುವಿದೆ. ಅದರ ಹೆಸರು ಯಶ್.

** ನಟನೆ ಹೊರತಾಗಿ ಮತ್ತೇನು ಮಾಡುತ್ತೀರಿ?*

ಓದುವುದು ಅಂದ್ರೆ ತುಂಬಾ ಇಷ್ಟ. ಚಿತ್ರಕಲೆಯಲ್ಲೂ ಆಸಕ್ತಿ ಇದೆ. ಓದುವುದಷ್ಟೇ ಅಲ್ಲ, ಬರೆಯುತ್ತೇನೆ. ಈಗಾಗಲೇ ಸಾಕಷ್ಟು ಕವನಗಳನ್ನು ಬರೆದಿದ್ದೇನೆ. ಜತೆಗೆ ಟ್ರಾವೆಲ್ ಮಾಡೋದು ತುಂಬಾ ಇಷ್ಟ.



** ನೀವು ಕಂಡ ರವಿಚಂದ್ರನ್ ಹೇಗೆ?*

ರವಿಚಂದ್ರನ್ ಮಲ್ಟಿ ಟ್ಯಾಲೆಂಟ್ ಪರ್ಸನ್. ಒಳ್ಳೆಯ ಹಾಸ್ಯಪ್ರಜ್ಞೆ ಇದೆ. ಏನಾದ್ರೂ ಜೋಕ್ ಮಾಡ್ತಾನೆ ಇರ್ತಾರೆ. ಅವರೊಬ್ಬ ನಿರ್ದೇಶಕ, ಬರೀತಾರೆ. ಸಂಗೀತ ಕಂಪೋಸ್ ಮಾಡ್ತಾರೆ. ಪ್ರೊಡ್ಯೂಸರ್ ಕೂಡ. ಆದರೂ ಅವರು ಏನೂ ಗೊತ್ತಿಲ್ಲದಂತೆ ಇರುತ್ತಾರೆ.

** ನಿರ್ದೇಶಕ ಇಂದ್ರಜಿತ್ ಲಂಕೇಶ್ ಬಗ್ಗೆ ಏನು ಹೇಳುತ್ತೀರಿ?*

ನಾನು ಕಂಡ ಅಪರೂಪದ ನಿರ್ದೇಶಕರಲ್ಲಿ ಇಂದ್ರಜಿತ್ ಕೂಡ ಒಬ್ಬರು. ತುಂಬಾ ತಾಳ್ಮೆ ಇರುವ ವ್ಯಕ್ತಿ. ಆರ್ಟಿಸ್ಟಿಕ್ ಇನ್ ಹಿಸ್ ಫ್ರೇಂಸ್. ತುಂಬಾ ಕಮ್ಮಿ ಈ ಥರದವರು. ಇವ್ರಷ್ಟು ತಾಳ್ಮೆಯಿಂದ ಎಲ್ಲಾನೂ ಮ್ಯಾನೇಜ್ ಮಾಡೋರನ್ನ ನಾನು ಕಂಡಿದ್ದು ತುಂಬಾ ಕಡಿಮೆ. ■

17 ◀◀

ಹೆಚ್ಚು ಜನರು ಈ ಜಾಗೃತಿಯ ಮಾರ್ಗಕ್ಕೆ ನಡೆಯುತ್ತಿದ್ದರು. ಹಲವಾರು ಬಿಕ್ಕುಗಳು ಈ ಸಂತೋಷದ ವಿಷಯವನ್ನು ಸಾವತಿಯಲ್ಲಿ ಪ್ರಕಟಿಸಿದರು.


ಆದರೆ ಬುದ್ಧ ಆ ಸಂಭ್ರಮವನ್ನು ನಿರಾಕರಿಸಿದ. ಇದು ಯಶಸ್ಸು ಅಥವಾ ವೈಫಲ್ಯ ಅಲ್ಲವೆಂದು ತಿಳಿಹೇಳಿದ.

ಒಂದು ಬೆಳಗ್ಗೆ ಬೆಳಗಿನ ಭಿಕ್ಷಾಟನೆಗಾಗಿ ಜೇತವನ್ನು ಬಿಡಬೇಕೆನ್ನುವಷ್ಟರಲ್ಲಿ ರಾಜ್ಯದ ಸೈನಿಕರು ಸಂಘವನ್ನು ಹೊಕ್ಕರು. ಒಂದು ಹೆಣ್ಣಿನ ದೇಹಕ್ಕಾಗಿ ಹುಡುಕಾಡಿದರು. ಬಿಕ್ಕುಗಳಿರುವಂತಹ ವಿಹಾರದಲ್ಲಿ ಹೆಣ್ಣಿನ ಶವಕ್ಕಾಗಿ ಹುಡುಕಾಡುವುದು ಅನಿರೀಕ್ಷಿತವಾಗಿತ್ತು. ಸಾವತಿಯ ಸುಂದರಿಯ ದೇಹವೆಂದು ಬೇರೆ ಹೇಳುತ್ತಿದ್ದಾರೆ.

ಹೌದು, ಸಾವತಿಯ ಸುಂದರಿ ಇತ್ತೀಚೆಗೆ ವಿಹಾರದಲ್ಲಿ ಕಾಣಿಸಿಕೊಂಡಿದ್ದಳು. ಅವಳೂ ಬುದ್ಧನ ವಚನಗಳನ್ನು ಕೇಳುತ್ತಿದ್ದವರಲ್ಲಿ ಒಬ್ಬಳಾಗಿದ್ದಳು. ಅವಳ ಶವ ಹಗುರವಾಗಿ ಬುದ್ಧನ ಕುಟೀರದ ಬಳಿಯೇ ಹೂತಿರುವುದು ಕಂಡಿತು. ಅಲ್ಲಿದ್ದವರಿಗಾರಿಗೂ ಅರ್ಥವಾಗಲಿಲ್ಲ. ಅವಳು ಸತ್ತದ್ದು ಹೇಗೆ ಮತ್ತು ಅವಳ ಶವವು ಹೇಗೆ ಅಲ್ಲಿಗೆ ಬಂದಿತೆಂದು.

ಸುಂದರಿಯ ಹೆಣವನ್ನು ಎತ್ತಿಕೊಂಡು ಆಕೆಯ ಬಂಧುಗಳು ರಸ್ತೆರಸ್ತೆಗಳಲ್ಲಿ ಗೋಳಿಡುತ್ತಾ ನಡೆದರು. ತಮ್ಮ ಗೋಳನ್ನು ವಿಚಾರಿಸಿದವರಿಗೆ ಅವರು ಹೇಳಿದ್ದೇನೆಂದರೆ "ಘನತೆಯ ಮತ್ತು ಮಾನ್ಯತೆ ಹೊಂದಿರುವ ಶಾಕ್ಯರೆಂದು ಹೇಳುವಿರಿ. ಪ್ರೇಮ, ಕರುಣೆ, ಅನುಕಂಪ, ಆನಂದ ಮತ್ತು ಸಮಾನತೆಯ ಬಗ್ಗೆ ಮಾತಾಡುವ ಅವರು ಮಾಡಿರುವ ಕೆಲಸ ನೋಡಿ. ಅವಳನ್ನು ಅತ್ಯಾಚಾರ ಮಾಡಿ, ಕೊಂದು ಹೆಣವನ್ನು ಅಡಗಿಸಿಟ್ಟಿದ್ದಾರೆ!"

ಬುದ್ಧನ ಬಗ್ಗೆ ಅಪಾರ ವಿಶ್ವಾಸ ಮತ್ತು ಗೌರವವನ್ನು ಇಟ್ಟುಕೊಂಡಿದ್ದಂತಹವರಲ್ಲೂ ಇದು ಅನುಮಾನಗಳನ್ನು



ಹುಟ್ಟಿಸತೊಡಗಿತು. ಒಪ್ಪಲೂ ಆಗದೇ, ಬಿಡಲೂ ಆಗದೇ ನರಳತೊಡಗಿದರು. ಇತರ ಆಧ್ಯಾತ್ಮಿಕ ಸಂಘಗಳು ಈ ಪರಿಸ್ಥಿತಿಯ ಲಾಭವನ್ನು ಪಡೆದುಕೊಂಡರು. ಅವರು ಬುದ್ಧನ ವಿಹಾರದ ಖಂಡನೆಯನ್ನು ಈಗ ಸಾಕ್ಷ್ಯಾಧಾರದ ಸಮೇತ ಮಾಡುವಂತಾಯಿತು.

ಮಾಡಿದ್ದುಣ್ಣೋ ಮಾರಾಯ

ಮಗಧ ಮತ್ತು ಕೋಸಲಗಳಿಂದ ಹೊಸದಾಗಿ ಬಂದಿದ್ದಂತಹ ಬಿಕ್ಕುಗಳಿಗಂತೂ ತೀವ್ರ ಆತಂಕ ಮತ್ತು ಸಂದಿಗ್ಧದ ಡೋಲಾಯಮಾನದ ಸ್ಥಿತಿ ಒದಗಿಬಿಟ್ಟಿತು. ಎಲ್ಲರಿಗೂ ಧೈರ್ಯ ಹೇಳುವ ಅಗತ್ಯತೆ ಬುದ್ಧನಿಗಿತ್ತು.

"ಅನ್ಯಾಯದ ದೂರುಗಳು ಎಲ್ಲಿಯವಾದರೂ, ಯಾವಾಗಲಾದರೂ ಬರಬಹುದು. ಅದಕ್ಕೆ ಸಂಕೋಚಿಸುವ ಮತ್ತು ನಾಚಿಕೆ ಪಡುವ ಅಗತ್ಯವಿಲ್ಲ, ಸುಳ್ಳಿನ ದೂರುಗಳು ಹರಡುತ್ತವೆ ನಿಜ ಆದರೆ ಕರಗಿಹೋಗುತ್ತವೆ. ಯಾರೇ ಇದರ ಬಗ್ಗೆ ಕೇಳಿದರೂ, 'ಈ ಕೃತ್ಯಕ್ಕೆ ಯಾರೇ ಕಾರಣರಾಗಿರಲಿ ಅವರು ಫಲವನ್ನು ಉಣ್ಣುತ್ತಾರೆ' ಎಂದು ಹೇಳಿ" ಎಂದು ಸಮಾಧಾನಪಡಿಸಿದ.

ವಿಶಾಖ ಎಂಬ ಹೆಂಗಸು ಕೂಡ ಇದರ ಬಗ್ಗೆ ಆತಂಕಗೊಂಡಿದ್ದಳು. ಅವಳು ಸುದತ್ತನೆಂಬ ಬಂಧುವನ್ನು ಕಂಡು ಇದರ ಬಗ್ಗೆ ಸುದೀರ್ಘವಾಗಿ ಚರ್ಚಿಸಿದಳು. ಅವರು ನಿಜವಾದ ಅಪರಾಧಿಯನ್ನು ಕಂಡುಹಿಡಿವ ಒಂದು ಉಪಾಯ ಮಾಡಿದರು. ತಮ್ಮ ಯೋಜನೆಯನ್ನು ಜೇತದ ರಾಜಕುಮಾರನೊಂದಿಗೆ ಹಂಚಿಕೊಂಡರು. ಅವನೂ ಸಹಕರಿಸಲು ಒಪ್ಪಿದ.

ಸುಂದರಿಯ ಕೊಲೆಗೆ ಕಾರಣರಾದ ಇಬ್ಬರು ತಮ್ಮ ಕುಡಿತದ ಅಮಲಿನಲ್ಲಿ ತಾವು ಮಾಡಿದ್ದನ್ನು ಬಡಬಡಾಯಿಸಿ ಅವರನ್ನು ರಾಜನ ಸೈನಿಕರು ಹಿಡಿದರು.

ನಂತರ ತಿಳಿದಿದ್ದೇನೆಂದರೆ ಸುಂದರಿಯ ಕುಲ ಪ್ರಮುಖರೇ ಅವಳನ್ನು ಕೊಂದು ಬುದ್ಧನ ಕುಟೀರದ ಬಳಿ ಹೂಳಲು ಹೇಳಿದ್ದರೆಂದು.

ರಾಜ ಪಸೇನದಿಯೇ ಜೇತವನಕ್ಕೆ ಹೋಗಿ ಈ ಸುದ್ದಿಯನ್ನು ವಿಹಾರದಲ್ಲಿ ಪ್ರಕಟಿಸಿದ. ಮತ್ತೆ ಸಂಘವು ನಿಂದನೆಯನ್ನು ಕಳೆದುಕೊಂಡು ಹೊಳೆಯತೊಡಗಿತು.

ಬುದ್ಧರು ತಮ್ಮ ಮೇಲೆ ಕಳಂಕ ಹೊರಿಸಿದವರನ್ನು ಕ್ಷಮಿಸಲು ರಾಜನಲ್ಲಿ ಕೇಳಿಕೊಂಡ. ಆದರೆ ಇಂಥಾ ಅಪರಾಧಗಳು ನಡೆಯದಿರುವಂತೆ ನೋಡಿಕೊಳ್ಳಲು ಬೇಕಾದ ವ್ಯವಸ್ಥೆ ಮಾಡಿಕೊಳ್ಳಲು ಹೇಳಿದ.

ಸುಂದರಿಯನ್ನು ಕಳುಹಿಸಿದ ನಿತಪ್ಪನ್ನಂತಹ ಗುರುಪ್ರಮುಖರ ಬಣ್ಣಗಳೆಲ್ಲವೂ ಬಯಲಾಯಿತು. ■

Registered No.RNP/KA/BGS/2036/2014-16 Posted at :BGPSO, Mysore Road, Bangalore-26 Friday R B P LANKESH, Kannada Weekly Price Rs. 15/- 22-07-2015 RNI No. KARKAN200

ಕನ್‌ಫ್ಯೂಶನ್‌ಗೆ ತೆರೆ



ಸಿನಿಮಾರಂಗದ ಬಹುತೇಕರು ಪ್ರಚಾರಕ್ಕಾಗಿ ಏನೆಲ್ಲ ಗಿಮಿಕ್ ಮಾಡುತ್ತಾರೆ. ಅಂತಹದ್ದೇ ಒಂದು ಗಿಮಿಕ್‌ಗೆ ತುತ್ತಾಗಿದ್ದು ಗೋಲ್ಡನ್ ಸ್ಟಾರ್ ಗಣೇಶ್. ಇವರ 25ನೇ ಸಿನಿಮಾ ಯಾವುದು ಎಂಬ ಗೊಂದಲ ಅವರ ಅಭಿಮಾನಿಗಳಿಗಿತ್ತು. ಇಬ್ಬರು ನಿರ್ದೇಶಕರ ಅಪಪ್ರಚಾರದಿಂದಲೂ ಗಣೇಶ್ ಸುಸ್ತಾಗಿದ್ದರು. ಕೊನೆಗೂ ಅದಕ್ಕೆ ತೆರೆ ಎಳೆದಿದ್ದಾರೆ ನಿರ್ದೇಶಕ ಎಂ.ಡಿ.ಶ್ರೀಧರ್. ಇವರ ನಿರ್ದೇಶನದಲ್ಲಿ ಮೂಡಿಬಂದ 'ಬುಗುರಿ' ಸಿನಿಮಾ, ಗಣೇಶ್ ಅವರ 25ನೇ ಚಿತ್ರ ಎನ್ನುವುದು ಈಗ ಪಕ್ಕಾ ಆಗಿದೆ.

25ನೇ ಸಿನಿಮಾದ ಬಗ್ಗೆ ಗೊಂದಲ ಮೂಡುವುದಕ್ಕೆ ಕಾರಣ 'ಸ್ಟೈಲ್‌ಕಿಂಗ್' ಚಿತ್ರದ ನಿರ್ದೇಶಕ ಪಿ.ಸಿ.ಶೇಖರ್. ತಮ್ಮ ಸಿನಿಮಾದ ಪ್ರಚಾರಕ್ಕಾಗಿ ಯಾವಾಗಲೂ ಹಪಹಪಿಸುವ ಈ ನಿರ್ದೇಶಕರು 'ಸ್ಟೈಲ್‌ಕಿಂಗ್' ಗಣೇಶ್ ಅವರ ಇಪ್ಪತ್ತೈದನೇ ಸಿನಿಮಾ ಎಂದು ಭರ್ಜರಿ ಪ್ರಚಾರ ಗಿಟ್ಟಿಸಿಕೊಂಡರು. ಇಂತಹ ಅಪಪ್ರಚಾರ ಬೇಡವೆಂದು ಗಣೇಶ್ ಹೇಳಿದರೂ ಅವರು ಕೇಳದ ಕಾರಣ ಈ ಇಬ್ಬರ ಮಧ್ಯೆ ಮನಸ್ತಾಪ ಕೂಡ ಆಗಿದೆ ಎನ್ನುವ ಮಾತಿದೆ. ಅದೇನೇ ಇರಲಿ, ಕೊನೆಗೂ ಗಣೇಶ್‌ರ 25ನೇ ಸಿನಿಮಾ ಫಿಕ್ಸ್ ಆಗಿದೆ. ನಿರ್ದೇಶಕ ಶ್ರೀಧರ್ ಈ ಬಗ್ಗೆ ಆಗಲೇ ಜಾಹೀರಾತನ್ನೂ ಬಿಡುಗಡೆ ಮಾಡಿದ್ದಾರೆ. ಗಣೇಶ್ ಕೂಡ ಒಪ್ಪಿಕೊಂಡಿದ್ದಾರೆ. ಅಲ್ಲಿಗೆ ವಿವಾದಕ್ಕೆ ತೆರೆ ಬಿದ್ದಿದೆ.

ಅಂದಹಾಗೆ, 'ಸ್ಟೈಲ್‌ಕಿಂಗ್' ಸಿನಿಮಾದಲ್ಲಿ ಗಣೇಶ್ ದ್ವಿಪಾತ್ರ ಮಾಡಿದ್ದಾರೆ. ಈ ಚಿತ್ರದ ಮೂಲಕ ಇದೇ ಮೊದಲ ಬಾರಿಗೆ ಅವರು ರಫ್ ಅಂಡ್ ಟಫ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. 'ಬುಗುರಿ'ಯಲ್ಲಿ ಇವರದ್ದು ಕಾಲೇಜ್ ಹುಡುಗನ ಪಾತ್ರ.

ಜೋಶಿಮಗಳು ಗಯ್ಯಾಳಿ

ದೂರದರ್ಶನದ ಹೆಚ್ಚುವರಿ ಮಹಾನಿರ್ದೇಶಕ ಮಹೇಶ್ ಜೋಶಿ ಪುತ್ರಿ ಮಾನಸ ಕಲಾತ್ಮಕ ಸಿನಿಮಾಗಳ ಮೂಲಕ ಗುರುತಿಸಿಕೊಳ್ಳುತ್ತಿದ್ದಾರೆ. ಸದ್ಯ ಅವರು ಸುಮನಾ ಕಿತ್ತೂರ್ ನಿರ್ದೇಶನದ 'ಕಿರಗೂರಿನ ಗಯ್ಯಾಳಿಗಳು' ಚಿತ್ರದಲ್ಲಿ ನಟಿಸುತ್ತಿದ್ದಾರೆ.



ಬಹುತೇಕ ನಾಯಕಿಯರು ವ್ಯಾಪಾರಿ ಸಿನಿಮಾಗಳ ಮೂಲಕ ಗುರುತಿಸಿಕೊಳ್ಳಲು ಬಯಸಿದರೆ ಇವರದ್ದು ವಿಭಿನ್ನ ದಾರಿ. ಹಾಗಾಗಿಯೇ ಈವರೆಗೂ ಮಾಡಿದ ಸಿನಿಮಾಗಳು ಪ್ರಯೋಗಾತ್ಮಕ ಹಿನ್ನೆಲೆಯಲ್ಲಿ ಮೂಡಿಬಂದಿವೆ ಅನ್ನುವುದು ವಿಶೇಷ.

ಸುನಿ ನಿರ್ದೇಶನದ 'ಬಹುಪರಾಕ್' ಚಿತ್ರದಲ್ಲೂ ಇವರು ವಿಭಿನ್ನ ಪಾತ್ರ ಮಾಡಿದ್ದರು. ಇವರ ಪಾತ್ರದ ಬಗ್ಗೆ ಮೆಚ್ಚುಗೆಯ ಮಾತೂ ಕೇಳಿಬಂದಿತ್ತು. ಈಗ ವೆಂಕಟಾಚಲ ನಿರ್ದೇಶನದ 'ಸುಡುವ ಭೂಮಿ' ಸಿನಿಮಾಗೆ ನಾಯಕಿ ಆಗಿ ಸುದ್ದಿ ಆಗಿದ್ದಾರೆ.

ಈ ಚಿತ್ರದ ಕತೆ ಉತ್ತರ ಕರ್ನಾಟಕದ ಜ್ವಲಂತ ಸಮಸ್ಯೆಯಾಗಿ ಕಾಡುತ್ತಿರುವ 'ಗುಳೆ ಹೋಗುವವರ' ಬದುಕಿನ ಸುತ್ತ ಹೆಣೆದುಕೊಂಡಿದೆ. ಅಲ್ಲದೇ ಜುಗಾರಿ ಅರವಿಂದ್ ನಿರ್ದೇಶನದಲ್ಲಿ ಮೂಡಿಬಂದಿದೆ. ಮತ್ತೊಂದು ಸಿನಿಮಾ 'ಲಾಸ್ಟ್ ಬಸ್'ನಲ್ಲೂ ಇವರು ನಟಿಸುತ್ತಿದ್ದಾರೆ. ದೇವರನ್ನು ನಂಬುವವರು ದೆವ್ವವನ್ನು ನಂಬುತ್ತಾರೆ. ದೆವ್ವಗಳು ಇವೆ ಅನ್ನೋರು ಸ್ವಲ್ಪ ಜನರಾದರೆ, ಇಲ್ಲ ಅನ್ನೋರು ಇನ್ನೊಂದಿಷ್ಟು ಜನ. ಈ ದ್ವಂದ್ವದ ಸುತ್ತ ಸಿನಿಮಾದ ಕತೆ ಇದೆಯಂತೆ.

ಈಗಾಗಲೇ 'ಕೌದಿ' ಎನ್ನುವ ಮತ್ತೊಂದು ಕಲಾತ್ಮಕ ಚಿತ್ರಕ್ಕೆ ಬಣ್ಣ ಹಚ್ಚಿದ ಹೆಗ್ಗಳಿಕೆ ಇವರದ್ದು. ಇದು ಕೂಡ ಉತ್ತರ ಕರ್ನಾಟಕದ ಜನಜೀವನ ಕುರಿತಾದ ಸಿನಿಮಾ. ಬಿ.ಜಯಶ್ರೀ ಈ ಚಿತ್ರದಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದ್ದಾರೆ. ಅಲ್ಲದೇ ತೆರೆಗೆ ಬರಲು ಸಿದ್ಧವಾಗಿರುವ 'ದೇವರ ನಾಡಲ್ಲಿ' ಸಿನಿಮಾದಲ್ಲೂ ಇವರು ವಿಭಿನ್ನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಇದು ಬಿ.ಸುರೇಶ ನಿರ್ದೇಶನದಲ್ಲಿ ಮೂಡಿಬಂದ ಚಿತ್ರ.



ಪುನೀತ್ ಚಿತ್ರದಲ್ಲಿ ಭಾರ...

ಹಲವು ಕಾರಣಗಳಿಂದಾಗಿ 'ದೊಡ್ಮನೆ ಹುಡುಗ' ಚಿತ್ರ ಕುತ... ಮೂಡಿಸುತ್ತಿದೆ. ಪುನೀತ್ ಮುಖ್ಯ ಭೂಮಿಕೆಯ ಈ ಸಿನಿಮಾದಲ್ಲಿ ಅಂಬ... ಮತ್ತು ಸುಮಲತಾ ಗಂಡಹೆಂಡತಿಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಜತೆಗೆ ... ವಿಷ್ಣುವರ್ಧನ್ ಕೂಡ ಈ ಚಿತ್ರಕ್ಕಾಗಿ ಬಣ್ಣ ಹಚ್ಚುತ್ತಿದ್ದಾರೆ. ಪುನೀತ್... ಇವರು ನಟಿಸುತ್ತಿರುವುದು ಇದೇ ಮೊದಲೇನೂ ಅಲ್ಲ. ಈಗಾಗಲೇ '... ಹೆಸರಿನ ಚಿತ್ರದಲ್ಲಿ ಭಾರತಿ ಅವರು ಹಾಡೊಂದರಲ್ಲಿ ಕಾಣಿಸಿಕೊಂಡ... ಈಗ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ.

ಈಗಾಗಲೇ ಈ ಸಿನಿಮಾಕ್ಕೆ ಹುಬ್ಬಳ್ಳಿ, ಬೆಂಗಳೂರು ಸೇರಿದಂತೆ ... ಕಡೆ ಶೂಟಿಂಗ್ ಆಗಿದೆ. ಸದ್ಯ ಇಡೀ ತಂಡ ಮೈಸೂರಿನಲ್ಲಿ ಬೀಡು ...

ಸೂರಿ ಮತ್ತು ಪುನೀತ್ ಜತೆಯಾದರೆ, ಅಲ್ಲೊಂದು ಅಚ್ಚರಿ ಕಾದಿರ... 'ದೊಡ್ಮನೆ ಹುಡುಗ' ಸಿನಿಮಾದಲ್ಲೂ ಸಾಕಷ್ಟು ಅಚ್ಚರಿಗಳು ಇವೆ ಎನ್ನಲಾಗ... ಅಲ್ಲದೇ ಪುನೀತ್ ಈ ಚಿತ್ರದಲ್ಲಿ ಈವರೆಗೂ ಮಾಡಿರದ ಪಾತ... ಪೋಷಿಸಿದ್ದಾರೆ. ಅದಕ್ಕಾಗಿ ಬರೋಬ್ಬರಿ ಎರಡು ತಿಂಗಳು ತರಬೇತಿ ಪಡೆದ... 'ಹುಡುಗ್ರು' ಸಿನಿಮಾದ ನಂತರ ರಾಧಿಕಾ ಪಂಡಿತ್ ಮತ್ತೆ ಪುನ... ಜತೆಯಾಗಿದ್ದಾರೆ.



ಲವ್ ಕಿತಾಬ್
ದುನಿಯಾ ರಶ್ಮಿ

ಕಿತಾಬ್‌ಗೆ ಡಿಮಾಂಡ...

'ದುನಿಯಾ' ರಶ್ಮಿ ಮುಖ್ಯ ಭೂಮಿಕೆಯ 'ಲವ್ ಕಿತಾಬ್' ... ಬೇಡಿಕೆ ಬಂದಿದೆ. ಈ ಚಿತ್ರವನ್ನು ತೆಲುಗು ಮತ್ತು ತಮಿಳಿನಲ್ಲಿ ... ಮಾಡಲು ನಿರ್ಮಾಪಕರು ಮುಂದೆ ಬಂದಿದ್ದಾರೆ. ಇನ್ನೂ ಸಿ... ಬಿಡುಗಡೆಯೇ ಆಗಿಲ್ಲ; ಆಗಲೇ ತಮ್ಮ ಸಿನಿಮಾಗೆ ... ಬಂದಿದ್ದು ನಿರ್ದೇಶಕ ವಿಶಲ್‌ಗೆ ಖುಷಿ ತಂದಿದೆ. ಸದ... ಸಿನಿಮಾ ತೆಲುಗಿಗೆ ಡಬ್ ಆಗುತ್ತಿದೆ. ನಂತರ ತಮಿ... ಇದು ಡಬ್ ಆಗಲಿದೆಯಂತೆ. ಎಲ್ಲವೂ ಅಂದುಕೊಂಡಂತೆ ನ... ಮೂರೂ ಭಾಷೆಗಳಲ್ಲಿ ಏಕಕಾಲಕ್ಕೆ ಸಿನಿಮಾ ಬಿಡುಗಡೆ ಮಾಡ... ಅಂದಿದ್ದಾರೆ ನಿರ್ದೇಶಕರು.

ಹೊಸಬರ ಚಿತ್ರವೊಂದು ಮೂರೂ ಭಾಷೆಗಳಲ್ಲಿ ಏಕಕಾಲಕ್ಕೆ ಬಿ... ಆಗುತ್ತಿರುವುದು ಇದೇ ಮೊದಲು. ಇದೊಂದು ಯೂನಿವರ್ಸಲ... ಆಗಿರುವುದರಿಂದ, ಎಲ್ಲಾ ಭಾಷೆಯ ನೇಟಿವಿಟಿಗೆ ತಕ್ಕಂತೆ ಇರುವುದ... ಚಿತ್ರವು ತೆಲುಗು ಮತ್ತು ತಮಿಳು ಭಾಷೆಗೆ ಡಬ್ ಆಗಲು ... ನಿರ್ಮಾಪಕರು ಒಪ್ಪಿದ್ದಾರಂತೆ.

ಇದು ಸಾಗರದಲ್ಲಿ ನಡೆದ ಸತ್ಯಕಥೆಯೊಂದನ್ನು ಆಧರಿಸಿದ ಸಿ... ಚಿತ್ರಕ್ಕೆ ತಕ್ಕಂತೆ ಒಂದಿಷ್ಟು ಬದಲಾವಣೆ ಮಾಡಿಕೊಂಡಿದೆ ಸಿ... ತಂಡ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com